

ಗೌರಿ ಲಂಕೇಶರ

ಲಂಕೇಶ್

ಸೆಪ್ಟೆಂಬರ್ 13, 2006 ಬೆಲೆ ರೂ. 10/- ◆ ರಂಜನೆ ◆ ಬೋಧನೆ ◆ ಪ್ರಬೋಧನೆ



ಅಳಿಯನ 45 ಕೋಟಿ ಹೃದಯ ಸಾಮ್ರಾಜ್ಯ!



ರೇಪಿಸ್ಟಿಗೆ ಪ್ರಕಾಶ್ ಮಗನ ರಕ್ಷಣೆ



ಸಾರಿಗೆ ಇಲಾಖೆ ಸಾರಿಸಲೊಬ್ಬ ನಾರಾಯಣಗೌಡ



ಸಿದ್ಧರಾಮಯ್ಯ ಸಂದರ್ಶನ

'ಸೋಲಿಸೋರು ಯಾರು?'

ಧಾರವಾಡ ವಿವಿ ಸೆಕ್ಸ್ ಸ್ಕ್ಯಾಂಡಲ್

ದಲಿತನ ವಿರುದ್ಧ ಲಿಂಗಾಯತರ ತಂತ್ರ!

ಬಂಗಲೆಗಳು ಬೆಳೆಯುತಿವೆ..ಗುಡಿಸಲುಗಳು ಕೊರಗುತಿವೆ..!



ಗುಡಿಸಲುಗಳು ಗುಡುಗುತಿವೆ-ಬಂಗಲೆಗಳು ನಡುಗುತಿವೆ ಎಂಬ ಆಶಯ 70ರ ದಶಕದುದ್ದಕ್ಕೂ ನಮ್ಮೆಲ್ಲರ ಆಶಯವಾಗಿತ್ತು. ಕಳೆದೆರಡು ದಶಕಗಳಲ್ಲಿ ಬಂಗಲೆಗಳು ನಡುಗಲಿಲ್ಲ. ಏಕೆಂದರೆ ಗುಡಿಸಲುಗಳು ಗುಡುಗಲಿಲ್ಲ, ಬದಲಿಗೆ ಬಂಗಲೆಗಳು ಮಾತ್ರ ಅವಿರತವಾಗಿ ಬೆಳೆಯುತ್ತಲೇ ಇವೆ. ಗುಡಿಸಲುಗಳು ಗುಡುಗಲು ಒಟ್ಟು ಧ್ವನಿ ಬೇಕು. ಧ್ವನಿ ಒಟ್ಟಾಗಬೇಕು. ಒಟ್ಟುಗೂಡಿಸಬೇಕು. ಆದರೆ ಒಟ್ಟುಗೂಡಿಸಬೇಕಿದ್ದವರೆ ಒಬ್ಬೊಬ್ಬರಾಗಿ ಬಂಗಲೆ ಸೇರುತ್ತಿದ್ದಂತೆ ಬಂಗಲೆಗಳು ಗುಡಿಸಲುಗಳ ವಿರುದ್ಧ ಅಟ್ಟಹಾಸ ಮಾಡುತ್ತಿವೆ. ವೈಭವದ ಅಸಹ್ಯ ಪ್ರದರ್ಶನ ಮಾಡುತ್ತಿವೆ. ಮೊನ್ನೆ ಬೆಂಗಳೂರಿನ ರಾಜಭವನ ರಸ್ತೆಯಲ್ಲಿ 15 ಬಂಗಲೆಗಳ ಆಕಾಶಚುಂಬಿ ಮಹಲುಗಳು ತಲೆ ಎತ್ತಿವೆ. ಒಂದೊಂದಕ್ಕೆ 9ಕೋಟಿ ರೂಪಾಯಿ ಬೆಲೆಯಂತೆ. ಅಷ್ಟು ಮಾತ್ರವಲ್ಲ, ಪ್ರತಿತಿಂಗಳು 50000 ರುಪಾಯಿ ಮೆಂಟೆನೆನ್ಸ್ ಶುಲ್ಕ ಕಟ್ಟಬೇಕಂತೆ.. 50000 ರುಪಾಯಿ ತಿಂಗಳಿಗೆ.. ಇದೇ ಬೆಂಗಳೂರಿನಲ್ಲಿ ಅಷ್ಟು ಹಣ ಶೇ.40ರಷ್ಟು ಜನರ ವಾರ್ಷಿಕ ಆದಾಯ.. ಇಷ್ಟು ಸಂಪತ್ತು ಎಲ್ಲಿಯದು? ಅದರಲ್ಲಿರುವ 15 ಕುಟುಂಬಗಳಲ್ಲಿ 12 ಕುಟುಂಬಗಳು ಐ.ಟಿ. ಮತ್ತು ಗಾರ್ಮೆಂಟ್ಸ್ ಕ್ಷೇತ್ರದವು. ಅಂದರೆ ಗುಡಿಸಲುಗಳನ್ನು ನೆಲಸಮಮಾಡಿ, ಗುಡಿಸಲುವಾಸಿಗಳಿಗೆ ಸಿಗಬೇಕಿದ್ದ ಕನಿಷ್ಠ ಸೌಲಭ್ಯಗಳನ್ನು ಕಿತ್ತುಕೊಂಡು ತಮ್ಮ ಸಂಪತ್ತನ್ನು ಹೆಚ್ಚಿಸಿಕೊಂಡಿದ್ದರಿಂದ ಕುಬೇರರಾದವರು. ಇಷ್ಟೆಲ್ಲಾ ನಡೆಯುವಾಗ ಗುಡುಗಬೇಕಾದ ಆಕ್ರೋಶವನ್ನು ಗೋಳಾಡುವ ಆರ್ತತೆಗೆ ಇಳಿಸಿ, ಸಂಪತ್ತಿನ ಮೇಲಿನ ಹಕ್ಕಿನ ವಿಷಯವನ್ನು ಬಿಡಿಗಾಸು ಬೇಡುವ ದೈನ್ಯಕ್ಕಿಳಿಸಿ ತಮಗೆ ಮಾತ್ರ ಬಂಗಲೆಗಳನ್ನು ಕಟ್ಟಿಕೊಂಡವರ ಗುಡಿಸಲ ದ್ರೋಹವೂ ಸೇರಿದೆ. ಈ ವಲ್ಗರ್ ಬಂಗಲೆಗಳ ಬೆಂಗಳೂರು ಬದಲಾಗಬೇಕೆಂದರೆ ಈಗಲಾದರೂ ಬೆಂಗಳೂರಿನ ಗುಡಿಸಲುಗಳು ಗುಡುಗಲೇಬೇಕಿದೆ.

No Comments

"ಗೌಡರು ಎನ್.ಡಿ.ಎ.ಗೆ ಹತ್ತಿರ ಬರ್ತಿದ್ದಾರೆ"
-ಯಡಿಯೂರಪ್ಪ

"ರೆಡ್ಡಿ ಜತೆ ಮಾತಾಡಲು ಹೇಳಿದ್ದೇ ಸದಾನಂದ ಗೌಡ್ರು"
-ಅರವಿಂದ ಲಿಂಬಾವಳಿ, ಬಿಜೆಪಿ ಶಾಸಕ.



"ರಾಮಾವತಾರದಲ್ಲಿ ಭಗವಂತ ಎಲ್ಲರಿಂದ ಸೇವೆ ಮಾಡಿಸಿಕೊಂಡ, ಕೃಷ್ಣಾವತಾರದಲ್ಲಿ ಎಲ್ಲರಿಗೂ ಸೇವೆ ಮಾಡಿದ"
-ಪೇಜಾವರ ಸ್ವಾಮಿಜಿ



"ನಮ್ಮ ಪಕ್ಷದಲ್ಲಿ ಅಸಮಾಧಾನವಿದೆ. ಭಿನ್ನಮತವಿಲ್ಲ"
ಚೆಲುವರಾಯ ಸ್ವಾಮಿ, ಜೆಡಿಎಸ್ ಮಂತ್ರಿ

"ಲೋಕಾಯುಕ್ತದ ಒಳಗೂ ಭ್ರಷ್ಟಾಚಾರವಿದೆ"
-ಬಸವನಗೌಡ, ಉಪಲೋಕಾಯುಕ್ತ

ಆಚಾರ್ಯ ದೇವೊ ಭವ- ABVP ಸ್ಟೈಲ್...

ಭಾರತ ಸಂಸ್ಕೃತಿಯ ಮಹಾರಕ್ಷಕರು ಎನ್ನುವ ಸಂಘ ಪರಿವಾರ ತಮ್ಮ ಪ್ರಕಾರ ಭಾರತ ಸಂಸ್ಕೃತಿ ಅಂದರೇನೆಂದು ಮತ್ತೊಮ್ಮೆ ಸಾಬೀತು ಮಾಡಿದ್ದಾರೆ. ಮಾತೆತ್ತಿದರೆ ಮಾತೃದೇವೊ ಭವ ಎನ್ನುವ ಈ ಆಷಾಢಭೂತಿಗಳು ಆ ದೇವತೆಗಳೆಂದರೆ ರಂಭೆ, ಊರ್ವಶಿ ಮತ್ತು ಮೇನಕೆ ಎಂದೇ ಅಂದುಕೊಂಡಿರುವಂತಿದೆ. ಇಲ್ಲವೆಂದರೆ ಇಡಿ ಜಗತ್ತಿನಲ್ಲಿ ಎಲ್ಲೂ ಇಲ್ಲದಷ್ಟು ಹೆಣ್ಣುಮಕ್ಕಳ ಮೇಲಿನ ಅತ್ಯಾಚಾರ ಭಾರತದಲ್ಲೇಕೆ ಸಂಭವಿಸುತ್ತಿತ್ತು. ಅಷ್ಟು ಮಾತ್ರವಲ್ಲ, ಈ ದೇವತೆಗಳ ಬೆತ್ತಲೆ ಚಿತ್ರ ತೆಗೆದು ಊರಿಗೆಲ್ಲಾ ವಿಡಿಯೋ ಹಂಚಿದುದ್ದೇ ದೇವೋಭವ ಎಂದವರು ಜಲಗಾಂವಿನ ಬಜರಂಗ ಬಲಿಗಳೇ.. ಬಾಯ್ಬಿಟರೆ ಪಿತೃದೇವೋ ಭವ ಎನ್ನುವ ಈ ಸಂಸ್ಕೃತಿ ಪೋಷಕರು ಸಾವಿರಾರು ರೈತಣ್ಣರು ಸಾಯುತ್ತಿದ್ದರೆ ಅದಕ್ಕೆ ತುಟಿಪಿಟಿಕ್ ಎಂದಿದ್ದರೆ ಸರಿ. ಇದೀಗ ಭಾರತ ಈ ಪಿತೃಗಳಿಗೆ ಇನ್ನು ಮುಂದೆ ಪಿಂಚಣಿ ಕೊಡಲಾಗುವುದಿಲ್ಲವೆಂದು ಸರ್ಕಾರ ಐ.ಎಮ್.ಎಫ್. ಅಣತಿಯ ಪ್ರಕಾರ ಹೊಸ ಕಾನೂನುಗಳನ್ನು ಮಾಡುತ್ತಿದ್ದರೂ ಮಾತೆತ್ತದ ಮಕ್ಕಳಿವರು. ಇವರು ನಿಜಕ್ಕೂ ಪಿತೃವಾಕ್ಯ ಪರಿಪಾಲಕರೇ.. ಒಂದೇ ವ್ಯತ್ಯಾಸವೆಂದರೆ ಅವರ ಪಿತೃಗಳು ಅಮೆರಿಕದಲ್ಲಿರುತ್ತಾರಷ್ಟೆ..ಇದೀಗ ಶಿಕ್ಷಕರ ಸರದಿ..!

ತಮ್ಮದು ಪಾಶ್ಚಾತ್ಯ ಸಂಸ್ಕೃತಿಯಲ್ಲ, ಅಲ್ಲಿ ಗುರುಗಳನ್ನು ಸ್ನೇಹಿತರಂತೆ ನೋಡುತ್ತಾರೆ. ನಮ್ಮದು ಗುರುಕುಲ ಸಂಸ್ಕೃತಿ. ಆಚಾರ್ಯದೇವೋ ಭವ ಎಂದು ಗುರುಗಳನ್ನು ದೇವರಂತೆ ಕಾಣುವ ಸಂಸ್ಕೃತಿ ಎಂದು ಭಾಷಣ ಮಾಡುವ ಈ ಶಿಷ್ಯೋತ್ತಮರು ಮೊನ್ನೆ ಒಬ್ಬ ಗುರುವಿಗೆ ಸೀದಾ ಮೋಕ್ಷವನ್ನೇ ಕರುಣಿಸಿಬಿಟ್ಟರು..! ಮಧ್ಯಪ್ರದೇಶದ ಉಜ್ಜಯನಿಯಲ್ಲಿ ಕಾಲೇಜೊಂದರಲ್ಲಿ ನಡೆಯಬೇಕಿದ್ದ ಚುನಾವಣೆಯಲ್ಲಿ ಈ ಭಾರತ ಸಂಸ್ಕೃತಿಯ ಹರಿಕಾರರೆನ್ನುವ ABVP ಗೂ NSUI ಗೂ ಕದನವೇ ನಡೆದಿತ್ತು. ಇದನ್ನೆಲ್ಲಾ ಕಂಡ ಗುರುಗಳೊಬ್ಬರು ಚುನಾವಣೆಯನ್ನು ರದ್ದುಗೊಳಿಸಿದರು. ತಮ್ಮದು ಗುರುಕುಲ ಸಂಸ್ಕೃತಿ ಎನ್ನುವ ಈ 'ಭಾರತೀಯ' ವಿದ್ಯಾರ್ಥಿ ಪರಿಷತ್ತಿನ ರಾಜ್ಯ ನಾಯಕರಾದ ತೋಮರ್ ಮತ್ತು ಅಖೀಲಾ, (ಈತ ಸ್ವಯಂ ಒಬ್ಬ ಶಿಕ್ಷಕನಂತೆ),



ಚುನಾವಣೆಯನ್ನು ಮುಂದೂಡಿದ ತಪ್ಪಿಗೆ ಸಭರ್ವಾಲ್ ಎಂಬ ಗುರುಗಳನ್ನು ಹೊಡೆದು ಹೊಡೆದು ಕೊಂದು ಹಾಕಿದರು. ಇದೇ ಅವರು ಪ್ರತಿಪಾದಿಸುತ್ತಿರುವ ಭಾರತ ಸಂಸ್ಕೃತಿಯ ನಿಜರೂಪ. ಎಲ್ಲಾ ದೇವರುಗಳು ಸ್ವರ್ಗದಲ್ಲೇ ಇರಬೇಕಲ್ಲವೇ.. ಆದ್ದರಿಂದಲೇ ಮಾತಾ, ಪಿತೃ ಮತ್ತು ಆಚಾರ್ಯಗಳಿಗೆಲ್ಲಾ ಈ ಭಕ್ತರು ಸ್ವರ್ಗದ ದಾರಿ ತೋರಿಸುತ್ತಿರಬಹುದೇ..?

ಚಾರ್ವಾಕ
- ಶಿವಸುಂದರ್-

ನಂಬಿದ್ರೆ ನಂಬಿ ಬಿಟ್ರೆ ಬಿಡಿ:

"ಜೆಡಿಎಸ್ ಭ್ರಷ್ಟ ಎಂಬ ಅಭಿಪ್ರಾಯ ಜನರಲ್ಲಿ ಇಲ್ಲ"
-ಯಡಿಯೂರಪ್ಪ

"ಮೂರು ವರ್ಷಗಳಲ್ಲಿ ರಾಜ್ಯಾದ್ಯಂತ ದಿನವಿಡೀ ಮೂರು ಫೇಸ್ ವಿದ್ಯುತ್ ಒದಗಿಸಲಾಗುವುದು"
-ಹೆಚ್.ಡಿ. ರೇವಣ್ಣ

"ಥಾರ್ ಮರುಭೂಮಿಯಲ್ಲಿ ಪ್ರವಾಹ"
-ಪತ್ರಿಕಾ ವರದಿ

"ಐದು ವರ್ಷಗಳಲ್ಲಿ 6.31 ಲಕ್ಷ ಉದ್ಯೋಗ ಸೃಷ್ಟಿ"
-ರಾಜ್ಯ ಸರ್ಕಾರದ ಘೋಷಣೆ.



"9/11 ರ ಪ್ರಕರಣದಲ್ಲಿ ಅಮೆರಿಕ ಲಾಡೆನ್‌ನನ್ನು ಆರೋಪಿಯನ್ನಾಗಿ ಹೆಸರಿಸಿಲ್ಲ"
-ಪತ್ರಿಕಾ ವರದಿ

"ನನಗೆ ಲಷ್ಕರ್ ಇಂದ ಬೆದರಿಕೆ ಇತ್ತು, ಅದಕ್ಕೆ ಪಿಸ್ತೂಲು ಇಟ್ಟುಕೊಂಡಿದ್ದೆ"
-ಸಿ.ಎಂ.ಇಬ್ರಾಹಿಂ

ಬಲೂಚಿಸ್ತಾನದ ಬುಗ್ತಿಯನ್ನು ಕೊಂದಿದ್ದಕ್ಕೆ ಬಿಜೆಪಿಗೇಕೆ ಕಣ್ಣೀರು?



ಪಾಕಿಸ್ತಾನದ ಬಲೂಚಿಸ್ತಾನದಲ್ಲಿ ಬಲೂಚಿ ಜನಾಂಗದ ನಾಯಕ ಬುಗ್ತಿಯನ್ನು ಮೊನ್ನೆ ಪಾಕಿಸ್ತಾನದ ಸೈನ್ಯ ಶತ್ರು ದೇಶದ ಮೇಲೆ ದಾಳಿ ಮಾಡುವಂತೆ ವೈಮಾನಿಕ ದಾಳಿ ನಡೆಸಿ ಬರ್ಬರವಾಗಿ ಕೊಂದುಹಾಕಿದೆ. ಅಂದಿನಿಂದ ಇಂದಿನವರೆಗೂ ಇಡೀ ಬಲೂಚಿಸ್ತಾನ ಹೊತ್ತಿ ಉರಿಯುತ್ತಿದೆ. ಪಾಕಿಸ್ತಾನದ ವಿರುದ್ಧ ಬಲೂಚಿ ಜನರ ಆಕ್ರೋಶ ಮುಗಿಲು ಮುಟ್ಟಿದೆ. ಈ ಹತ್ಯೆಯಿಂದ ಈ ಮಧ್ಯೆ ಸ್ವಲ್ಪ ತಣ್ಣಗಾಗಿದ್ದ ಬಲೂಚಿ ಜನತೆಯ ವಿಮೋಚನಾ ಹೋರಾಟ ಮತ್ತೆ ಕಸುವು ಪಡೆದುಕೊಂಡಿದೆ.

ಗುಟ್ಟು

ಬುಗ್ತಿ ಬಲೂಚಿ ಜನರ ನಾಯಕ. ಭಾರತದ ರಾಜಕಾರಣಿಗಳು ಕಾಶ್ಮೀರಿ ಹೋರಾಟಗಾರರ ಬಗ್ಗೆ ಹೇಳಲು ಅನುಸರಿಸುವ ಮಾನದಂಡಗಳನ್ನೇ ಇಟ್ಟುಕೊಂಡು ಹೇಳುವುದಾದರೆ ಒಬ್ಬ ಭಯೋತ್ಪಾದಕ. ಬಿಜೆಪಿ ಅನುಸರಿಸುವ ಮಾನದಂಡಗಳನ್ನು ಇಟ್ಟುಕೊಂಡು ಹೇಳುವುದಾದರೆ ದೇಶದ್ರೋಹಿ, ವಿಚ್ಛಿದ್ರಕಾರಿ. ಆದರೆ ಮೊನ್ನೆ ಬುಗ್ತಿ ಕೊಲೆಯ ಬಗ್ಗೆ ಹೇಳಿಕೆ ನೀಡಿರುವ ಬಿಜೆಪಿ ಪಕ್ಷದ ವಕ್ತಾರ ರವಿಶಂಕರ್ ಬುಗ್ತಿ ಒಬ್ಬ ಭಯೋತ್ಪಾದಕನಲ್ಲ, ಬದಲಿಗೆ ಒಬ್ಬ ಹೋರಾಟಗಾರ, ಸ್ವಾತಂತ್ರ್ಯ ಯೋಧ. ಏನಿದು ಬಿಜೆಪಿಯ ಡಬಲ್ ಸ್ಟಾಂಡರ್ಡ್?

ಒಂದು ಪ್ರಭುತ್ವದ ವಿರುದ್ಧ ಸಶಸ್ತ್ರವಾಗಿ ಹೋರಾಡುವ, ಅದರಲ್ಲೂ ತನ್ನ ಜನಾಂಗದ ಮೇಲೆ ಒಂದು ದೇಶದ ಸಾರ್ವಭೌಮತ್ವವನ್ನೇ ಪ್ರಶ್ನಿಸುವ ಮತ್ತು ತನ್ನ ಜನಾಂಗದ ಸಾರ್ವಭೌಮತ್ವಕ್ಕಾಗಿ ಹೋರಾಡುವ ಎಲ್ಲರೂ ಅವರ ಕಣ್ಣಲ್ಲಿ ದೇಶದ್ರೋಹಿಗಳೇ ಆಗಬೇಕಲ್ಲವೇ? ಅದೇ ಮಾನದಂಡಗಳನ್ನೇ ಅಲ್ಲವೇ ಅವರು ಕಾಶ್ಮೀರಕ್ಕೂ, ಈಶಾನ್ಯ ಭಾರತಕ್ಕೂ ಅನ್ವಯಿಸುತ್ತಿರುವುದು? ಹಾಗಿದ್ದಲ್ಲಿ ಬಿಜೆಪಿ ಬುಗ್ತಿ ಸಾವಿಗೆ ಕಣ್ಣೀರಿಡುತ್ತಿರುವುದೇಕೆ? ಅಷ್ಟು ಮಾತ್ರವಲ್ಲ, ಭಾರತ ಸರ್ಕಾರವೂ ಅದೇ ದನಿಯಲ್ಲಿ ಬುಗ್ತಿ ಜನನಾಯಕನೆಂದು ಬಿಂಬಿಸುತ್ತಿರುವುದೇಕೆ? ಏನಿದರ ಗುಟ್ಟು..?

ಬಂದೂಕು ಬುಗ್ತಿಯದು.... ಗುಂಡು ಭಾರತದ್ದು!

ಭಾರತ ಮತ್ತು ಪಾಕಿಸ್ತಾನ ದೇಶಗಳೆರಡರ ಹುಟ್ಟಿನಲ್ಲೇ ತನ್ನನ್ನು ಒಪ್ಪದ ಜನಾಂಗಗಳನ್ನು ದಮನಿಸಿ ಒಟ್ಟು ಸೇರಿಸಿ ಒಕ್ಕೂಟ ಕಟ್ಟುವ ಅಪ್ರಜಾತಾಂತ್ರಿಕ, ದಮನಕಾರಿ ಪ್ರವೃತ್ತಿ ಇದೆ. ಭಾರತದಲ್ಲಿ ಕಾಶ್ಮೀರ ಮತ್ತು ಈಶಾನ್ಯ ಭಾರತದ ಜನರ ಅವರ ಒಪ್ಪಿಗೆಗೆ ವಿರುದ್ಧವಾಗಿ ಸೈನಿಕ ಕಾರ್ಯಾಚರಣೆಯ ಮೂಲಕ ಹಿಡಿದಿಡಲ್ಪಟ್ಟರೆ ಪಾಕಿಸ್ತಾನದಲ್ಲಿ ಅದು ಬಲೂಚಿಸ್ತಾನ, ವಜೀರಸ್ಥಾನ ಹಾಗೂ ಇನ್ನಿತರ ರಾಷ್ಟ್ರೀಯತೆಗಳ ಕ್ರೂರ ದಮನದ ಸ್ವರೂಪವನ್ನು ಪಡೆದುಕೊಂಡಿತು.

ರಟ್ಟು

ಎರಡು ಪ್ರಭುತ್ವಗಳು ಆಯಾ ಜನಾಂಗಗಳ ಪ್ರಜಾತಾಂತ್ರಿಕ ಆಶೋತ್ತರಗಳಿಗೆ ಕಿಂಚಿತ್ತೂ ಕಿವಿಗೊಡದೆ ದಶಕಗಳುದ್ದಕ್ಕೂ ದಮನವನ್ನೇ ಮುಂದುವರೆಸಿವೆ. ಭಾರತ ಪ್ರಭುತ್ವ ಕಾಶ್ಮಿರ ಮತ್ತು ಈಶಾನ್ಯ ಭಾರತದಲ್ಲಿ ಭಾರತದ ನಕ್ಷೆಯನ್ನು ಉಳಿಸಿಕೊಳ್ಳುವ ಸಲುವಾಗಿ ಅಲ್ಲಿನ ಜನರ ಮೇಲೆ ನಡೆಸಿರುವ ಕ್ರೌರ್ಯ ಭಾರತವನ್ನು ಒಂದು ನಾಗರಿಕತೆ ಎಂದೇ ಕರೆಯಲು ಅನುಮಾನಿಸುವಷ್ಟಾದರೆ ಇದರಲ್ಲಿ ಪಾಕಿಸ್ತಾನದ ರೆಕಾರ್ಡೇನೂ ಕಡಿಮೆ ಇಲ್ಲ. ಬಲೂಚಿಗಳು ಪಾಕಿಸ್ತಾನ ರಾಷ್ಟ್ರಪ್ರಭುತ್ವದ ಬರ್ಬರ ಬಲಿಪಶುಗಳು..



ಆದರೆ ದಮನದ ಮೂಲಕ ಯಾವ ಜನಾಂಗವನ್ನಾಗಲೀ, ರಾಷ್ಟ್ರೀಯತೆಗಳನ್ನಾಗಲೀ, ದೇಶಗಳನ್ನಾಗಲೀ ಹಿಡಿದಿಟ್ಟುಕೊಳ್ಳಲಾಗುವುದಿಲ್ಲ. ಅದನ್ನೇ ಕಳೆದ ಐದು ದಶಕಗಳಲ್ಲಿ ಕಾಶ್ಮೀರ ಮತ್ತು ಈಶಾನ್ಯ ಭಾರತಗಳು ಭಾರತದ ಪ್ರಭುತ್ವಕ್ಕೂ, ಬಲೂಚಿ ಹಾಗೂ ಇನ್ನಿತರ ರಾಷ್ಟ್ರೀಯತೆಗಳು ಪಾಕಿಸ್ತಾನ ಪ್ರಭುತ್ವಕ್ಕೂ ತೋರಿಸಿಕೊಟ್ಟಿವೆ. ಆದರೆ ಭಾರತ ಮತ್ತು ಪಾಕಿಸ್ತಾನಗಳೆರಡು ಪಕ್ಕದ ದೇಶದಲ್ಲಿ ನಡೆಯುತ್ತಿರುವ ಹೋರಾಟಗಳನ್ನು ತನ್ನ ವ್ಯೂಹಾತ್ಮಕ ಉದ್ದೇಶಗಳಿಗೆ ಬಳಸಿಕೊಂಡಿವೆ. ಕಾಶ್ಮೀರಿಗಳ ಹೋರಾಟದಲ್ಲಿ ಪಾಕಿಸ್ತಾನ ತಲೆದೂರಿಸುತ್ತಿರುವುದು, ಅಲ್ಲಿನ ರಕ್ತಪಾತಕ್ಕೆ ಮಾತ್ರವಲ್ಲದೆ ಹೋರಾಟವನ್ನು ದಾರಿ ತಪ್ಪಿಸುತ್ತಿರುವುದು ಪ್ರತಿ ಭಾರತೀಯನೂ ಬಲ್ಲ.

ಆದರೆ ಭಾರತೀಯರಾದ ನಮಗೆ ಗೊತ್ತಿಲ್ಲದ ಸಂಗತಿಯೇನೆಂದರೆ ಭಾರತ ಪ್ರಭುತ್ವ ಪಕ್ಕದ ಶ್ರೀಲಂಕಾದಲ್ಲಿ ನೇಪಾಳದಲ್ಲಿ, ಬಾಂಗ್ಲಾದೇಶದಲ್ಲಿ ಮತ್ತು ಪಾಕಿಸ್ತಾನದಲ್ಲಿ ನಡೆಯುತ್ತಿರುವ ಹೋರಾಟಗಳನ್ನು ತನ್ನ ವ್ಯೂಹಾತ್ಮಕ ಉದ್ದೇಶಗಳಿಗೆ ಬಳಸಿಕೊಂಡು ರಕ್ತಪಾತದ ಇತಿಹಾಸಕ್ಕೆ ಕಾರಣವಾಗುತ್ತಿರುವುದು. ಎರಡು ದೇಶಗಳೂ ಪಕ್ಕದ ದೇಶದ ಪ್ರಭುತ್ವದ ವಿರುದ್ಧ ನಡೆಯುವ ವಿಮೋಚನಾ ಹೋರಾಟಗಳಲ್ಲಿ ತಮ್ಮ ಏಜೆಂಟರನ್ನು ಅರ್ಥಾತ್ ದ್ರೋಹಿಗಳನ್ನು ಬೆಳೆಸುತ್ತದೆ. ಆ ಮೂಲಕ ಅಲ್ಲಿ ಅಸ್ಥಿರತೆ ಸೃಷ್ಟಿಸಿ ಅದರ ಲಾಭವನ್ನು ಪಡೆದುಕೊಳ್ಳಲು ಯತ್ನಿಸುತ್ತದೆ.

ಕಾಶ್ಮಿರದಲ್ಲಿ ಪಾಕಿಸ್ಥಾನ ಮಾಡುತ್ತಿರುವುದೂ ಅದೇ. ಈಗ ಭಾರತ ಬಲೂಚಿಸ್ಥಾನದಲ್ಲಿ ಮಾಡಬಯಸುತ್ತಿರುವುದೂ ಅದೇ. ಬಲೂಚಿಸ್ಥಾನ ಭಾರತವನ್ನು ಅಫ್ಘಾನಿಸ್ಥಾನಕ್ಕೂ, ಇರಾನಿಗೂ ಸೇರಿಸುವ ರಾಜಮಾರ್ಗ. ಭಾರತಕ್ಕೆ ಇರಾನ್ ಜೊತೆ ಒಪ್ಪಂದ ಕುದುರಿದರೆ ಗ್ಯಾಸ್ ಪೈಪ್ ಲೈನ್ ಬರಬೇಕಿರುವ ಮಾರ್ಗ ಅದೆ. ಹೀಗಾಗಿ ಅಲ್ಲಿ ಭಾರತದ ಪರವಾಗಿ ಇರುವ ಆಳ್ವಿಕೆ ಅಲ್ಲಿರುವ ಅಗತ್ಯವಿದೆ. ಬಲೂಚಿಗಳಿಗೆ, ಬುಗ್ತಿಗೆ ಭಾರತ ತೋರಿಸುತ್ತಿರುವ ಬೆಂಬಲದಲ್ಲಿ ಅವನ ಸಾವಿಗೆ ಹಾಕುತ್ತಿರುವ ಕಣ್ಣೀರಿನ ಹಿಂದೆ ಈ ಸ್ವಾರ್ಥವಿದೆ. ದೂರಗಾಮಿ ವ್ಯೂಹಾತ್ಮಕ ದುರುದ್ದೇಶಗಳಿವೆ. ಅಷ್ಟೇ ಹೊರತು ಕಾಶ್ಮೀರದ ಬಗ್ಗೆ ಪಾಕಿಸ್ಥಾನ ಅಂದರೆ ಪಾಕಿಸ್ತಾನದ ಸರ್ಕಾರ ಕಣ್ಣೀರು ಹಾಕಿದರೂ, ಬಲೂಚಿಗಳ ಬಗ್ಗೆ ಭಾರತ ಅಂದರೆ ಭಾರತ ಸರ್ಕಾರ ಕಣ್ಣೀರು ಹಾಕಿ ಮಾನವ ಹಕ್ಕುಗಳ ಉಲ್ಲಂಘನೆಯ ಬಗ್ಗೆ ಮಾತಾಡಿದರೂ ಅದರ ಗುಟ್ಟು ಇಷ್ಟೇ..!

ಅಧಿಕಾರಸ್ಥ ರಾತ್ರಿಗಳು

ಗೆದ್ದ ಆ ದಿನಗಳನ್ನು ಭದ್ರವಾಗಿಟ್ಟಿದ್ದೆ;
ಸೂಜಿ ಮೊನೆ ಬೆಳಕು ಮೂಡದಂತೆ
ಸೂರ್ಯ-ಚಂದ್ರರ ಕುತ್ತಿಗೆಗಳನ್ನು
ಮುಷ್ಠಿಯಿಂದ ಬಿಗಿಗೊಳಿಸುತ್ತಿದ್ದೆ
ಅದೇ ನಮ್ಮಿಬ್ಬರ ಸುಖವು ಆಗಿರುತ್ತಿತ್ತು!!
ಬಿಗಿ ಬಿರಿತದ ಶಾಖಕ್ಕೆ ಒಮ್ಮೊಮ್ಮೆ
ಆ ರಾತ್ರಿಗಳು ನರಳುತ್ತಿದ್ದವು ಖಿನ್ನತೆಯಿಂದ;
ಮತ್ತೆ ಚೇತರಿಸಿಕೊಂಡು ಪುಟಿದೆದ್ದು
ಸ್ಫೋಟಿಸುತ್ತಿದ್ದವು
ನಿನಗದು ಅರ್ಥವಾಗುತ್ತಿರಲಿಲ್ಲ.

ಬದಲಾಗಿ ಬೆಂಕಿ-
ಮಳೆಯನ್ನು ಸುರಿಸುತ್ತಿದ್ದೆ,
ಕಗ್ಗತ್ತಲನ್ನು ಹೇರುತ್ತಲೇ ಬರುತ್ತಿದ್ದೆ.
ನನ್ನ ಭಾವಗಳು ಭಗ್ನವಾಗುತ್ತಿದ್ದವು.
ಅಧಿಕಾರ ನಿನ್ನನ್ನು
ಮತ್ತೆ ಮತ್ತೆ ಅಣಕಿಸುತ್ತಲೇ ಇತ್ತು.

ಪ್ರಿಯ
ನೀನು ಆಗ ಗಳಿಸುತ್ತಿದ್ದುದ್ದು ಗೆದ್ದ ಮನಸ್ಸನ್ನಲ್ಲ
ಸೋತ ವಿಷಣ್ಣ ಹೃದಯವನ್ನು.
ನನಗೆ ಅನ್ನಿಸುತ್ತಿತ್ತು
ವಿಜಯಿಗಳು ಯಾವಾಗಲೂ ಗೆಲ್ಲುವುದು
ಸೋತ ಹೃದಯ-ಮನಸ್ಸುಗಳನ್ನು ಎಂದು.

-ರಂಗನಾಥ ಕಂಟನಕುಂಟೆ

ಕವಿತೆಯೆಂದರೆ...

'ಕಾವ್ಯ ಅನುಭವದ ಅತ್ಯಂತ ಸ್ಪಷ್ಟ ರೂಪ' ಎನ್ನುತ್ತಾರೆ ಲಂಕೇಶ್ ಮೇಷ್ಟ್ರು. ಈ ಸಲದ ಸೂಕ್ತಿಗಳು ಕವಿತೆ ಕುರಿತವು. ಕವಿತೆಯನ್ನು ವ್ಯಾಖ್ಯಾನಿಸುವುದು ಕಷ್ಟ ಎನ್ನುವ ನಮ್ಮ ರಾಮಚಂದ್ರ ಎಸ್. ಕುಲಕರ್ಣಿಯವರು ಇವುಗಳ ಸಂಗ್ರಹಕಾರರು. ಅವರಿಗೆ ಧನ್ಯವಾದಗಳು

-ಮೂರ್ತಿ

ಕವಿತೆಯೆಂದರೆ ಭಾವವನ್ನೊಳಗೊಂಡ ಆಲೋಚನೆ ಮತ್ತು ಶಬ್ದಗಳು -ಮಿಲ್

ದಳದ ಹೊರೆಹೊತ್ತ ಮಹಿಳೆ

ಜಾತ್ಯತೀತ ಜನತಾದಳದ ಅಧ್ಯಕ್ಷರಾದ ದೇವೇಗೌಡರ ಕುಟುಂಬದ ಮಹಿಳೆಯರು ನಿಜವಾಗಲೂ ಪಕ್ಷದ ಚಿಹ್ನೆಯಾದ ಹೊರೆಹೊತ್ತ ಮಹಿಳೆಯರಾಗಿದ್ದಾರೆ! ಇವತ್ತು ಗೌಡರ ಪುತ್ರ ಎಚ್.ಡಿ. ಕುಮಾರಸ್ವಾಮಿಯವರ ಸಚಿವ ಸಂಪುಟದಲ್ಲಿ ಮಹಿಳೆಯರಿಗೆ ಸ್ಥಾನಮಾನ ಇಲ್ಲ, ಹಿಂದಿನ ಕಾಂಗ್ರೆಸ್-ಜೆಡಿಎಸ್ ಸಮ್ಮಿಶ್ರ ಸರ್ಕಾರದಲ್ಲೂ ಮಹಿಳೆಯರಿಗೆ ಪ್ರಾತಿನಿಧ್ಯ ಇರಲಿಲ್ಲ, ಈಗಲೂ ಅವರ ಪಕ್ಷದಲ್ಲಿ ಒಬ್ಬ ಮಹಿಳೆ, ಹಿರಿಯ ಸ್ಥಾನವಿಲ್ಲ ಇದೆಲ್ಲವನ್ನು ನೋಡಿದರೆ, ಜೆಡಿಎಸ್‌ನಲ್ಲಿ ಮಹಿಳೆಗೆ ಪಾತ್ರವೇನಿದ್ದರೂ ಅದು ಆ ಪಕ್ಷದ ಚಿಹ್ನೆಯಲ್ಲಿ ಸ್ಥಿತವಾಗಿರುವ ಹೊರೆ ಹೊತ್ತ ಮಹಿಳೆಗೆ ಸೀಮಿತ ಎಂದು ನಮ್ಮಂಥವರು ಲೇವಡಿ ಮಾಡಿದ್ದುಂಟು.

ಈಗ ಅದನ್ನು ಸರಿಪಡಿಸಬೇಕು ಎಂಬಂತೆ ಗೌಡರ ಕುಟುಂಬ ಮುಂದಾಗಿದೆ. ಅಷ್ಟೇ ಅಲ್ಲ, ಆ ಜವಾಬ್ದಾರಿಯನ್ನು ಪಕ್ಷದ ಸಕ್ರಿಯ ಸದಸ್ಯೆಯರಿಗೆ ನೀಡುವ ಬದಲಾಗಿ ತಮ್ಮ ಕುಟುಂಬದ ಮಹಿಳೆಯರಿಗೇ ಅದನ್ನು ವಹಿಸಿದ್ದಾರೆ. ಪಾಪ ಪಕ್ಷಕ್ಕಾಗಿ ದುಡಿದವರಿಗೆ ಯಾಕೆ ತೊಂದರೆ ಕೊಡಬೇಕು ಎಂಬಂತೆ.



ಇದನ್ನು ಯಾಕೆ ಹೇಳುತ್ತಿದ್ದೇನೆ ಎಂದು ನಿಮಗಾಗಲೇ ಅರ್ಥವಾಗಿರಬೇಕು. ಕಳೆದ ಎಂಟು ವಾರಗಳಿಂದ ನಿಮ್ಮ ಈ 'ಲಂಕೇಶ್' ವಾರಪತ್ರಿಕೆ ಮತ್ತು ಹಲವು ಇತರ ಪತ್ರಿಕೆಗಳು ಗೌಡರ ಹಿರಿ ಸೊಸೆಯಾದ ಕವಿತಾ ಬಾಲಕೃಷ್ಣೇಗೌಡ ಕಳೆದೆರಡು ವರ್ಷಗಳಲ್ಲಿ ಸಂಗ್ರಹಿಸಿರುವ ಕೋಟ್ಯಂತರ ರೂಪಾಯಿಗಳ ಬಗ್ಗೆ, ಖರೀದಿಸಿರುವ ನೂರಾರು ಎಕರೆ ಭೂಮಿಯ ಬಗ್ಗೆ ಬರೆದಿದ್ದೇವೆ. ಈ ಕವಿತಾ ಬಾಲಕೃಷ್ಣೇಗೌಡ ಇವತ್ತು ಎಷ್ಟು ದೊಡ್ಡ ಸಾಮ್ರಾಜ್ಯದ ಒಡತಿ ಎಂದರೆ, ಶಾಸಕ ಜನಾರ್ಧನ ರೆಡ್ಡಿ ಆಕೆಯನ್ನು ಗೌಡರ ಕುಟುಂಬದ 'ರಿಸರ್ವ್ ಬ್ಯಾಂಕ್' ಎಂದು ಬಣ್ಣಿಸಿದರು.

ಆದರೆ ಇದು ಎಷ್ಟು ವಾಸ್ತವ?

ಹೋದ ವಾರ ಹೇಳಿದಂತೆ, ಕವಿತಾ ಆಗಲಿ, ಗೌಡರ ಕುಟುಂಬದ ಇತರೆ ಮಹಿಳೆಯರಾಗಲಿ, ಇಷ್ಟೊಂದು ಹಣವನ್ನು ಸ್ವತಃ ದುಡಿದಿದ್ದಾರೆ ಎಂದು ನಂಬಲು ಕರ್ನಾಟಕದ ಜನತೆ ಮುಠ್ಠಾಳರಲ್ಲ, ವಾಸ್ತವ ಏನೆಂದರೆ, ಸಂಪೂರ್ಣವಾಗಿ ಫ್ಯೂಡಲ್ ಆದ ಗೌಡರ ಕುಟುಂಬದಲ್ಲಿ ಅವರ ಪುತ್ರರು, ಅಳಿಯಂದಿರು ಅಕ್ರಮವಾಗಿ ಗಳಿಸಿದ ಹಣವನ್ನು ಕವಿತಾ ಬಾಲಕೃಷ್ಣೇಗೌಡರ ಹೆಸರಿನಲ್ಲಿ ಹೂಡಿದ್ದಾರೆ, ಆಕೆಯ ಮೂಲಕ ತಮ್ಮ ಬ್ಲಾಕ್ ಮನಿಯನ್ನು ವೈಟ್ ಮಾಡುತ್ತಿದ್ದಾರೆ. ಈಗ ಜನಾರ್ಧನ ರೆಡ್ಡಿಯವರ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿರುವುದರ ಪ್ರತಿಫಲವಾಗಿ ಅಕಸ್ಮಾತ್ ಕವಿತಾ ಬಾಲಕೃಷ್ಣೇಗೌಡರ ಹಣಕಾಸು ವಹಿವಾಟು ವಿಚಾರಣೆಗೆ ಒಳಪಟ್ಟು ಅದೆಲ್ಲ ಅಕ್ರಮವಾಗಿ ಗಳಿಸಿರುವ ಹಣ ಎಂಬುದು ಸಾಬೀತಾದರೆ, ಶಿಕ್ಷೆ ಅನುಭವಿಸಬೇಕಿರುವುದು ಕವಿತಾ ಬಾಲಕೃಷ್ಣೌಡ ಹೊರತು ಆಕೆಯ ಗಂಡ, ಮೈದುನ, ಮಾವ ಅಲ್ಲ.

ಅದಕ್ಕೇ ಕವಿತಾ ಬಾಲಕೃಷ್ಣೇಗೌಡ ಇವತ್ತು ನಿಜವಾಗಲೂ ಗೌಡರ ಮನೆತನದ ಹೊರೆಹೊತ್ತ ಮಹಿಳೆಯಾಗಿದ್ದಾರೆ ಎಂದಿದ್ದು!

* * * * *

ಮತ್ತೆ ವಂದೇ ಮಾತರಂ ಸುತ್ತ ವಿವಾದಗಳೆದ್ದಿವೆ. ಇದೇ ಸೆಪ್ಟೆಂಬರ್ 7ಕ್ಕೆ ಬಂಕಿಮ್ ಚಂದ್ರ ಚಟರ್ಜಿ ಯವರು ಬರೆದಿರುವ ಆ ಪದ್ಯವನ್ನು ಕಾಂಗ್ರೆಸ್ ಸಮಾವೇಶದಲ್ಲಿ ಮೊದಲ ಬಾರಿಗೆ ಹಾಡಿದ್ದಕ್ಕೆ ನೂರು ವರ್ಷವಾಗುತ್ತದೆ ಎಂದು ಹೇಳಿ ಅದನ್ನು ಎಲ್ಲಾ ಶಾಲೆಗಳಲ್ಲಿ ಹಾಡಬೇಕೆಂದು ಮಾನವ ಸಂಪನ್ಮೂಲಗಳ ಸಚಿವ ಅರ್ಜುನ್‌ಸಿಂಗ್‌ರವರು ಆದೇಶ (ಅವರ ಪ್ರಕಾರ ಸಲಹೆ) ಹೊರಡಿಸಿದ್ದಾರೆ. ಅರ್ಜುನ್‌ಸಿಂಗ್‌ರವರನ್ನು ಕಂಡರೆ ಬೆಂಕಿ ಕಾರುವ, ಅವರ ವಿರುದ್ಧ ದೇಶದ ಹಲವೆಡೆ ಮೊಕದ್ದಮೆಗಳನ್ನು ಹೂಡಿರುವ ಚಡ್ಡಿಗಳು ಈ ಆದೇಶವನ್ನು ಮನಃಪೂರ್ವಕವಾಗಿ ಸ್ವೀಕರಿಸಿ ಬಿಜೆಪಿ ಅಧಿಕಾರದಲ್ಲಿರುವ ರಾಜ್ಯಗಳಲ್ಲಿ ಅದನ್ನು ಪಾಲಿಸಬೇಕು ಎಂದು ರಚ್ಚೆ ಹಿಡಿದಿದ್ದಾರೆ.

ಕಂಡಹಾಗೆ



ಕರ್ನಾಟಕದಲ್ಲೂ ಜಾತ್ಯತೀತ ಜನತಾದಳ ಕೇಸರಿಮಯವಾಗಿರುವುದರಿಂದ ಅಂತಹದ್ದೊಂದು ಆದೇಶ ಹೊರಬಿದ್ದಿದೆ.

ಆದರೆ ಇದರ ವಿರುದ್ಧ ದೇಶದೆಲ್ಲೆಡೆ ಜಾತ್ಯತೀತರು ಮತ್ತು ಅಲ್ಪಸಂಖ್ಯಾತರು ತಿರುಗಿಬಿದ್ದಿದ್ದಾರೆ. ಆದರಲ್ಲೂ ಮುಸಲ್ಮಾನರು ತಾವು ಯಾವುದೇ ಕಾರಣಕ್ಕೂ 'ವಂದೇ ಮಾತರಂ' ಅನ್ನು ತಮ್ಮ ಮದರಸಾಗಳಲ್ಲಿ ಹಾಡುವುದಿಲ್ಲ ಎಂದು ಶಪಥ ಮಾಡಿದ್ದಾರೆ. ರಾಷ್ಟ್ರ ಹಾಡಾದ 'ವಂದೇ ಮಾತರಂ' ಅನ್ನು ಯಾಕೆ ಅವರು ಹಾಡಲು ಒಪ್ಪುತ್ತಿಲ್ಲ ಎಂದು ಗೊತ್ತಿಲ್ಲದವರು, ಆ ಹಾಡಿನ ಹಿನ್ನೆಲೆ ಅರಿತಿಲ್ಲದವರು ಮುಸಲ್ಮಾನರತ್ತ ಸಂಶಯದಿಂದ ನೋಡುತ್ತಿದ್ದಾರೆ.

ವಾಸ್ತವವಾಗಿ, 'ಆನಂದ ಮಠ' ಎಂಬ ಕಾದಂಬರಿಯಲ್ಲಿ ಮೂಡಿಬರುವ 'ವಂದೇ ಮಾತರಂ' ಪದ್ಯ ಭಾರತ ದೇಶದ ಬಗ್ಗೆಯಾದರೂ ಆ ಪದ್ಯದ ಸುತ್ತ ಇರುವ ಸನ್ನಿವೇಶ ಉಗ್ರವಾಗಿ ಮುಸಲ್ಮಾನರ ವಿರುದ್ಧವಾಗಿದೆ. ಎಷ್ಟರಮಟ್ಟಿಗೆ ಅಂದರೆ, ಭಾರತದಲ್ಲಿರುವ ಎಲ್ಲ ಮುಸಲ್ಮಾನರನ್ನು ಕೊಂದು ಅವರ ಮಸೀದಿಗಳಿರುವ ಜಾಗೆಗಳಲ್ಲಿ ಮಂದಿರಗಳು ನಿರ್ಮಾಣವಾಗುವ ತನಕ ತನ್ನ ಶಸ್ತ್ರಾಸ್ತ್ರಗಳನ್ನು ಕೆಳಗಿಡುವುದಿಲ್ಲ ಎಂದು ಕಾದಂಬರಿಯ ನಾಯಕ ಪಟ್ಟು ಹಿಡಿದಿರುತ್ತಾನೆ. ಅಂತಹ ಉದ್ದೇಶವನ್ನು ಹೊಂದಿರುವ ಪುಸ್ತಕದ ಹಾಡನ್ನು ತಮ್ಮ ದೇಶಭಕ್ತಿ ಸಾಬೀತುಪಡಿಸಲು ಭಾರತದ ಮುಸಲ್ಮಾನರು ಹಾಡಲೇಬೇಕು ಎಂದು ಒತ್ತಾಯ ಮಾಡುವುದು ಎಷ್ಟು ಸರಿ?

ಈ ಪದ್ಯದ ಬಗ್ಗೆ ಮುಸಲ್ಮಾನರಿಗೆ ಮಾತ್ರವಲ್ಲ, ರವೀಂದ್ರನಾಥ್ ಟಾಗೂರ್ ಮತ್ತು ಜವಾಹರಲಾಲ್ ನೆಹರುರವರಿಗೂ ಹಿಂಜರಿಕೆ ಇತ್ತು, ಏಕೆಂದರೆ ಭಾರತದ ನೈಸರ್ಗಿಕ ಸೌಂದರ್ಯವನ್ನು ಬಣ್ಣಿಸುತ್ತಾ ಪ್ರಾರಂಭವಾಗುವ 'ವಂದೇ ಮಾತರಂ' ಕೊನೆಕೊನೆಗೆ ಇಡೀ ದೇಶವನ್ನು ದುರ್ಗೆಗೆ ಹೋಲಿಸುತ್ತದೆ. ಹಾಗೆ ದೇಶವನ್ನು ಒಂದು ಹಿಂದೂ ದೇವತೆಗೆ ಹೋಲಿಸುವುದು/ಸಮೀಕರಿಸುವುದು ಸರಿಯಲ್ಲ ಎಂಬ ಕಾರಣಕ್ಕೆ ಆ ಪದ್ಯದ ಮೊದಲೆರಡು ಪ್ಯಾರಾಗಳನ್ನು ಮಾತ್ರ ಪರಿಗಣಿಸಿ ಉಳಿದ ಪ್ಯಾರಾಗಳನ್ನು ಕೈಬಿಡಲಾಗಿದೆ. ಏಕೆಂದರೆ ದೇಶವನ್ನು ಒಂದು ಹಿಂದೂ ದೇವತೆಯೊಂದಿಗೆ ಸಮೀಕರಿಸುವುದು ವಿಗ್ರಹಾರಾಧನೆಯ ವಿರೋಧಿಗಳಾದ ಮುಸಲ್ಮಾನರಿಗೆ ಸರಿ ಕಾಣಿಸುವುದಿಲ್ಲ ಮಾತ್ರವಲ್ಲ ಸ್ವತಃ ಅದೆಷ್ಟೋ ಹಿಂದೂಗಳೂ ಒಪ್ಪಲಾರದಂತಹದ್ದು. ಅದೆಲ್ಲಕ್ಕಿಂತ ಮುಖ್ಯವಾಗಿ, ಸ್ವಾತಂತ್ರ್ಯ ಸಂಗ್ರಾಮದ ಸಂದರ್ಭದಲ್ಲಿ ಹಿಂದೂ-ಮುಸ್ಲಿಮ್ ಕೋಮು ಗಲಭೆಗಳು ನಡೆದಾಗ ಮುಸಲ್ಮಾರನ್ನು ಕೊಲ್ಲುವಂತೆ ಪ್ರೇರೇಪಿಸಲು 'ವಂದೇ ಮಾತರಂ' ಎಂದು ಉದ್ಗಾರವೆತ್ತಲಾಗುತ್ತಿತ್ತು.

ಹೀಗೆ 'ವಂದೇ ಮಾತರಂ'ನ ಸಂದರ್ಭ, ಉದ್ದೇಶ ಮತ್ತು ಸಿದ್ಧಾಂತವೆಲ್ಲ ಅಲ್ಪಸಂಖ್ಯಾತರ ವಿರೋಧವಾಗಿದ್ದು ಹಿಂಸೆಗೆ ಪ್ರಚೋದಿಸುವಂತದ್ದಾಗಿದ್ದು ಅದನ್ನು ಯಾವ ಪ್ರಜ್ಞಾವಂತರೂ ಒಪ್ಪಿಕೊಳ್ಳುವುದು ಅಸಾಧ್ಯವೇ ಸರಿ.

ಅಂದಹಾಗೆ, ಕರ್ನಾಟಕ ರಾಜ್ಯದಲ್ಲಿ ಸೆಪ್ಟೆಂಬರ್ 7 ರಂದು 'ವಂದೇ ಮಾತರಂ' ಅನ್ನು ಎಲ್ಲಾ ಶಾಲೆಗಳಲ್ಲಿ ಹಾಡಿಸಬೇಕೆಂದು ಸರ್ಕಾರ ಆದೇಶ ಹೊರಡಿಸಿದ್ದರೂ, ಅದು ಕಡ್ಡಾಯವೇನಲ್ಲ ಎಂದು ಸಚಿವ ಹೊರಟ್ಟಿ ಹೇಳಿದ್ದಾರೆ. ಆದರೂ ನಮ್ಮ ಮಕ್ಕಳ ಬಾಯಿಂದ ಇಂತಹ ಕೋಮುದ್ವೇಷಿ ಹಾಡು ಹೊರಬರಬಾರದೆಂದಿದ್ದರೆ ಅಂದು ಅವರೆಲ್ಲರು ಶಾಲೆಗೆ ಹೋಗದಂತೆ ನೋಡಿಕೊಳ್ಳುವುದೇ ಉತ್ತಮ ಅನ್ನಿಸುತ್ತೆ, ನೀವೇನಂತೀರಿ?

-ಗೌರಿ ಲಂಕೇಶ್

ಕುಮಾರಸ್ವಾಮಿಯ 'ಅಕ್ಕ'ನ ರಾಜಕೀಯ


ಅಲ್ಲಿ ದೂರದ ಅಮೆರಿಕದಲ್ಲಿ ಅನಿವಾಸಿ ಕನ್ನಡಿಗರು 'ಅಕ್ಕ' ಸಂಘಟನೆಯ ಮೂಲಕ ವಿಶ್ವ ಕನ್ನಡ ಸಮ್ಮೇಳನ ನಡೆಸುತ್ತಿದ್ದರೆ, ಅತಿವೃಷ್ಟಿಯ ನೆಪ ನೀಡಿ ಅಮೆರಿಕಾ ಪ್ರವಾಸದಿಂದ ಜಾರಿಕೊಂಡ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಈ ಸಂದರ್ಭ ಮತ್ತು ಸನ್ನಿವೇಶವನ್ನು ಸಹ ತಮ್ಮ ರಾಜಕೀಯ ಕುತಂತ್ರಕ್ಕಾಗಿ ಬಳಸುತ್ತಿರುವ ದಟ್ಟವಾದ ವಾಸನೆ ಹಬ್ಬಿದೆ.

ರಾಜ್ಯದಲ್ಲಿ ಹಿಂದೆಂದೂ ಕಂಡಿರದಂತಹ ಭಾರಿ ಪ್ರಮಾಣದ ಮಳೆ ಸುರಿದು ರೈತರು ತೀವ್ರ ನಷ್ಟ ಅನುಭವಿಸಿರುವುದು ನಿಜ. ಆದರೆ ರಾಜಕಾರಣಿಗಳಿಗೆ ಇಂತಹ ವಿಷಯಗಳಲ್ಲೂ ಲಾಭ ಮಾಡಿಕೊಳ್ಳುವ ಚಾಣಾಕ್ಷತನವಿರುತ್ತದೆ. 'ಅಕ್ಕ' ಸಮ್ಮೇಳನಕ್ಕೆ ಮುಖ್ಯಮಂತ್ರಿ ಕುಮಾರಸ್ವಾಮಿ ಗೈರು ಹಾಜರಿಗೆ ಮುಖ್ಯ ಕಾರಣ ಅನಾವೃಷ್ಟಿಯಲ್ಲ, ತಮ್ಮ ಅನುಪಸ್ಥಿತಿಯಲ್ಲಿ ಪಕ್ಷದೊಳಗೇ ಇರುವ ಭಿನ್ನರು, ಕಾಂಗ್ರೆಸ್ಸಿಗರು ಸೇರಿ ಸರ್ಕಾರಕ್ಕೇನಾದರೂ ಧಕ್ಕೆ ತಂದಾರು ಎಂಬ ಭೀತಿಯೇ ಕಾರಣ ಎಂದು ಅವರ ಪಕ್ಷದವರೇ ಮಾತನಾಡುತ್ತಿದ್ದಾರೆ.

ಅದೇನೇ ಇರಲಿ, ಇಲ್ಲಿ ಮತ್ತೊಂದು ವಿಷಯವನ್ನು ಗಮನಿಸಿ. ಅನಾವೃಷ್ಟಿಯ ನೆಪ ಒಡ್ಡಿ ರಾಜ್ಯದಲ್ಲೇ ಉಳಿದ ಮುಖ್ಯಮಂತ್ರಿಗಳು, ತಮ್ಮ ಸರ್ಕಾರದ ಮಿತ್ರ ಪಕ್ಷವಾದ ಬಿಜೆಪಿಯ ಉಪಮುಖ್ಯಮಂತ್ರಿ ಯಡಿಯೂರಪ್ಪನವರನ್ನು 'ಅಕ್ಕ' ಸಮ್ಮೇಳನಕ್ಕೆ ಕಳುಹಿಸಿಕೊಟ್ಟರು. ಇದರ ಹಿಂದೆಯೂ ಒಂದು ಹುನ್ನಾರ ಅಡಗಿರುವ ಸೂಚನೆಯಿದೆ.

ರಾಜಕೀಯ ಲೆಕ್ಕಾಚಾರಗಳು ಬದಲಾಗಿ ಈಗ ಅಧಿಕಾರ ಹಂಚಿಕೊಂಡಿರುವ ಮಿತ್ರ ಪಕ್ಷಗಳೇನಾದರು ಸದ್ಯದಲ್ಲೇ ಪ್ರತಿಸ್ಪರ್ಧಿಗಳಾಗಿ ಚುನಾವಣೆ ಎದುರಿಸಬೇಕಾದ ಪರಿಸ್ಥಿತಿ ಬಂದಲ್ಲಿ, ಈ ಅಮೆರಿಕಾ ಪ್ರವಾಸವನ್ನು ಸಹ ಒಂದು ಅಸ್ತ್ರವನ್ನಾಗಿ ಬಳಸಬಹುದು. ಅದೇ ಕಾರಣದಿಂದ ಕುಮಾರಸ್ವಾಮಿ ರಾಜ್ಯದ್ಯಂತ ಪ್ರವಾಸ ಮಾಡುತ್ತಾ ಯಾರದೋ ಮನೆ, ಮತ್ಯಾರದೋ ಜಗುಲಿಯ ಮೇಲೆ ರಾತ್ರಿ ಕಳೆದು ಪತ್ರಿಕೆಗಳಲ್ಲಿ ಫೋಟೋ ಹಾಕಿಸಿಕೊಳ್ಳುತ್ತಿದ್ದಾರೆ.

"ಅಂತಹ" ಸಮಯ ಬಂದರೆ "ನೋಡಿ ರಾಜ್ಯದಲ್ಲಿ ಅನಾವೃಷ್ಟಿಯಾಗಿ ರಾಜ್ಯದ ರೈತರು ತತ್ತರಿಸುತ್ತಿದ್ದರೆ ಭಾರತೀಯ ಜನತಾ ಪಕ್ಷದ ಮುಖಂಡ ಯಡಿಯೂರಪ್ಪ ತಮ್ಮ ಬಂಧು, ಬಳಗದೊಂದಿಗೆ ಅಮೆರಿಕಾ ಪ್ರವಾಸ ಮಾಡುತ್ತ ಮಜಾ ಉಡಾಯಿಸುತ್ತಿದ್ದರು" ಎಂದು ಆರೋಪಿಸ ಬಹುದಲ್ಲ, ಇಲ್ಲಿನ ಅಸಲಿ ವಿಚಾರವೆಂದರೆ 'ಅಕ್ಕ' ಸಂಘಟಕರು ಅಧಿಕೃತವಾಗಿ ಆಹ್ವಾನ ನೀಡಿರುವುದು ಉಪ ಮುಖ್ಯಮಂತ್ರಿ ಯಡಿಯೂರಪ್ಪ ಮತ್ತು ಗೃಹ ಸಚಿವ ಎಂ.ಪಿ. ಪ್ರಕಾಶ್‌ರವರಿಗೆ ಮಾತ್ರ. ಆದರೆ ಯಡಿಯೂರಪ್ಪನವರ ಅಳಿಯ-ಮಗಳು ಮತ್ತು ಮಗ-ಸೊಸೆ ಸೇರಿದಂತೆ ಒಟ್ಟು 26 ಜನರ 'ಅನಧಿಕೃತ' ನಿಯೋಗ ಅಮೆರಿಕಾಕ್ಕೆ ಹೋಗಿದೆ. ಇವರ ಪ್ರಯಾಣಕ್ಕೆ ಪ್ರಾಯೋಜಕರು ಯಾರು?



ಮತ್ಯಾರು? ನಮ್ಮ ಮಾನ್ಯ ಮುಖ್ಯಮಂತ್ರಿಗಳಾದ ಕುಮಾರಸ್ವಾಮಿಗಳು. ಬೆಂಗಳೂರಿನ ಕುಮಾರ ಕೃಪಾ ಬಡಾವಣೆಯ ಟ್ರಾವೆಲ್ಸ್ ಒಂದಕ್ಕೆ ಮುಖ್ಯಮಂತ್ರಿಗಳು ತಮ್ಮ ಪಾಕೆಟ್ ಮನಿಯಿಂದ 40 ಲಕ್ಷ ರೂಪಾಯಿ ನೀಡಿ ಈ 26 ಮಹಾ ಮಹನೀಯರ ಫ್ಲೈಟ್ ಟಿಕೆಟ್ ವೆಚ್ಚವನ್ನು ಭರಿಸಿದ್ದಾರಂತೆ. ಯಡ್ಡಿ ಮತ್ತು ಎಂ.ಪಿ. ಪ್ರಕಾಶ್‌ರವರೇನೋ 'ಅಕ್ಕ' ಸಂಘಟನೆಯ ಅತಿಥಿಗಳು. ಹಾಗಂತ ಯಡಿಯೂರಪ್ಪನವರೊಂದಿಗೆ ಅವರ ಅಳಿಯ-ಮಗಳು ಮತ್ತು ಮಗ-ಸೊಸೆ ಊಟಕ್ಕೆ, ಉಳ್ಕೊಳ್ಳಕ್ಕೆ, ಹೋದ್ರೆ ಕತ್ತಿದ್ದು ದಬ್ಬಾಗುತ್ತಾ? ಇದು ಬಾಜಿಕ್ಕೂ, ಹೋಗ್ಲಿ ಹೀಗೆ ಆಹ್ವಾನ ಇಲ್ಲೇ ಇದ್ದೂ ಅಮೆರಿಕಾಕ್ಕೆ ಹೋಗಿರುವವರು ಯಾರಷ್ಟು ಅಂತ ನೋಡಿದ್ರೆ, ಭಾರತೀಯ ಜನತಾ ಪಕ್ಷದ ಕೈಗಾರಿಕಾ ಸಚಿವ ಕಟ್ಟಾಸುಬ್ರಮಣ್ಯ ನಾಯ್ಡು, ಬಿಜೆಪಿಯ ಶಾಸಕರುಗಳಾದ ಶಿವಾನಂದ ನಾಯ್ಕ, ಸಿ.ಟಿ. ರವಿ, ಸೊಗಡು ಎಂ. ಶಿವಣ್ಣ, ವಿರಾಜಪೇಟೆ ಬಸವರಾಜು ಮತ್ತು ಧರ್ಮೇಗೌಡ.

ಈಗ ಜಾತ್ಯತೀತ ಜನತಾದಳದ ಶಾಸಕರ ಸರದಿ. ಇವರ ವಿಶೇಷವೇನೆಂದರೆ ಬಹುತೇಕ ಶಾಸಕರು ಪತ್ನಿ ಸಮೇತರಾಗಿ ಹೋಗಿರುವುದು. ಶಿರಾ ಶಾಸಕ ರಾಜಣ್ಣ ಮಳವಳ್ಳಿ ಅನ್ನದಾನಿ, ದೇವನಹಳ್ಳಿ ಚಂದ್ರಣ್ಣ ಪಾಂಡವಪುರ ಪುಟ್ಟರಾಜು, ಚನ್ನರಾಯಪಟ್ಟಣ, ಪುಟ್ಟೇಗೌಡ, ಹಾಸನ ಎಚ್.ಎಸ್. ಪ್ರಕಾಶ್, ಕೊಳ್ಳೆಗಾಲ ಬಾಲರಾಜು ಮತ್ತು ಶ್ರೀಕಂಠೇಗೌಡ.

ಏಕಾಂಗಿ ವೀರರು, ಮೀರಾಜುದ್ದೀನ್ ಪಟೇಲ್, ಮಹದೇವ ಪ್ರಸಾದ್, ಎಂ. ಶ್ರೀನಿವಾಸ್ ಹಾಗೂ ಏಕಾಂಗಿ ಮಹಿಳೆ ಶ್ರೀರಂಗಪಟ್ಟಣದ ಶಾಸಕಿ ವಿಜಯಲಕ್ಷ್ಮಿ ಬಂಡಿ ಸಿದ್ದೇಗೌಡ.

ಜಾತ್ಯತೀತ ಜನತಾದಳದವರ ಪ್ರವಾಸಕ್ಕೆ ಕುಮಾರಸ್ವಾಮಿ ಫೈನಾನ್ಸ್ ಮಾಡಿದ್ದೇನೋ ಸರಿ. ಅದು ಅವರೇ ಪಾರ್ಟಿ. ಆದ್ರೆ ಈ ಸಿ.ಟಿ. ರವಿ, ಧರ್ಮೇಗೌಡ ಸೇರಿದಂತೆ ಭಾರತೀಯ ಜನತಾಪಕ್ಷದ ಘಟಾಂಗರಿಗೇಕೆ ಅಮೆರಿಕಾ ಪಿಕ್ನಿಕ್ ಹೋಗಿ ಬರಲು ಕುಮಾರಣ್ಣ ಫೈನಾನ್ಸ್ ಮಾಡಬೇಕಿತ್ತೆಂದು ಜೆಡಿಎಸ್‌ನಲ್ಲೇ ಹಲವರು ತಲೆ ಕೆಡಿಸಿಕೊಂಡು ಕೂತಿದ್ದಾರೆ. ಅಯ್ಯೋ ಪೆದ್ದಣ್ಣಗಳಿರ! ಅದೇ ದೊಡ್ಡ ಗೌಡ ದೇವೇಗೌಡರ ವ್ಯೂಹ. ಕಾದು ನೋಡಿ ಮುಂದೈತೆ ಮಾರಿಹಬ್ಬ!

'ಅಕ್ಕ'ನಿಗೂ ಮುಖ್ಯಮಂತ್ರಿಗಳಿಗೂ ಆಗಿಬರುವುದಿಲ್ಲ?

'ಅಕ್ಕ'ನಿಗೂ ರಾಜ್ಯದ ಮುಖ್ಯಮಂತ್ರಿ ಸ್ಥಾನದಲ್ಲಿರುವವರಿಗೂ ಯಾಕೋ ಸಂಬಂಧ ಸರಿ ಹೊಂದುವಂತಿಲ್ಲ, ಎಸ್.ಎಂ. ಕೃಷ್ಣ ರಾಜ್ಯದ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಅವರಿಗೆ ಎರಡು ಬಾರಿ 'ಅಕ್ಕ' ಸಮ್ಮೇಳನದಲ್ಲಿ ಭಾಗವಹಿಸುವ ಅವಕಾಶ ತಪ್ಪಿ ಹೋಯ್ತು.

ಒಮ್ಮೆ ಸಮ್ಮೇಳನ ಆಯೋಜಿಸಿದ ಸಂದರ್ಭದಲ್ಲಿ ನರಹಂತಕ ವೀರಪ್ಪನ್ ಡಾ. ರಾಜ್‌ಕುಮಾರ್‌ರವರನ್ನು ಅಪಹರಿಸಿದ. ಈ ಆತಂಕ ಮತ್ತು ಡಾ. ರಾಜ್ ಬಿಡುಗಡೆಯ ಯತ್ನದಲ್ಲಿ ಕೃಷ್ಣ ಸಮ್ಮೇಳನಕ್ಕೆ ಗೈರು ಹಾಜರಾದರು. ಎರಡು ವರ್ಷದ ನಂತರ ಮತ್ತೊಮ್ಮೆ ನಡೆದ ಸಮ್ಮೇಳನದ ಸಮಯದಲ್ಲಿ ಅದೇ ವೀರಪ್ಪನ್ ಮಾಜಿ ಸಚಿವ ನಾಗಪ್ಪನವರನ್ನು ಹತ್ಯೆಗೈದ. ಆ ಸಮಯದಲ್ಲೂ ಮುಖ್ಯಮಂತ್ರಿ ಕೃಷ್ಣ 'ಅಕ್ಕ'ದಲ್ಲಿ ಭಾಗ... ಸಲು ಸಾಧ್ಯವಾಗಲಿಲ್ಲ.

ನಂತರ ಕಾಂ... -ಜೆಡಿಎಸ್ ಸಮ್ಮಿಶ್ರ ಸರ್ಕಾರ ಅಸ್ತಿತ್ವಕ್ಕೆ ಬಂದು ಧರ್ಮಸಿಂಗ್ ಮುಖ್ಯಮಂತ್ರಿಯಾದ ಸಂದರ್ಭದಲ್ಲೂ 'ಅ... ಮ್ಮೇಳನದಲ್ಲಿ ಭಾಗವಹಿಸುವ ಜವಾಬ್ದಾರಿ, ಉಪಮುಖ್ಯಮಂತ್ರಿ ಸಿದ್ದರಾಮಯ್ಯನವರ ಪಾಲಿಗೆ ಬಂತು. ಈಗ ...ರಸ್ವಾಮಿಯವರು "ಅನಾವೃಷ್ಟಿಯ" ಕಾರಣ ನೀಡಿ ಡಿಸಿಎಂ ಯಡಿಯೂರಪ್ಪನವರನ್ನು, ಗೃಹ ಸಚಿವ ಎಂ.ಪಿ. ...ಶರನ್ನು ಸಾಗಹಾಕಿದ್ದಾರೆ.


ಇದು 'ಅಕ್ಕ'ನ ದುರ... ಷ್ಟವೋ? ರಾಜ್ಯದ ಮುಖ್ಯಮಂತ್ರಿಗಳ ದೌರ್ಭಾಗ್ಯವೋ? ಗೊತ್ತಿಲ್ಲ.

ಕಲ್ಪನೆಯ ಮೇಲೆ ಒಂದು ಭ್ರಾಂತಿಯುಂಟಾಗುವಂತೆ ಮಾಡುವ ರೀತಿಯಲ್ಲಿ ಶಬ್ದಗಳನ್ನು ...ಳವಡಿಸುವ ಕಲೆಯೇ ಕವಿತೆ. -ಮೆಕಾಲೆ

ರೇಪಿಸ್ಟ್‌ಗಳಿಗೆ ಎಂ.ಪಿ. ಪ್ರಕಾಶ್ ಪುತ್ರನೇ ಬಾಡಿಗಾರ್ಡ್!

ಬಳ್ಳಾರಿ


ಗಣಿ ಗದ್ದಲದಲ್ಲಿ ಗದಿಬಿಡಿಯಿಂದ ಮಣ್ಣು ಎತ್ತಿ ಮಾನಗೇಡಿಯಂತಾಗಿರುವ ಎಂ.ಪಿ. ರವಿ ಈಗ ಹೂವಿನ ಹಡಗಲಿಯ ರೇಪಿಸ್ಟರನ್ನು ರಕ್ಷಿಸುವ 'ಸಂಸ್ಕೃತಿ ಏಳಿಗೆ' ಕಾರ್ಯಕ್ರಮದಲ್ಲಿ ನಿರತನಾಗಿದ್ದಾನೆ. ಅಪ್ಪ ಗೃಹಮಂತ್ರಿ ಎಂ.ಪಿ. ಪ್ರಕಾಶ್‌ರ ಹೆಸರಿಗೆ ಮಸಿ ಬಳಿಯಲೆಂದೇ ರಾಜಕಾರಣ ಮಾಡುತ್ತಿರುವ ರವಿಯೀಗ ರೇಪಿಸ್ಟ್ ರವಿಶಾಸ್ತ್ರಿ ಎಂಬುವವನನ್ನು ರಕ್ಷಿಸುತ್ತಿದ್ದಾನೆ.


ಎಂ.ಪಿ.ರವಿ

ರೇಪಿಸ್ಟನ ಮೇಲೆ ಎಂ.ಪಿ. ರವಿಗ್ಯಾಕಿಷ್ಟು ಮಮತೆ?

ಕಳೆದ ಬಾರಿ ಎಂ.ಪಿ. ಪ್ರಕಾಶರು ಎಂ.ಎಲ್.ಎ. ಆಗಲು ಸಹಕರಿಸಿದ್ದ ದೂದ್ಯಾನಾಯ್ಕನ ಮಗನೇ ರೇಪಿಸ್ಟ್ ಆಗಿರುವುದರಿಂದ ಎಂ.ಪಿ. ರವಿ ಋಣ ತೀರಿಸದೇ ಬಿಟ್ಟಾನೆಯೇ? ಮಾಜಿ ಜಿ.ಪಂ. ಸದಸ್ಯ ದೂದ್ಯಾನಾಯ್ಕನಂತಹವರು ಜೊತೆಗಿದ್ದರೆ ಮುಂದೆ ತಾನೂ ಎಂ.ಎಲ್.ಎ. ಆಗೋದು easy ಎಂದು ಲೆಕ್ಕ ಹಾಕಿದೆ ಪ್ರಕಾಶರ ಪಾಪಿ ಪುತ್ರ ರವಿ.


ಪ್ರಗತಿಪರರ ಪ್ರತಿಭಟನೆ




ಬಲಿಯಾದ ಹುಡುಗಿ ಇನ್ನೂ ಹತ್ತನೇ ತರಗತಿಯಲ್ಲಿರುವ ಅಪ್ರಾಪ್ತೆ, ಬಡ ಲಂಬಾಣಿ ಕುಟುಂಬದ ಈ ಹುಡುಗಿ ರಾಜ್ಯಮಟ್ಟದ ಕ್ರೀಡಾಪಟು. ಇಲ್ಲಿಯ ಸಿಪಿಐ ಪಾಂಡು ರಂಗಯ್ಯನಂತೂ ಪುಟ್ಟಾಪೂರಾ ಮಾನಗೇಡಿ ಮನುಷ್ಯ... ಈತ ಎಂ.ಪಿ. ರವಿಯ ನಿಷ್ಠ ಭಂಟ. ಈ ಸಿಪಿಐ ಖುದ್ದು ತಾನೇ ಓಡಾಡಿ, ಡಾಕ್ಟರುಗಳ ಮೇಲೆ ಒತ್ತಡ ತಂದು ರೇಪ್ ಕೇಸನ್ನು ಮುಚ್ಚಿಹಾಕಿ ಕಾಸು ಬಾಚಿಕೊಂಡಿದ್ದಾನೆ. ರೇಪಿಸ್ಟ್‌ನ ಅಪ್ಪ ಮಾಜಿ ಜಿ.ಪಂ. ಸದಸ್ಯ ದೂದ್ಯಾನಾಯ್ಕ 3 ಲಕ್ಷ ತುರುಕಿದ್ದೇ ತಡ ಸಿಪಿಐ ಪಾಂಡು ರಂಗಯ್ಯ ತಣ್ಣಗಾಗಿಬಿಟ್ಟ. ಎಂ.ಪಿ. ರವಿಯ ಕೆಲಸ ಮಾಡಿದಂತೆಯೂ ಆಯ್ತು, 3 ಲಕ್ಷ ರೊಕ್ಕವೂ ಬಂದಿತು ಎನ್ನುತ್ತಿದ್ದಾನೆ ಈ ಪಾಪಿ ಸಿಪಿಐ.

ರೇಪು, ಕೊಲೆ ಬೆದರಿಕೆ!

ಹಾಸ್ಟೆಲ್ಲಿನಲ್ಲಿದ್ದು ಎಂ.ಎಂ. ಪಾಟೀಲ್ ಹೈಸ್ಕೂಲಿನಲ್ಲಿ ಓದುವ ಸರೋಜಳ ಮೇಲೆ ಕಣ್ಣು ಹಾಕಿದ್ದ ದೂದ್ಯಾನಾಯ್ಕನ ಪುಂಡ ಪುತ್ರ ರವಿಶಾಸ್ತ್ರಿ ಜುಲೈ 25ರಂದು ಇನ್ನೂ ಮೂರು ಜನ ಪುಂಡರೊಂದಿಗೆ ಹಾಸ್ಟೆಲ್‌ಗೆ ನುಗ್ಗಿದ್ದಾನೆ. ಸರೋಜಳೊಂದಿಗೆ ಮಾತಿಗಿಳಿದು, ಸ್ವಲ್ಪ ಪರ್ಸನಲ್ ಮಾತಾಡ್ಬೇಕು ಬಾ ಎಂದು ಧಮಕಿ ಹಾಕಿದ್ದಾನೆ. ದೂದ್ಯಾನಾಯ್ಕನ ಕುಟುಂಬದ ಚರಿತ್ರೆ ಬಲ್ಲ ಸರೋಜ ನಿರಾಕರಿಸಿದ್ದಾಳೆ. ವ್ಯಗ್ರಗೊಂಡ ರವಿಶಾಸ್ತ್ರಿ ಸರೋಜಳ ತಂದೆಯನ್ನು ಕೊಲ್ಲುವುದಾಗಿ ಬೆದರಿಸಿದ್ದಾನೆ. ಅಪಾಯದಿಂದ ಪಾರಾಗಲು ಇಲ್ಲೇ ಮಾತಾಡಿಬಿಡಿ ಎಂದಿದ್ದಾಳೆ ಸರೋಜ. ಇಲ್ಲೇ ಹೊರಗೆ ಸಮೀಪದಲ್ಲೇ ಮಾತಾಡೋಣ ಎಂದಿದ್ದಾನೆ ರವಿಶಾಸ್ತ್ರಿ. ಆತನ 'ಸಮೀಪ' ಎಂಬ ಮಾತು ನಂಬಿದ ಸರೋಜ ಹೊರಬಂದಿದ್ದಾಳೆ. ಉಪಾಯದಿಂದ ಬೈಕ್‌ನಲ್ಲಿ ಸರೋಜಳನ್ನು ಕೂಡ್ರಿಸಿಕೊಂಡ ರವಿಶಾಸ್ತ್ರಿ ಎಂ.ಪಿ.ಪ್ರಕಾಶ್ ಮನೆ ಮುಂದೆ ಹಾಯ್ದುಕೊಂಡೇ ಊರ ಸಮೀಪದ ಹಳ್ಳ ತಲುಪಿದ್ದಾನೆ. ಸರೋಜ ಪ್ರತಿಭಟಿಸುತ್ತಲೇ ಬಂದಿದ್ದು ಪ್ರಯೋಜನಕ್ಕೆ ಬಂದಿಲ್ಲ, ಹಳ್ಳದ ದಂಡೆಯಲ್ಲಿ ತನ್ನ ಮೂರು ಮುತ್ಕಾಳ ಮಿತ್ರ ಎದುರೇ ಸರೋಜ ಮೇಲೆರಗಿದ್ದಾನೆ ರವಿಶಾಸ್ತ್ರಿ. ಎಲ್ಲ ಮುಗಿದ ಮೇಲೆ ಈ ಸಂಗತಿಯನ್ನು ಎಲ್ಲಿಯಾದರೂ ಬಾಯಿಬಿಟ್ಟರೆ ಅವಳ ತಂದೆಯನ್ನು ಕೊಲ್ಲುವುದಾಗಿ ಬೆದರಿಕೆ ಹಾಕಿದ್ದಾನೆ ಕಾಮಪಿಶಾಚಿ ರವಿಶಾಸ್ತ್ರಿ

ಪೋಲಿ ವಿರುದ್ಧ ಪೊಲೀಸ್ ಠಾಣೆಗೆ

ದೈಹಿಕವಾಗಿ, ಮಾನಸಿಕವಾಗಿ, ಕುಸಿದುಹೋಗಿದ್ದ ಸರೋಜ ನೇರವಾಗಿ ತಂದೆಯಲ್ಲಿಗೆ ಹೋಗಿದ್ದಾಳೆ. ತಂದೆ ಮೋತಿನಾಯ್ಕ ಹೆಂಡತಿ ಮಗಳೊಂದಿಗೆ ಠಾಣೆಗೆ ಹೋಗಿ ದೂರು ನೀಡಿದ್ದಾನೆ. ಅಷ್ಟೊತ್ತಿಗೆ ರವಿಶಾಸ್ತ್ರಿ ತಂದೆ ಬಡ್ಡಿ ಕುಳ ದೂದ್ಯಾನಾಯ್ಕ ಸಿಪಿಐ ಪಾಂಡು ರಂಗಯ್ಯನಿಗೆ ರೊಕ್ಕದ ಆಮಿಷ ಒಡ್ಡಿಬಿಟ್ಟಿದ್ದ. ಹಾಗೆಯೇ ಹೂವಿನ ಹಡಗಲಿಗೆ ಗೃಹಮಂತ್ರಿ ಎಂಬಂತಾದುವ ಎಂ.ಪಿ. ರವಿಯಿಂದ ಫೋನ್ ಮಾಡಿಸಿದ್ದ. ದೂರು ಕೊಟ್ಟು ಮೆಡಿಕಲ್ ಟೆಸ್ಟ್‌ಗೆಂದು ಸರ್ಕಾರಿ ಆಸ್ಪತ್ರೆಗೆ ಹೋಗಿದ್ದರು ಸರೋಜ ಕುಟುಂಬದವರು. ಆಸ್ಪತ್ರೆಗೆ ಧಾವಿಸಿದ ಸಿಪಿಐ ಪಾಂಡುರಂಗಯ್ಯ ಡಾಕ್ಟರುಗಳೊಂದಿಗೆ ಡೀಲು ಕುದುರಿಸಲು ನೋಡಿದ್ದಾನೆ. ಡಾ. ರಾಜ್‌ಕುಮಾರ್ ಎನ್ನುವವರು ಸಿಪಿಐಗೆ ಮಣೆ ಹಾಕಿಲ್ಲ, ನಂತರ ಲೇಡಿ ಡಾಕ್ಟರ್ ಸುಲೋಚನಮ್ಮನವರೂ ಸಿಪಿಐ ಮಾತಿಗೆ ಒಪ್ಪಿಲ್ಲ. ಕೊನೆಗೆ 'ಹೈ ಇನ್‌ಫ್ಲುಯೆನ್ಸ್' ತಂದ ಪಾಂಡುರಂಗಯ್ಯ ರೇಪು ಕೇಸು ಮುಚ್ಚಿಹಾಕಿದ್ದಾನೆ.


ರೇಪಿಸ್ಟ್ ರವಿಶಾಸ್ತ್ರಿ

ಪ್ರಗತಿಪರ ಸಂಘಟನೆಗಳ ಪ್ರತಿಭಟನೆ

ಸರೋಜಳ ತಂದೆ ಮೋತಿನಾಯ್ಕ ಹಡಗಲಿಯ ಪ್ರಗತಿಪರ ಸಂಘಟನೆಗಳ ನಾಯಕರನ್ನು ಕಂಡಿದ್ದಾರೆ. ಅಷ್ಟೊತ್ತಿಗೆ ಎಂ.ಪಿ. ರವಿ ತಾನೇ ರವಿಶಾಸ್ತ್ರಿಯನ್ನು ರಕ್ಷಿಸಿದ್ದು ಎಂದು ಬಂಬಡಾ ಹೊಡೆದಿದ್ದ. ಆರೋಪಿಯ ಬಂಧನ ಮಾಡುವಂತೆ ಆಗ್ರಹಿಸಿ ಆಗಸ್ಟ್ 17ರಂದು ಕಿಸಾನ್‌ಸಭಾ, ಎಐಟಿಯುಸಿ, ಎಸ್‌ಎಫ್‌ಐ ಸಂಘಟನೆಗಳು ಸಾಮೂಹಿಕ ಪ್ರತಿಭಟನಾ ರ‍್ಯಾಲಿ ನಡೆಸಿವೆ. ಪ್ರಗತಿಪರ ಚಿಂತಕ ಪೀರಬಾಷಾ, ಮತ್ತಿಹಳ್ಳಿ ಬಸವರಾಜ, ಹೊಸಳ್ಳಿ ಮಲ್ಲೇಶ್, ಪದ್ಮಾವತಿ, ಉಮೇಶ್, ವಿಜಯಲಕ್ಷ್ಮಿ, ಸುಜಾತ ಹುಳ್ಳಿ ಮುಂತಾದವರ ಪ್ರಯತ್ನದಿಂದಾಗಿ 3 ಸಾವಿರಕ್ಕಿಂತ ಹೆಚ್ಚು ಜನ ಸೇರಿದ್ದರು. ಇದೆಲ್ಲ ಎಂ.ಪಿ. ಪ್ರಕಾಶ್‌ರಿಗೆ ಗೊತ್ತಾದರೂ ಆರೋಪಿ ತಲೆಮರೆಸಿಕೊಂಡಿದ್ದಾನೆ ಎಂದು ಸುಳ್ಳು ಹೇಳುತ್ತಿದ್ದಾರೆ ಪೊಲೀಸರು. ತಮ್ಮನ್ನು ಗೆಲ್ಲಿಸಿದ ದೂದ್ಯಾನಾಯ್ಕನ ಪರ ನಿಂತಿರುವ ಎಂ.ಪಿ. ಪ್ರಕಾಶ್ ಇರುವ ಒಂದಿಷ್ಟು ಗೌರವವನ್ನು ಕಳೆದುಕೊಳ್ಳುತ್ತಿದ್ದಾರಷ್ಟೇ.


ಈಗಷ್ಟೇ ಆರೋಪಿ ರವಿಶಾಸ್ತ್ರಿ ನಿರೀಕ್ಷಣಾ ಜಾಮೀನು ಪಡೆದು ಹಡಗಲಿಯ ರಸ್ತೆಗಳಲ್ಲಿ ದೂಂದಾಂ ತಿರುಗುತ್ತಿದ್ದಾನೆ.

ಬಳ್ಳಾರಿಯ ನಿಸರ್ಗದ ಮೇಲೆ ಅತ್ಯಾಚಾರ ಮಾಡಿದ ಗಣಿಗಳ್ಳ ಮಗನೀಗ ಹಡಗಲಿಯಲ್ಲಿ ರೇಪಿಸ್ಟರ ರಕ್ಷಣೆ ಮಾಡುತ್ತಿದ್ದಾನೆ. ಸತ್ತು ಹೋಯ್ತಾ ಪ್ರಕಾಶ್ ನೈತಿಕ ಪ್ರಜ್ಞೆ?

-ಬಸವರಾಜ ಸೂಳಿಭಾವಿ

ಚಕ್ರಬಡ್ಡಿ ಕುಳ

ಹಡಗಲಿ ತಾಲ್ಲೂಕಿನಲ್ಲಿ ದೂದ್ಯಾನಾಯಕ ಚಕ್ರಬಡ್ಡಿ ಕುಳವೆಂದೇ ಪ್ರಸಿದ್ಧ. ದೂದ್ಯಾನ ಅತ್ತೆ ಗೂಗಲಾಬಾಯಿ ಹಡಗಲಿ ತಾಲ್ಲೂಕು ಕಾಂಗ್ರೆಸ್ ಪಾಳೆಯದ ಗಾಡ್‌ಮದರ್. ಈ ದೂದ್ಯಾನೂ ಕಾಂಗ್ರೆಸ್ಸಿಗನೆ. ಗೂಗಲಾಬಾಯಿ ದೂದ್ಯಾನಿಗೆ ಅನಾಮತ್ತಾಗಿ ನೂರು ಎಕರೆ ಜಮೀನು ಕೊಟ್ಟು ಮಗಳನ್ನು ಮದುವೆ ಮಾಡಿಕೊಟ್ಟಿದ್ದಾಳೆ. ಅತ್ತೆಯಿಂದ ಜಮೀನಲ್ಲದೆ ದೊಡ್ಡ ಪ್ರಮಾಣದ ನಗದು ರೊಕ್ಕದ ಒಡೆಯನಾದ ದೂದ್ಯಾ ಅತ್ತೆಯ ಕಸುಬಾದ ಬಡ್ಡಿ ವ್ಯವಹಾರ ಮಾಡುತ್ತಾ ಕೋಟ್ಯಾಧೀಶನಾಗಿದ್ದಾನೆ. ಏನಿಲ್ಲವೆಂದರೂ ವಾರ್ಷಿಕವಾಗಿ ಬಡ್ಡಿಯಿಂದ ಆತ ಗಳಿಸುವ ಆದಾಯ ಐವತ್ತು ಲಕ್ಷ. ತಾಲ್ಲೂಕಿನಲ್ಲಿ ರಾಜಕೀಯ ಲೆಕ್ಕಾಚಾರವನ್ನು ತೀರ್ಮಾನಿಸುವ ಪ್ರಮಾಣದಲ್ಲಿರುವ ದೂದ್ಯಾನ ಬಡ್ಡಿ ಹಿಡಿತದ ನೆರಳಿನಲ್ಲೇ ಬಡ ಲಂಬಾಣಿಗರು ಉಸಿರಾಡುವ ಸ್ಥಿತಿಯಿದೆ.



ದೂದ್ಯಾನಾಯಕ

ಈತನ ನೆರವು ಪಡೆದ ಕಾಂಗ್ರೆಸ್ಸಿನ ಹಾಲಪ್ಪ ಒಂದು ಸಲ ಎಂ.ಪಿ. ಪ್ರಕಾಶರನ್ನು ದೊಡ್ಡ ಅಂತರದಿಂದ ಸೋಲಿಸಿ ವಿಧಾನಸಭೆಯ ಮೆಟ್ಟಿಲೇರಿದ್ದ. ಹಾಲಪ್ಪನ ಶಾಸಕತ್ವದ ಕಾಲದಲ್ಲಿ ಈ ಸಂಬಂಧ ಹಳಸಿತು. ಕಾಂಗ್ರೆಸ್ ಪಕ್ಷದಲ್ಲಿದ್ದೂ ಒಬ್ಬರನ್ನೊಬ್ಬರು ಕಂಡರಾಗದ ಸ್ಥಿತಿ ನಿರ್ಮಾಣವಾಯಿತು. ಅದನ್ನು ಸರಿಯಾಗಿ ಬಳಸಿಕೊಂಡವರು ಎಂ.ಪಿ. ಪ್ರಕಾಶ್. ದೂದ್ಯಾನಾಯಕನಿಗೆ ಒತ್ತಾಸೆಯಾಗಿ ನಿಂತ ಪರಿಣಾಮವಾಗಿ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದಲ್ಲಿದ್ದುಕೊಂಡೇ ಆತ ಹಾಲಪ್ಪನ ವಿರುದ್ಧ ವ್ಯವಸ್ಥಿತವಾಗಿ ಕೆಲಸ ಮಾಡಿದ. ಅದರಿಂದಾಗಿ ಹಾಲಪ್ಪನನ್ನು ಸೋಲಿಸಲು ಎಂ.ಪಿ. ಪ್ರಕಾಶರಿಗೆ ಸಾಧ್ಯವಾಯಿತು. ಎಲ್ಲ ಚಟುವಟಿಕೆಗಳಲ್ಲೂ ಅವರಿಬ್ಬರ ಮಕ್ಕಳಾದ ರವಿ ಮತ್ತು ರವಿಶಾಸ್ತ್ರಿಯಲ್ಲಿ ಸ್ನೇಹ ಬೆಳೆಯಿತು. ಪುಂಡಾಟಿಕೆ ಮತ್ತು ಸ್ತ್ರೀಲೋಲ ಗುಣಗಳಲ್ಲಿ ಅವರಿಬ್ಬರಲ್ಲೂ ಸಮಾನ ಆಸಕ್ತಿಯ ಗುಣಗಳಿರುವುದರಿಂದ ಸ್ನೇಹ ಗಟ್ಟಿಯಾಯಿತು.

ಅಲ್ಕೋಡ್, ಬಯ್ಯಾಪುರ, ಮುದ್ದಪ್ಪ

ಸಿದ್ಧು ಇಲ್ದೆ ಹ್ಯಂಗ ಗೆಲ್ತಿರಪ್ಪ?

ಒಬ್ಬರು ಹಾಲಿಮಂತ್ರಿ... ಇಬ್ಬರು ಮಾಜಿ ಸಚಿವರು.. ಎಲ್ಲರೂ ಜೆಡಿ(ಎಸ್).... ಶುರುವಾಗಿದೆ ತಿಕ್ಕಾಟ. ಮಂತ್ರಿಗಿರಿ ವಂಚಿತ ಅಮರೇಗೌಡ ಬಯ್ಯಾಪುರ, ಮುನಿಯಪ್ಪ ಮುದ್ದಪ್ಪ ಸಣ್ಣಗೆ ಭಿನ್ನಮತ ಶುರುವಿಟ್ಟುಕೊಂಡಿದ್ದಾರೆ. 'ಒಟ್ನಲ್ಲಿ ಗೂಟದ ಕಾರು ಸಿಕ್ಕೈತಲ್ಲ' ಎಂದು ಎಂಜಾಯ್ ಮಾಡ್ತಿದ್ದಾರೆ ಮಂತ್ರಿ ಅಲ್ಕೋಡ್ ಹನುಮಂತಪ್ಪ.



ಈ ಮೂವರು ಜೆಡಿಎಸ್ ನಾಯಕರಿಗೆ ಮುಂದಿನ ಎಲೆಕ್ಷನ್ನಿನ ಚಿಂತೆ ಈಗಲೇ ಶುರುವಾದಂತಿದೆ. ಏಕೆಂದರೆ ಕಳೆದ ಸಾರಿ ಈ ಮೂವರು 'ಮಹಾತ್ಮರು' ಗೆದ್ದಿದ್ದೇ ಕುರುಬರ ನಿರ್ಣಾಯಕ ಮತಗಳಿಂದ. ಅದು ಸಿದ್ದು ಎಫೆಕ್ಟ್. ಈಗ ನೋಡಿದರೆ ಸಿದ್ದು ಕಾಂಗ್ರೆಸ್‌ನಲ್ಲಿ ವಿಲೀನವಾಗಿದ್ದಾರೆ. ಅಂದರೆ ರಾಯಚೂರಿನ ಈ ಮೂವರಿಗೆ ಕುರುಬರು ಕೈ ಕೊಟ್ಟರೆಂದೇ ಅರ್ಥ! ಮತ್ತೀಗ ಕ್ಷೇತ್ರ ಮರು ವಿಂಗಡಣೆ, ಮೀಸಲು ಕ್ಷೇತ್ರಗಳ ನಿರ್ಧಾರ ಎಂಬ ಗುಮ್ಮಗಳೂ ಈ ಮೂವರನ್ನು ಕಾಡುತ್ತಿವೆ.


ಬಯ್ಯಾಪುರ: ಕಾಂಗ್ರೆಸ್‌ನತ್ತ?

ಮೂರನೇ ಬಾರಿ ಶಾಸಕರಾಗಿರುವ ಬಯ್ಯಾಪುರ ಧರ್ಮಸಿಂಗ್ ಸರ್ಕಾರದಲ್ಲಿ ಸಕ್ಕರೆ ಮತ್ತು ಜವಳಿ ಖಾತೆ ಗಿಟ್ಟಿಸಿದ್ದರು. ಆದರೆ ಸಕ್ಕರೆ ರುಚಿ ಪೂರ್ತಿ ಅನುಭವಿಸಲೇ ಇಲ್ಲಂತೆ. ಕುಮಾರಸ್ವಾಮಿ ರೆಸಾರ್ಟ್ ರಾಜಕೀಯ ಶುರು ಮಾಡಿದಾಗ ಸದಾ ಪಕ್ಕದಲ್ಲಿ ಬಯ್ಯಾಪುರ ಇದ್ದೇ ಇರುತ್ತಿದ್ದರು. ಸರ್ಕಾರ ರಚನೆಗೆ ತುಂಬಾ ಓಡಾಡಿದರು. ಆದರೆ ಮಂತ್ರಿಗಿರಿ ಸಿಗದೇ ನಿರಾಶರಾಗಬೇಕಾಯ್ತು. ಈಗ ಕುಮಾರಸ್ವಾಮಿ ಇಪ್ಪತ್ತು ದಿನಗಳಲ್ಲಿ ಸಂಪುಟ ಪುನರ್ರಚನೆ, ನಿಗಮ-ಮಂಡಳಿ ನೇಮಕ ಮಾಡುವುದಾಗಿ ಹೇಳಿದ್ದು ಬಯ್ಯಾಪುರಗೆ ಒಂದಿಷ್ಟು ಆಶೆ ಮೂಡಿಸಿದೆ. ಮಂತ್ರಿಗಿರಿ ಸಿಗದಿದ್ದರೆ ಬಯ್ಯಾಪುರ ಕಾಂಗ್ರೆಸ್‌ನತ್ತ ವಾಲುವ ಚಾನ್ಸೂ ಇದೆ. ಅದೀಗ ಸುದ್ದಿಯಾಗಿ ಓಡಾಡುತ್ತಲೂ ಇದೆ. ಅಲ್ಕೋಡ್ ಹನುಮಂತಪ್ಪ ಮೇಲಾಟವೂ ಬಯ್ಯಾಪುರರ ಕಣ್ಣು ಕೆಂಪಾಗಿಸಿದೆ. ಮುಂದೆ ಜೆಡಿಎಸ್‌ನಿಂದ ಸ್ಪರ್ಧಿಸಿದರೆ ಸೋತಾ ಹೊಡೆಯುವುದು ಗ್ಯಾರಂಟಿ. ಕುರುಬರ ಮತಗಳ ಮೇಲೆ ಕಣ್ಣಿಟ್ಟಿರುವ ಲಿಂಗಸೂರಿನ ಬಯ್ಯಾಪುರರು ಸಿದ್ದು ಕೈ ಕುಲುಕಲಿದ್ದಾರೆಯೇ?



ಮುದ್ದಪ್ಪ : ಮೊದಲ ಕಿಡಿ!

ಅಂದಂತೆ ಇತ್ತೀಚೆಗೆ ಜೆಡಿಎಸ್‌ನ ಶಾಸಕಾಂಗ ಪಕ್ಷದ ಸಭೆಯಲ್ಲಿ ಮೊಟ್ಟ ಮೊದಲ ಬಾರಿಗೆ ಕುಮಾರಣ್ಣ ರೇವಣ್ಣರನ್ನು ತರಾಟೆಗೆ ತೆಗೆದುಕೊಳ್ಳುವ ಮೂಲಕ ಆಂತರಿಕ ಬಂಡಾಯದ ಮೊದಲ ಕಿಡಿ ಹಚ್ಚಿದ್ದ ಕಲ್ಮಲಾ ಶಾಸಕ,ಮಾಜಿ ಸಚಿವ ಮುನಿಯಪ್ಪ ಮುದ್ದಪ್ಪರಿಗೀಗ ಯಾವುದಾದರೂ ಬೋರ್ಡ್ ಚೇರ್ಮನ್‌ಗಿರಿ ಸಿಕ್ಕರೂ ಸರಿಯೇ. ಅಷ್ಟು ಹತಾಶರಾಗಿದ್ದಾರೆ ಮುದ್ದಪ್ಪ. ತಮ್ಮಿಬ್ಬರು ಅಡ್ನಾಡಿ ಅಳಿಯಂದಿರ ರಾಜಕೀಯ ಏಳಿಗೆಗೆ ಶ್ರಮಿಸುತ್ತಲೇ ಇರುವ ಮುನಿಯಪ್ಪ ಮುದ್ದಪ್ಪರಿಗೆ ಕಳೆದ ಬಾರಿ ಗೆಲುವು ತಂದುಕೊಡುವಲ್ಲಿ ಸಿದ್ಧು ಪ್ರಭಾವವೂ ಸಹಾಯ ಮಾಡಿತ್ತು. ಈಗ ಗೌಡರು, ಮಕ್ಕಳ ಸ್ವಹಿತಾಶಕ್ತಿ ಪಾಲಿಟಿಕ್ಸ್‌ನಿಂದಾಗಿ ಸಚಿವಗಿರಿ ವಂಚಿತರಾಗಿರುವ ಮುದ್ದಪ್ಪ ಮತ್ತೆ ಗೆಲ್ಲಬೇಕೆಂದರೆ ಸಿದ್ದು ಪ್ರಭಾವ ಬೇಕೆಬೇಕು. ಅಲ್ಲಿಗೆ ಮತ್ತೊಬ್ಬ ದಳವಾಯಿ ಸಿದ್ದುರ ಕೈವಶವಾಗಲಿದೆ.



ಅಲ್ಕೋಡ್: ಸೇಫಾ? ಸಾಫಾ?

ಕ್ರೀಡೆ ಮತ್ತು ಯುವಜನ ಸೇವೆ ಇಲಾಖೆಗೆ ಈ ಸಚಿವ ಅಲ್ಕೋಡ್‌ರಿಂದ ಲಾಭವಾಯ್ತೋ ಇಲ್ಲವೋ? ಆದರೆ ಸಚಿವರ ಮನರಂಜನಾ ಕ್ರೀಡೆಗಳಂತೂ ಯಥೇಚ್ಛವಾಗಿ ಸಾಗಿವೆ.

ಜಿಲ್ಲಾ ಉಸ್ತುವಾರಿ ಸಚಿವರಾಗಿ ಕಡಿದದ್ದೂ ಅಷ್ಟಕಷ್ಟೇ. ಬಯ್ಯಾಪುರ, ಮುದ್ದಪ್ಪರ ಗೆಲುವಿನಲ್ಲಿ ಸಿದ್ಧು ಪ್ರಭಾವ ಕೆಲಸ ಮಾಡಿತ್ತು. ಹಾಗೆಯೇ ಅಲ್ಕೋಡ್‌ರಿಗೆ ಟಿಕೆಟ್ ಕೊಡಿಸಿದ್ದೇ ಸಿದ್ಧರಾಮಯ್ಯ!

ಮಾಜಿ ಸಚಿವೆ ಬಿ.ಟಿ. ಲಲಿತಾನಾಯ್ಕರ ಪಾಲಾಗಲಿದ್ದ ದೇವದುರ್ಗದ ಜೆಡಿಎಸ್ ಟಿಕೆಟನ್ನು ಅಲ್ಕೋಡ್‌ಗೆ ಸಿದ್ಧು ಕೊಡಿಸಿದರು. ಈಗ ಫುಲ್‌ಸ್ಪೀಡ್‌ನಲ್ಲಿ ಲಂಚ್, ಡಿನ್ನರ್, ನಡೆಸಿರುವ ಅಲ್ಕೋಡ್‌ರು ರಾಯಚೂರಿಗೆ ಒಂದು ಗತಿ ಕಾಣಿಸಲು ತಯ್ಯಾರಾಗಿಬಿಟ್ಟಿದ್ದಾರೆ. ಮುಂದಿನ ಸಲ ಲಗಾಟಿ ಹೊಡೆಯುವುದಂತೂ ಗ್ಯಾರಂಟಿ. ಒಟ್ಟಿನಲ್ಲಿ ಸಿದ್ದುರ ಸಹಾಯದಿಂದ ಕಳೆದ ಬಾರಿ ಗೆದ್ದಿದ್ದ ಬಯ್ಯಾಪುರ, ಮುದ್ದಪ್ಪರೀಗ ಗೊಂದಲದಲ್ಲಿದ್ದರೆ ಅಲ್ಕೋಡ್ ಖುಷಿಯಿಂದ ತಿರುಗುತ್ತಿದ್ದಾರೆ.


ಬಯ್ಯಾಪುರ ಮತ್ತು ಮುದ್ದಪ್ಪ ಸಿದ್ದು ವ್ಯಾಮೋಹಕ್ಕೊಳಗಾಗಿ 'ಕೈ' ಹಿಡಿಯುವ ಸಾಧ್ಯತೆಗಳಂತೂ ಇದ್ದೇ ಇವೆ.

-ಅಶೋಕ್ ನೀಮಕರ್

ಸದ್ಯದಲ್ಲಿ ಹಾಗೂ ಹತ್ತಿರದಲ್ಲಿ ಇರುವುದರ ಬಗ್ಗೆ ನಮ್ಮ ಅತೃಪ್ತಿಯ ಅಭಿವ್ಯಕ್ತಿಯೇ ಕಾವ್ಯ - ಡಾಯ್ಲ್

ಸಾರಿಗೆ ಇಲಾಖೆ


ಸಾರಿಸಲೊಬ್ಬ ನಾರಾಯಣಗೌಡ



ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರಿಗೆ ಎಲ್ಲರೂ ತಿಳಿದಿರುವಂತೆ ನಾಲ್ವರು ಗಂಡು ಮಕ್ಕಳು. ಅವರೆಲ್ಲ ಈಗಾಗಲೇ ಭಾರತಾದ್ಯಂತ "ಜಗತ್ಪ್ರಸಿದ್ಧಿ" ಹೊಂದಿರುವುದರಿಂದ ಅವರನ್ನು ಪರಿಚಯಿಸುವ ಅವಶ್ಯಕತೆ ಇಲ್ಲ. ಆದರೆ ಗೌಡರ ಮಾನಸ ಪುತ್ರ ಎಂ.ಸಿ. ನಾರಾಯಣಗೌಡರ ಬಗ್ಗೆ ತಿಳಿಯುವುದು ಅಗತ್ಯ. ಇತ್ತೀಚೆಗೆ ಸಾರಿಗೆ ಆಯುಕ್ತರಾಗಿ ಅಧಿಕಾರ ವಹಿಸಿಕೊಂಡ ನಂತರ ಆ ಇಲಾಖೆಯಲ್ಲಿ ಈತ ಮಾಡಿದ 'ಸಾಧನೆ'ಗಳು ಅಂತಹವು!

ಬಹುಶಃ ಇಂಡಿಯನ್ ಪೊಲೀಸ್ ಸರ್ವೀಸ್ ಇತಿಹಾಸದಲ್ಲೇ (ಐಪಿಎಸ್) ಪ್ರಥಮ ಬಾರಿಗೆ ಕರ್ನಾಟಕ ರಾಜ್ಯ ಮೀಸಲು ಪಡೆಯಲ್ಲಿದ್ದ ಅಧಿಕಾರಿಯೊಬ್ಬರನ್ನು, ಸಿವಿಲ್ ಪೊಲೀಸ್ ಪಡೆಗೆ ಸೇರ್ಪಡೆಗೊಳಿಸಿರುವ ಏಕೈಕ ಅಧಿಕಾರಿ ಈ ನಾರಾಯಣಗೌಡ. ಅಂದಹಾಗೆ ಆತನಿಗೆ IPS ಗಿರಿ ಕೊಡಲೆಂದೇ ದೇವೇಗೌಡರು ಪ್ರಧಾನಿ ಆಗಿದ್ದಾಗ IPS ಕಾನೂನಿನಲ್ಲೇ ತಿದ್ದುಪಡಿ ತಂದಿದ್ದರು. ಅಷ್ಟೇ ಅಲ್ಲ, ನಾರಾಯಣಗೌಡನನ್ನು IPS ಶ್ರೇಣಿಗೆ ಪ್ರಮೋಷನ್ ನೀಡಿದ ನಂತರ IPS ಕಾನೂನಿನಲ್ಲಿ ಮತ್ತೆ ತಿದ್ದುಪಡಿ ತಂದು ಬೇರೆ ಯಾರೂ ಹೀಗೆ ಬಡ್ತಿ ಪಡೆಯದಂತೆ ನೋಡಿಕೊಂಡರು ಗೌಡರು. ತಮ್ಮ ಮಾನಸಪುತ್ರನ ಬಗ್ಗೆ ಅವರಿಗಿರುವ ಕಾಳಜಿಯ ಉದಾಹರಣೆ ಇದು. ಇಂತಹ ವಿಶೇಷ ತಿದ್ದುಪಡಿಯ ಮೂಲಕ IPS ಆದ ಎಂ.ಸಿ. ನಾರಾಯಣಗೌಡ ಆನಂತರ ಸೇವೆ ಸಲ್ಲಿಸಿದ್ದೆಲ್ಲಾ ಹುಲುಸಾಗಿ ಮೇಯಲಿರುವ ಜಾಗಗಳಲ್ಲಿ.

ಕಳೆದ ಫೆಬ್ರವರಿ ತಿಂಗಳಲ್ಲಿ ಎಚ್.ಡಿ. ಕುಮಾರಸ್ವಾಮಿ ಮುಖ್ಯಮಂತ್ರಿಯಾದ ನಂತರ, ಬೆಂಗಳೂರು ನಗರ ಜಂಟಿ ಪೊಲೀಸ್ ಆಯುಕ್ತರಾಗಿದ್ದ ನಾರಾಯಣಗೌಡರನ್ನು 'ಚಂದಾ' ಎತ್ತುವ ಕೆಲಸಕ್ಕಾಗಿಯೇ ಸಾರಿಗೆ ಇಲಾಖೆಯ ಆಯುಕ್ತರನ್ನಾಗಿ ನೇಮಿಸಲಾಯಿತೆಂಬುದು ಬಹಿರಂಗ ಸತ್ಯ. ಗಣಿಗಾರಿಕೆಯಿಂದ ಹಲವು ಪುಢಾರಿಗಳು ಕೋಟ್ಯಂತರ ರೂಪಾಯಿ ಮಾಡುತ್ತಿದ್ದಾರೆಂದು ಒಂದು ಆರೋಪವಾದರೆ, ಇಂತಹ ಗಣಿಗಳಿಂದ ಅದಿರು ಸಾಗಿಸುವ ಲಾರಿಗಳಿಂದ ಕೋಟ್ಯಂತರ ರೂಪಾಯಿ ಬಾಚುವ ಕಾಂಟ್ರ್ಯಾಕ್ಟ್ ಸಂಪೂರ್ಣ ನಾರಾಯಣ ಗೌಡರ ಹಿಡಿತದಲ್ಲಿದೆ.




ಜೂನ್ ತಿಂಗಳಲ್ಲಿ ಯಾವಾಗ ನಾರಾಯಣಗೌಡರು ಟ್ರಾನ್ಸ್‌ಪೋರ್ಟ್ ಅಧಿಕಾರ ಸ್ವೀಕರಿಸಿ ಸೀಟಿನಲ್ಲಿ ಕೂತರೋ ಅವರ ರೀತಿಯೇ ಡಿಫರೆಂಟ್ ಆಗಿ ಹೋಯ್ತು. "ಸಾರಿಗೆ ಇಲಾಖೆ ಅಂದರೆ, ಲಂಚಕ್ಕೆ ಮತ್ತೊಂದು ಹೆಸರು" ಎಂಬ ಮಾತಿದೆ. ಆದರೆ ನಾರಾಯಣ ಗೌಡರು "ಲಂಚದ ಇಲಾಖೆ ಎಂದರೆ ಸಾರಿಗೆ" ಎಂದು ಬದಲಿಸಿ ಉಣ್ಣಲು ಕೂತುಬಿಟ್ಟರು. ಗೌಡರ ಆಗಮನದ ತನಕ ಲೋಡಿಗೆ 100 ರೂಪಾಯಿ ಕೊಡುತ್ತಿದ್ದ ಮರಳಿನ ಲಾರಿಗಳ ಲಂಚವನ್ನು 350 ರೂಪಾಯಿಗೆ ಏರಿಸಲಾಯ್ತು. ಅದೇ ರೀತಿ, ಬೆಂಗಳೂರನ್ನು ಪ್ರವೇಶಿಸುವ ಖಾಸಗಿ ಬಸ್ಸುಗಳಿಗೆ ಟ್ರಿಪ್ ಒಂದಕ್ಕೆ 500 ರೂಪಾಯಿ ನಿಗದಿ ಪಡಿಸಲಾಯ್ತು.

ಸಾರಿಗೆ ಇಲಾಖೆಯಲ್ಲಿ ಲೈಸೆನ್ಸು, ಪರ್ಮಿಟ್ಟು ಇಂತಹ ಸಣ್ಣಪುಟ್ಟ ಲಂಚಗಳು ಇದ್ದಿದ್ದೇ ಬಿಡಿ. ಅಂತಹ ಸಣ್ಣ ಪುಟ್ಟ ವ್ಯವಹಾರಗಳತ್ತ ಗೌಡರು ಕಣ್ಣು ಹಾಯಿಸುತ್ತಿರಲಿಲ್ಲ. ಅವರು ಅಧಿಕಾರ ಸ್ವೀಕರಿಸಿದ ಶುಭ ಸಂದರ್ಭದಲ್ಲಿ ಗಣಿಗಾರಿಕೆ ಬಿರುಸಾಗಿ ನಡೆಯುತ್ತಿತ್ತು. ಅದಿರು ಸಾಗಣೆಯೇ ಒಂದು ದೊಡ್ಡ ಉದ್ದಿಮೆಯಾಗಿ ಬೆಳೆದಿತ್ತು. ಅದರ ಸಂಪೂರ್ಣ ನಿಯಂತ್ರಣವನ್ನು ಪಡೆದ ಗೌಡರು, ದೊಡ್ಡ ಗೌಡರ ಕುಟುಂಬದ ಆದೇಶದ ಮೇರೆಗೆ ವಸೂಲಾತಿಗೆ ಇಳಿದರು. ಕೇವಲ ಈ ಅದಿರು ಸಾಗಣೆಯ ಲಾರಿಗಳಿಂದ ವಸೂಲಿಯಾಗುವ ಮೊತ್ತವನ್ನು ಕೇಳಿದರೆ ಇದು ಜನಾರ್ಧನ ರೆಡ್ಡಿಯ 150 ಕೋಟಿ ರೂಪಾಯಿ ಹಗರಣಕ್ಕಿಂತ ದೊಡ್ಡ ಬಾಂಬ್ ಎಂಬುದು ಅರಿವಾಗುತ್ತದೆ.

ಇದರ ಲೆಕ್ಕಾಚಾರ ಇಷ್ಟೆ. ಹೊಸಪೇಟೆಯಲ್ಲಿ ಅದಿರು ತುಂಬಿಕೊಂಡು ಮಂಗಳೂರು ಬಂದರಿನತ್ತ ಸಾಗುವ ಪ್ರತಿ ಲಾರಿ ಆರ್.ಟಿ.ಓ. ಸರಹದ್ದನ್ನು ಪ್ರವೇಶಿಸುವಾಗ 1800 ರೂಪಾಯಿ ನಾರಾಯಣ ಗೌಡರ ಸೇವಾ ಚಂದಾ ತೆರಲೇಬೇಕು. ಇಲ್ಲಿ ಒಟ್ಟು 10 ಆರ್.ಟಿ.ಓ. ವಲಯಗಳಿವೆ. ಅಂದರೆ ಒಂದು ಲಾರಿಯಿಂದ ಪ್ರತಿ ತಿಂಗಳಿಗೆ 18 ಸಾವಿರ ರೂಪಾಯಿ ಆದಾಯವಿದೆ. ಅದೇ ರೀತಿ ಹೊಸಪೇಟೆಯಿಂದ ಬೇಲೆ ಕೇರಿ ಬಂದರು ಅಥವಾ ಕಾರವಾರ ಬಂದರು ತಲುಪುವ ಪ್ರತಿ ಲಾರಿ 1200 ಕಕ್ಕಬೇಕು. ಇಲ್ಲಿ ಒಟ್ಟು 8 ಆರ್.ಟಿ.ಓ. ವಲಯಗಳಿವೆ. ಅಂದರೆ ಒಂದು ಲಾರಿಯಿಂದ ತಿಂಗಳಿಗೆ 9,600 ರೂಪಾಯಿ. ಈ ಮಾರ್ಗದಲ್ಲಿ ಅಧಿಕೃತವಾಗಿ ಒಟ್ಟು 9,500 ಲಾರಿಗಳು ಓಡಾಡುತ್ತವೆ. ಅಂದರೆ ತಿಂಗಳ ಆದಾಯವೆಷ್ಟಿರಬಹುದೆಂದು ಲೆಕ್ಕ ಹಾಕಿ. ಇದೊಂದರಿಂದಲೇ ಗೌಡರ ಕಿಸೆಗೆ ತಿಂಗಳಿಗೆ 1 ಕೋಟಿ ರೂಪಾಯಿ ಬೀಳುತ್ತಿದೆಯಂತೆ.

ಅಧಿಕೃತ ಸಾಗಣೆ ಪರ್ಮಿಟ್ಟು, ವಾಹನ ದಾಖಲೆಗಳಿದ್ದರೂ ಈ ಮಾಮೂಲಿ ಏಕೆ? ಎಂಬುದಕ್ಕೆ ಇಲ್ಲಿದೆ ಉತ್ತರ. ಆರ್.ಟಿ.ಓ. ಕಾಯ್ದೆಯ ಪ್ರಕಾರ ಎಕ್ಸೆಲ್ ಲಾರಿಗೆ ಅವುಗಳ ಆಕ್ಸೆಲ್ ಸಾಮರ್ಥ್ಯದ ಮೇಲೆ 14 ರಿಂದ 16 ಟನ್ ಅದಿರು ತುಂಬಬಹುದು. ಆದರೆ ಲಾರಿ ಮ್ಹಾಲೀಕರು 20 ರಿಂದ 22 ಟನ್ ಅದಿರು ತುಂಬುತ್ತಾರೆ. ಆರ್.ಟಿ.ಓ. ಮಾಮೂಲಿ, ಪೊಲೀಸರ ಟೋಕನ್, ದುಬಾರಿ ಡೀಸೆಲ್ ಇತ್ಯಾದಿಗಳನ್ನೆಲ್ಲಾ ಭರಿಸಿ ಲಾಭ ಮಾಡಲು ಹೆಚ್ಚಿನ ಲೋಡ್ ಹೊಡೆಯುವುದು ಅವರಿಗೆ ಅಗತ್ಯವಂತೆ. ಅದರ ಮೇಲೆ ಈ ಆರ್.ಟಿ.ಓ. ಅಡ್ಜೆಸ್ಟ್‌ಮೆಂಟ್ ಇರುವುದರಿಂದ ಒಂದೇ ಪರ್ಮಿಟ್ ಮೇಲೆ ಎಷ್ಟು ಟ್ರಿಪ್ ಬೇಕಾದರೂ ಹೊಡೆಯಬಹುದು. ಅದು ನಾರಾಯಣಗೌಡ ನೀಡಿರುವ ಅಭಯ.



ಇಂತಹ ಹಡಬಿಟ್ಟಿ ದುಡ್ಡಿನ ಶೇ. 75 ರಷ್ಟು ದೊಡ್ಡ ಗೌಡರ ಪಾಲಾಗುತ್ತಿದೆ. ಉಳಿದ 25 ಸಾರಿಗೆ ಸಚಿವ ಚೆಲುವರಾಯಸ್ವಾಮಿ ಜೇಬಿಗೆ ಸೇರುತ್ತಿದೆ. ಉಳಿದ ಶೇ. 25 ರಲ್ಲಿ ಚೆಲುವರಾಯಸ್ವಾಮಿಯ ಕೋಬ್ರಾ ಅಂದರೆ ಶಿಷ್ಯಾ ಆರ್.ಟಿ.ಓ. ಇನ್ಸ್‌ಪೆಕ್ಟರ್ ಮಂಜೇಗೌಡ ಮತ್ತು ನಾರಾಯಣಗೌಡ ಕಿತ್ತಾಡಿಕೊಂಡು ಹಂಚಿಕೊಳ್ಳುತ್ತಾರೆ. ಇದೇನು ಕಡಿಮೆ ಆಮದನಿ ಎಂದುಕೊಳ್ಳಬೇಡಿ. ಸಾರಿಗೆ ಆಯುಕ್ತರಾಗಿ ಅಧಿಕಾರಕ್ಕೆ ಬಂದ ಎರಡೇ ತಿಂಗಳಲ್ಲಿ ಇಂತಹ ಅದಿರು ಟ್ರಾನ್ಸ್‌ಪೋರ್ಟ್ ದುಡ್ಡಿನಲ್ಲಿ ಕೋರಮಂಗಲದ ಪ್ರತಿಷ್ಠಿತ "ಆಕ್ರೊಪೊಲಿಸ್" ಟವರ್ಸ್‌ನಲ್ಲಿ ಎರಡು ಕೋಟ್ಯಂತರ ರೂಪಾಯಿ ಮೌಲ್ಯದ ವೈಭವೋಪೇತ ಅಪಾರ್ಟ್‌ಮೆಂಟ್‌ಗಳನ್ನು ಅದ್ಯಾರೋ ಮಲೆಯಾಳಿ ಹೆಂಗಸಿನ ಹೆಸರಲ್ಲಿ ಖರೀದಿಸಿದ್ದಾರಂತೆ. ಒಂದಂತೂ ನಿಜ.

ನಾರಾಯಣಗೌಡರು ಅಲ್ಪತೃಪ್ತರು. ಮೀಸಲು ಪಡೆಯಲಿದ್ದಾಗಲಂತೂ, ಹೊಡೆಯಲು ನೊಣವೂ ಇರಲಿಲ್ಲ. ಸಿವಿಲ್ ಪೊಲೀಸ್‌ಗೆ ಬಂದ ಮೇಲೆಯೇ ಅವರು ಮೇಲುತ್ಪತ್ತಿ ಎಂದರೆ ಏನು ಎಂದು ನೋಡಿದವರು. ಹಾಗಾಗಿ ಅವರಿಗೆ ಅತಿ ಆಸೆ ಇಲ್ಲ. ಡಿಸಿಪಿ ಆಗಿದ್ದಾಗ ತಾನಾಗೇ ಬಂದ ಹಣವನ್ನು ಮಾತ್ರವೇ ಮುಟ್ಟುತ್ತಿದ್ದರು. ಜಂಟಿ ಆಯುಕ್ತರಾದ ನಂತರ, ಕಮಿಷನರ್ ಅಜಯ್‌ಕುಮಾರ್ ಸಿಂಗ್ ಕಾಟದ ನಡುವೆಯೂ ಸ್ವಲ್ಪ ಚಿಲ್ಲರೆ ಹಣ ಗೋರಿಕೊಂಡು ನೆಮ್ಮದಿಯಿಂದ ಇದ್ದವರು (ಬಾಕ್ಸ್ ನೋಡಿ).

ಆದರೆ ಪ್ರಚಾರಕ್ಕೇನು ಕೊರತೆ ಇರಲಿಲ್ಲ. ತಮ್ಮ ಕಚೇರಿಯಲ್ಲಿ ವಾರಕ್ಕೊಂದು ಪ್ರೇಮವಿವಾಹ ಮಾಡಿಸಿ, ತಾವೇ ಪುರೋಹಿತರಂತೆ ನಿಂತು ಸಂಜೆ ಪತ್ರಿಕೆಗಳಲ್ಲಿ ಫೋಟೋ ಹಾಕಿಸಿಕೊಂಡು ಸಂತೋಷಪಡುತ್ತಿದ್ದರು. ಈಗ ಟ್ರಾನ್ಸ್‌ಪೋರ್ಟಿನ ಆದಾಯವನ್ನು ನಿಯತ್ತಾಗಿ ದೊಡ್ಡ ಗೌಡರ ಪಾದಂಗಳಿಗೆ ಸಮರ್ಪಿಸುತ್ತಿರುವುದರಿಂದ ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿರುವವರೆಗೆ ಅವರ ಆಯುಕ್ತ ಸ್ಥಾನಕ್ಕೆ ಯಾವ ಚ್ಯುತಿಯೂ ಇಲ್ಲ.-

-ವರದಿಗಾರ

ಝುಳಕಿ ಚೆಕ್‌ಪೋಸ್ಟ್‌ನಲ್ಲೇ 100 ಕೋಟಿ ರೂ!

ಸಾರಿಗೆ ಇಲಾಖೆಯ ಝುಳಕಿ ಚೆಕ್ ಪೋಸ್ಟ್ ಒಂದರ ಅಕ್ರಮ ಆದಾಯವನ್ನು ನೋಡಿದರೆ, ಇಡೀ ರಾಜ್ಯದ ಚೆಕ್‌ಪೋಸ್ಟ್‌ಗಳಿಂದ ಒಟ್ಟು ಆದಾಯದ ಸ್ಪಷ್ಟ ಮೊತ್ತದ ಚಿತ್ರಣ ಗೊತ್ತಾಗುತ್ತದೆ. ಮಹಾರಾಷ್ಟ್ರ ಹಾಗೂ ಕರ್ನಾಟಕ ರಾಜ್ಯಗಳ ನಡುವೆ ಸಂಪರ್ಕ ಕಲ್ಪಿಸುವ ರಾಷ್ಟ್ರೀಯ ಹೆದ್ದಾರಿ 13 ರ ಇಂಡಿ ತಾಲ್ಲೂಕಿನಲ್ಲಿ ಝುಳಕಿ ಚೆಕ್‌ಪೋಸ್ಟ್ ಬರುತ್ತದೆ.

ಅದಿರು ಸಾಗಣೆ ಆರಂಭವಾಗುವುದರ ಮೊದಲು ಈ ಚೆಕ್‌ಪೋಸ್ಟ್‌ಗೆ ವರ್ಗಾವಣೆ ಆಗಲು ಆರ್.ಟಿ.ಓ. ಅಧಿಕಾರಿಗಳಲ್ಲಿ ಭಾರಿ ಪೈಪೋಟಿ ಇತ್ತು. ಇಲ್ಲಿ ಹಗಲು ರಾತ್ರಿ ನಿರಂತರ ಸರಕು ಸಾಗಣೆ ಲಾರಿಗಳ ಸಂಚಾರವಿರುತ್ತದೆ. ಸರ್ಕಾರವೇ ನಿಗದಿ ಪಡಿಸಿರುವಂತೆ ಇಲ್ಲಿನ ಅಧಿಕೃತ ಶುಲ್ಕ ಸಂಗ್ರಹದ ಮೂಲಕ ವಾರ್ಷಿಕ 10 ಕೋಟಿ ರೂಪಾಯಿ ಸರ್ಕಾರದ ಬೊಕ್ಕಸ ಸೇರಬೇಕು. ಆದರೆ ಖಾಸಗಿ ಮೂಲಗಳ ಪ್ರಕಾರ, ಅಕ್ರಮ ಸರಕು ಸಾಗಣೆ ಮತ್ತು ತೂಕದಲ್ಲಿ ಮೋಸದ ಮೂಲಕ ಈ ಚೆಕ್‌ಪೋಸ್ಟ್ ಒಂದರಲ್ಲೇ ಆರ್.ಟಿ.ಓ. ಅಧಿಕಾರಿಗಳು ವಾರ್ಷಿಕ 100 ಕೋಟಿ ರೂಪಾಯಿ ಜೇಬಿಗಿಳಿಸುತ್ತಿದ್ದಾರೆ.

ಆಫ್ ಕೋರ್ಸ್, ಇದು ನಾರಾಯಣ ಗೌಡರಿಗೂ ಗೊತ್ತು. ಅದರಲ್ಲಿ ಅವರಿಗೂ ಪಾಲು ಬರುತ್ತಿದೆ. ದೊಡ್ಡಗೌಡರ ಬೊಕ್ಕಸಕ್ಕೂ ತಲುಪುತ್ತಿದೆ.

ಅಲ್ಪತೃಪ್ತ ನಾರಾಯಣಗೌಡರು!

ನಾರಾಯಣಗೌಡರು ಅಲ್ಪತೃಪ್ತರು ಎಂಬುದಕ್ಕೆ ಇಲ್ಲಿದೆ ನೋಡಿ ಉದಾಹರಣೆ. ಒಂದಕ್ಕೆರಡು ಬಡ್ಡಿ ಎಂದು ಜನರಿಗೆ ಉಂಡೆ ನಾಮ ತೀಡಿ ಹೋಗಿದ್ದ "ಇನ್ವೆಸ್ಟರ್" ಕೃಷ್ಣಮೂರ್ತಿ ಗೌಡರೊಂದಿಗೆ ಡೀಲ್ ಕುದುರಿಸಿ ಬಚಾವ್ ಮಾಡುವಂತೆ ಮೊರೆಹೋದ. ಗೌಡರು 5 ಕೋಟಿ ರೂಪಾಯಿ ಡಿಮ್ಯಾಂಡ್ ಇಟ್ಟರು. ಕಿಲಾಡಿ ಕೃಷ್ಣಮೂರ್ತಿ "ಸಾರ್ ನಿಮ್ಗೆ ಐದು ಕೋಟಿ ಕೊಡುವ ಬದಲು, ಡಿಪಾಸಿಟರ್‌ಗಳಿಗೇ ಅದನ್ನೆಲ್ಲಾ ಹಂಚಿ ಬಿಟ್ರೆ ನನ್ ಕೇಸೇ ಇರಲ್ವಲ್ಲಾ ಸರ್" ಎಂದು ಒಂದು ಬಾಣ ಬಿಟ್ಟ.

ನಾರಾಯಣಗೌಡರಿಗೆ ನಿರಾಸೆಯಾಯ್ತು. ಹೌದಾ? ಹಂಗಾದ್ರೆ ನಿಮ್ಹತ್ರ ಎಷ್ಟಿದೆ? ಅಂದ್ರು. ಕೃಷ್ಣಮೂರ್ತಿ, "ಸಾರ್ ದುಡ್ಡೆಲ್ಲಾ ಬ್ಲಾಕ್ ಆಗೋಗಿದೆ. ಸದ್ಯಕ್ಕೆ ಒಂದೈವತ್ ಸಾವಿರ ಇದೆ" ಎಂದ. ಗೌಡರು ಅಷ್ಟಕ್ಕೆ ತೃಪ್ತರಾಗಿ ಬಾಚಿಕೊಂಡು ಕೃಷ್ಣಮೂರ್ತಿಯನ್ನು ತಾತ್ಕಾಲಿಕ 'ಸೇಫ್' ಮಾಡಿದರು. ದಾರ್ಶನಿಕ ಹೆಂಡೇ ಷಾಪಿನ ಮತ್ತೊಬ್ಬ ಕೃಷ್ಣಮೂರ್ತಿಯ ಕಥೆಯೂ ಇದೆ. ದಾರ್ಶನಿಕನಿಗೆ ಗೌಡರು ಕೇಳಿದ್ದು 10 ಲಕ್ಷ. ಅವನು ಕೊಟ್ಟಿದ್ದು 1 ಲಕ್ಷ. ಸರಿ, ಇಷ್ಟಕ್ಕೆ ರೈಟ್ ಎಂದ ಗೌಡರು ದಾರ್ಶನಿಕನನ್ನು ಸದ್ಯಕ್ಕೆ ಟಚ್ ಮಾಡಬೇಡಿ ಎಂದ ಡಿಸಿಪಿ ಅಲೋಕ್‌ಕುಮಾರ್‌ಗೆ ಓರಲ್ ಆದೇಶ ನೀಡಿದರು.

ಇಲ್ಲಿ ಯಾವಾಗ ನಾರಾಯಣ ಗೌಡರು ನಗರ ಪೊಲೀಸ್‌ನಿಂದ ಟ್ರಾನ್ಸ್‌ಪೋರ್ಟ್‌ಗೆ ಬಂದರೋ, ಶಂಕರಪುರ ಪೊಲೀಸ್ ಇನ್ಸ್‌ಪೆಕ್ಟರ್ ಹಾದಿಮನಿ, ಹೊಸಕೋಟೆಯಲ್ಲಿ ಅಡಗಿ ಕೂತಿದ್ದ ದಾರ್ಶನಿಕ ಮತ್ತವನ ಪಾರ್ಟನರ್ ರಾಜೇಂದ್ರನನ್ನು ಹೆಡೆಮುರಿ ಕಟ್ಟಿ ಎಳೆತಂದರು.



ಅಲೋಕ್ ಕುಮಾರ್

ಇಷ್ಟು ದೊಡ್ಡ ಅಧಿಕಾರಿಯಾಗಿದ್ದರೂ ಗೌಡರು ಸಾಮಾನ್ಯ ಜನರಲ್ಲಿ ಯಾವುದೇ ಸಂಕೋಚವಿಲ್ಲದೆ ಬೆರೆಯುತ್ತಿದ್ದರು. ಅವರು ನಗರದ ಡಿಸಿಪಿಯಾಗಿದ್ದಾಗ ಇದ್ದಕ್ಕಿದ್ದಂತೆ ಪಟಾಪಟಿ ಕೋಟು, ಬಿಳೀ ಟೈ, ಹಸಿರು ಶರ್ಟು, ಹಳದಿ ಪ್ಯಾಂಟು ಹಾಕಿಕೊಂಡು ಜನಸಾಮಾನ್ಯರೊಂದಿಗೆ ಯಾವ್ಯಾವುದೋ ಬ್ಯಾಂಡ್‌ನಲ್ಲಿ ಪ್ರತ್ಯಕ್ಷವಾಗಿ ಬಿಡುತ್ತಿದ್ದರು.

ನಾರಾಣಗೌಡರ ಕರ್ತವ್ಯ ದಕ್ಷತೆಯ ಬಗ್ಗೆ ಮತ್ತೊಂದು ಮಾತು. ಇವರು ನಗರದ ಡಿಸಿಪಿಯಾಗಿದ್ದ ಅವಧಿಯಲ್ಲಿ, ಎಂ.ಎಸ್. ರಾಮಯ್ಯ ಕಾಲೇಜಿನ ಹಿಂಭಾಗದಲ್ಲಿರುವ ಗೋಕುಲ ಪ್ರದೇಶದ ಒಂದು ಮನೆಯ ಮೇಲೆ ತಮಿಳ್ನಾಡು ಪೊಲೀಸರ ಕ್ಯೂ ಬ್ರಾಂಚ್ ಕಮಾಂಡೋಗಳು ದಾಳಿ ನಡೆಸಿ ಅಲ್-ಉಗ್ರಗಾಮಿ ಸಂಘಟನೆಗೆ ಸೇರಿದ ಆರು ಜನ ಜನರನ್ನು ಹತ್ಯೆಗೈದರು. ಕಾರ್ಯಾಚರಣೆ ನಡೆದ ಪ್ರದೇಶ ನಾರಾಯಣಗೌಡರ ವ್ಯಾಪ್ತಿಗೆ ಬರುತ್ತಿತ್ತು. ಆದರೆ ಗೌಡರಿಗೆ ಇಡೀ ಕಾರ್ಯಾಚರಣೆಯ ವಿಷಯ ತಿಳಿದಿದ್ದು ಅದು ಮುಗಿದ ನಂತರ.

ಏಕೆಂದರೆ, ಕಾರ್ಯಚರಣೆ ನಡೆಸುವ ಕಮಾಂಡೋಗಳ ನಾಯಕತ್ವ ವಹಿಸಿದ ತಮಿಳ್ನಾಡು ಎಸ್ಪಿ ಶಕೀಲ್ ಅಖ್ತರ್, "ನನ್ನ ಸಹಾಯಕ್ಕೆ ನಾರಾಯಣ ಗೌಡರು ಬೇಡ. ಅವರಿಗೆ ವಿಷಯವನ್ನು ತಿಳಿಸಬೇಡಿ. ನನ್ನ ಸಹಾಯ ಮತ್ತು ಸಹಕಾರಕ್ಕೆ ನಗರದ ಮತ್ತೊಬ್ಬರು ದಕ್ಷ ಐಪಿಎಸ್ ಅಧಿಕಾರಿ ಗೋಪಾಲ್ ಹೊಸೂರ್ ರವರನ್ನು ನೀಡಿ" ಎಂದು ಅಂದಿನ ಪೊಲೀಸ್ ಕಮಿಷನರ್ ಸಾಂಗ್ಲಿಯಾನರವರನ್ನು ವಿನಂತಿಸಿದ್ದರು. ಅರ್ಥಾತ್ ನಾರಾಯಣ ಗೌಡರ ಕೀರ್ತಿ ತಮಿಳ್ನಾಡಿಗೂ ಹಬ್ಬಿದೆ.

ಚಿತ್ರಕಾರ ಬಣ್ಣಗಳ ಮೂಲಕ ಏನನ್ನು ಸಾಧಿಸುತ್ತಾನೋ ಅದನ್ನೇ ಶಬ್ದಗಳ ಮೂಲಕ ಸಾಧಿಸುವಂಥದ್ದು ಕವಿತೆ. -ಮೆಕಾಲೆ

ಕುಮಾರಣ್ಣನ್ನ ಕರದು, ನಮ್ಮಸ್ಕೂಲು ಮನಿಗಿಸಿ ಕಳ್ಸಬೇಕು ಕಂದ್ಯ

ಬಯಲು ಸೀಮೆಯ ಕಟ್ಟೆ ಪುರಾಣ

ಕೆಂಡ ಬೇಸಿಗೆಯಂತಹ ರಣಬಿಸಿಲು ಕಾಳಮಾವ ನನ್ನು ದಿಕ್ಕುಗೆಡಿಸಿತ್ತು. ಹೊಲಮಾಳದ ಕಡೆ ನೋಡಿದರೆ ಕಣ್ಣಿಗೆ ತಂಪಾಗುವ ಬದಲು ಸ್ಮಶಾನದ ರಚೆ ಏಳುತ್ತಿತ್ತು. ಪುಟ್ಟಸ್ವಾಮಿಗೌಡರ ತಿಥಿಗೆ ಹೋಗಿದ್ದ ಸೀರ ಬರುತ್ತಿದ್ದಂತೆ,

"ಆ ಕಡಿಕೆ ಮಳಿಯಂಗಲ ಸೀರ" ಎಂದ.

"ಆ ಕಡಿಕೆ ಪರವಾಗಿಲ್ಲ, ಒಟ್ಟನಲ್ಲಿ ನವೊಟ್ಟು ಲಾಸು ಯಾರಿಗೂ ಆಗಿಲ್ಲ ಹೋಗು" ಎಂದ.

"ಬೀಜ ಗ್ವಬ್ಬರ ಹಾಕಿದ್ರೆ ಇನ್ನು ಲಾಸಾಗದು ಕಂದ್ಯ. ಸದ್ಯಕೆ ತಗದು ಮಡಗಿರೊ ಗ್ವಬ್ಬರ ಅಂಗೆ ಅದೆ" ಎಂದ ಕಾಳಮಾವ. ಆಗ ಜುಮ್ಮಿ,

"ಪುಟ್ಟಸಾಮಿಗೌಡರ ತಿಥಿಗೋಗಿದ್ದಂತೆ ನಿಜವೇನೊ ಮಾವ?" ಎಂದಳು.

"ಊ ಕಂದ್ಯ. ನಾನು, ಆ ರಾಮಣ್ಣಾರ ಜವರಪ್ಪ, ಕರಿಯಪ್ಪ, ಇನ್ನು ಯಾರ್‍ಯಾರೊ ಹೋಗಿದ್ವಿ."

"ಮರಿ ಕೂದಿದ್ರ?"

"ಇಲ್ಲ ಕಂದ್ಯ ಆಟೊಂತರ ಜನಕೆ ಬಾಡಾಕಾದತೇ?"

"ನೀವು ಬಾಡ್ನೆಸುರು ಬುಡ್ತರೆ ಅಂತ್ಲೆ ಹೋಗಿದ್ದೇನೊ?" ಎಂದ ಉಗ್ರಿ.

"ನಾವೇನೊ ಬಾಡ ಬಕ್ಕರು ಅನ್ನಂಗೇಳ್ತಿಯಲ್ಲ, ಪುಟ್ಟಸಾಮಿಗೌಡ ನಮ್ಮ ಅಣ್ಣಯ್ಯನ ಬೀಗ ಅಂತ ಹೋಗಿದ್ವಿ."

"ಹೋಗಬೇಕಾದ್ದೆಯ ಬುಡು, ಅಂತ ಯಸ್ನೆಂ ಕಿಸ್ಣನೇ ಬಂಬಾಯಿಂದ ಬಂದವುನೆ ಅಂದ್ರೆ ನೀವು ಇಲ್ಲಿಂದ ಹೋಗಿರದೆಚ್ಚಿ?"

"ಕಿಸ್ನ ಈಗ ಪರವಾಗಿಲ್ಲ ಕಂದ್ಯ, ಮದ್ಲು ವಣಿಕ್ಯಂಡಂಗಿದ್ದ. ಈಗ ದುಂಡಗವುನೆ, ತಲೆ ಕೂದ್ಲು ಹಲ್ಲು ತಿರಗ ಹುಟ್ಟಿರಂಗೆ ಕಂಡನಪ್ಪ" ಎಂದ.

"ಅವುನೇನೊ ತಿರಗ ಬಂದನಂತೆ ಇಲ್ಲಿಗೆ?" ಎಂದಳು ಜುಮ್ಮಿ.

"ಈಗ್ಯಾಕೆ ಬಂದನಿಲ್ಲಿಗೆ. ಅತ್ತಗೆ ಮದ್ದೂರನೂ ಕಳಕಂಡವುನೆ, ಇತ್ತಗೆ ಚಾಮರಾಜಪೇಟೆನೂ ಕಳಕಂಡವುನೆ" ಎಂದ ಸೀರ.

"ಏನು ಕಳಕಂಡ್ರು ತಾನೆ ಏನೋ, ಅವುನೀಗ ಮಾಡಿಕಂಡಿರೊ ದುಡ್ನಲ್ಲಿ ಅಂತ ಯಾವುದಾರ ಕ್ಷೇತ್ರವ ಕ್ರಯಕೆ ಕೊಂಡಕಬವುದು."

"ಅಷ್ಟೊಂದು ದುಡ್ಡು ಮಾಡಿದ್ದನೇನ್ಲ?" ಎಂದು ಕಾಳಮಾವ ಆಚ್ಚರಿ ಕಣ್ಣುಬಿಟ್ಟ.

"ಅಯ್ಯೋ ಕಾಳಮಾವ, ಈ ದ್ಯಾವೇಗೌಡನ ಮಕ್ಕಳು ಆರು ತಿಂಗಳಿಗೆ ನೂರೈವತ್ತು ಕೋಟಿ ಈಸಗಂಡವುರೆ ಅಂದಮ್ಯಾಲೆ, ಆ ಕಿಸ್ನ ಹೆಚ್ಚುಕಮ್ಮಿ ಐದೊರಸ ಇದ್ದನಪ್ಪ, ಅವುನು ಯಾರ್‍ಯಾರತ್ರ ಏಟೇಟೀಸಗಂಡಿರಬವುದು ಲ್ಯಕ್ಕ ಹಾಕು."

"ಆಟೊಂತರ ದುಡ್ನ ಏನು ಮಾಡ್ತರವುರೂ?"

"ಮಡಿಕಂಡು ಬಳುಸ್ತರೆ. ರಾಜಕಾರಣಕ್ಕೆ ಇನ್ನು ಮುಂದೆ ದುಡ್ಡೇ ಬೇಕು ಅಂತ ತಿಳಕಂಡು ಅಂಗೆ ಗುಡ್ಡೆ ಹಾಯ್ಕತ್ತವೆ."

"ಕುಬೇರ್ಯಲ್ಲ ರಾಜ್ಯ ಆಳೋದಾದ್ರೆ ಆ ಮಲ್ಯನಂತೋರ್‍ಯಾಕ್ಷ ಊರನೆ ಬುಟ್ಟು ಹೋಯ್ತಿದ್ರು" ಎಂದ ಸೀರ.

"ಅದೆಯಪ್ಪ ಆ ಸಿದರಾಮಯ್ಯ ತಿಳಕಬೇಕಾಗಿತ್ತು?"

"ಅವುನೇನು ತಿಳಕಬೇಕಾಗಿತ್ತ?"

"ದ್ಯಾವೇಗೌಡನತ್ರ ದುಡ್ಡದೆ ಅಂತ ಹೆದ್ರಿಕಂಡು ಕಾಂಗ್ರೆಸ್ಸಿಗೋದ. ಅಲ್ಲಿಂಗಾಗ್ಯದೆ ಅಂದ್ರೆ ಮಳಿಗೆದ್ರಿ ಹ್ವಳಿಗಾರಿದಂಗಾಗ್ಯದೆ. ಅಲ್ಲಿ ಇವುನಂಥೋರು ಬೇಕಾದೋಟು ಜನವುರೆ, ಅವುರು ಅವುರಷ್ಟಕಿರತರೆ, ಇವುನು ಇವುನಷ್ಟಕಿರಬವುದು, ದಳದಲ್ಲಿದ್ದ ಬ್ಯಲೆ ಅಲ್ಲಿ ಸಿಗದಿಲ್ಲ."

"ಸಿಗದಿದ್ರೇನು, ಒಂದು ದಡ ಸೇರಿಕಂಡನಲ್ಲ ಬುಡು" ಎಂದ ಚಿಕ್ಕ.

"ದಡವೆಯ ಬುಡದು. ಅವುನಿಗೆ ಜನ ಸಂಬಾಳಸಕ್ಕೂ ಬತ್ತಿರಲಿಲ್ಲ, ದುಡ್ನ ಮಾಡಿ ಹಂಚಕ್ಕೂ ಬತ್ತಿರಲಿಲ್ಲ, ಈಗ ಯಂಗೊ ಹತ್ತಲ್ಲನ್ನೊಂದು ಅನ್ನಂಗೆ ಇರಬವುದು."

"ಆ ಬಂಗಾರಪ್ಪೇನಾದ?" ಎಂದ ಕಾಳಮಾವ.

"ಅವುನು ವಂಡ್ರುಪುಲ್ಲಾಗ್ಯವುನೆ ದ್ವಡಪ್ಪ" ಎಂದುಕೊಂಡು ವಾಟಿಸ್ಸೆ ಬಂದ.

"ವಂಡ್ರುಪುಲ್ಲು ಅಂದ್ರೇನ್ಲ?" ಎಂದಳು ಜುಮ್ಮಿ.

"ಯಪ್ಪತ್ತಾರೊರ್ಸಾದ್ರು ತಲೆಕೂದ್ಲು ಅಂಗೆ ಅವೆ, ಮಾತು ಅಂಗೆ ಅವೆ, ಓಡಾಟನೂ ಅಂಗೆ ಅದೆ ಕಣಕ್ಕ."

"ಅಂಗರಿನ್ನು ಗಟ್ಯಾಗ್ಯವುನೆ ಅನ್ನು?"

"ಗಟ್ಯಾಗೇನಕ್ಕ, ಸದ್ದಿಕೆ ಹೆಲ್ತಿಯಾಗಿರೋನೆ ಅವುನು. ಈಗ್ನು ಒಂದಲ್ಲಾ ಒಂದಿನ ತಿರಗ ಚೀಫ್‌ಮಿನಿಸ್ಟ್ರಾಯ್ತಿನಿ ಅಂತ ತಿಳಕಂಡು ತಿರುಗ್ತನೆ ಕಣಕ್ಕ."

"ಅವುನ ಮಗ ಏನೊ ತಿರಿಗಿಬಿದ್ದಿದ್ದನಂತೆ?"

"ಊ ಕಣಕ್ಕ. ಅದೊಂದೆ ಫೀಲಿಂಗವುನಿಗೆ. ಅದ್ಕೆ ಆ ಮಗನ್ನ ಮನಿಗೆ ಕಳಸಕ್ಕೆ ಇನ್ನೊಬ್ಬ ಮಗನ್ನ ತಂದು ಎದ್ರಿಗೆ ನಿಲ್ಲಸ್ಯವುನೆ. ಈ ರಾಜ್ಯದಲ್ಲಿ ಮಗನ ಮೇಲೆ ಮಗನ್ನ ಎತ್ತಿಕಟ್ಟಿ ಯಾರಾರ ನಿಲ್ಲಿಸಿದ್ದರೆ ತೋರ್‍ಸು?"

"ಇಲ್ಲ ಬುಡು."

"ಆದೇ ದ್ಯಾವೇಗೌಡನ ಮಕ್ಕಳ ನೋಡು, ಮರಿನಾಯಿಗಳ ಹೇಲಿಗೆ ಬುಟ್ಟಂಗೆ ಎಷ್ಟು ಹೊಂದಿಕಂಡು ತಿಂತಾ ಅವುರೆ" ಎಂದ. ಆಗ ಕಾಳಮಾವ,

"ಸರಿಯಾಗಿ ಮಾತಾಡ್ಯ" ಎಂದ.

"ಸಾರಿ ದ್ವಡಪ್ಪ, ದ್ಯಾವೇಗೌಡ್ರ ಮಕ್ಕಳಿಗೆ ಏನಾರ ಅಂದ್ರೆ ನಮ್ಮ ದ್ವಡಪ್ಪನಿಗೆ ತನ್ನ ಮಕ್ಕಳ ಬೋದಷ್ಟೇ ಸಿಟ್ಟು ಬತ್ತದೆ."

"ಆಡೋ ಮಾತಾಡಬೇಕು ಕಂದ್ಯ."

"ಆಡೋ ಮಾತ್ನೆ ಆಡಿದೆ ದ್ವಡಪ್ಪ, ದ್ಯಾವೇಗೌಡಪವರಿಗೆ ಬಂದೇಟಗೆ ನಾನು ಕಾಣಬೇಕಾಗಿತ್ತು, ಯಾಕೆ ಗೊತ್ರ ಇವುನ ಮಕ್ಕಳಿಗಿಂತ ದಳಕ್ಕೆ ನಾನು ದುಡದಿದ್ದಿನಿ. ಇಕ್ಕಳಕ್ಕೆ ಸರಿಯಾದ ಅಂಗಿ ಇಲ್ದೆಯಿದ್ರು ಬ್ಯಾನರ್ ಬರಸಿ ಕೊಟ್ಟಿದ್ದಿನಿ ಗೊತ್ತಾ? ಬೇಕಾದ್ರೆ ಜುಮ್ಮಕ್ಕನ್ನೆ ಕೇಳು."

"ಅದೇನೊ ನಿಜ ಕಣ ಮಾವ. ಮನೆ ಸೋರತಿದ್ರು ನಾಕಂಚು ತಂದು ಹಾಕ್ಯಳಕಾಗದೆಯಿದ್ರು ಜಂತಾದಳದ ಪೆಂಡಾಲು ಕಟ್ಯದೆ" ಎಂದು ಜುಮ್ಮಿ ವಾಟಿಸ್ಸೆ ಪರ ವಹಿಸಿ ಮಾತನಾಡಿದಳು.


"ನಮ್ಮದ್ಯಲ್ಲ ಇರ್ಲಿ ಕಣಕ್ಕ ಪರಸನಲ್ ಮ್ಯಾಟ್ರು. ಅಲ್ಲಿ ನೋಡು ಇಸುಗೂಲಂಚುಗಳ್ಯಲ್ಲ ಬಿದ್ದೋಯ್ತಾ ಅವೆ. ಹಂಚೊದಸಕ್ಯಾಗದೆಯಿದ್ರು ಅಮೆರಿಕದಲ್ಹೋಗಿ ಕನ್ನಡ ಸಮ್ಮೇಳನ ಮಾಡ್ತ ಕುಂತವುರಲ್ಲ, ಇವುರಿಗೇ ನೆಳನ?"

"ಅಮೆರಿಕದಲ್ಹೋಗಿ ಕನಡ ಸಭೆ ಮಾಡ್ತಾಯಿದ್ದರೇ?"

"ಊ ಕಣಕ್ಕ."

"ಮಾಡ್ಲಿ ಬುಡ್ಯ."

"ಮಾಡ್ಲಿ ಕಣಕ್ಕ. ಪಾಪ ನಮ್ಮ ಕನ್ನಡದೋರು ಏನು ಮಾಡಿದ್ರು ನನಿಗೆ ಭಾಳಾ ಖುಷಿ. ಆದ್ರೆ ಮದ್ಲು ಈ ನಮ್ಮ ಇಸ್ಕೂಲು ಸೋರದಂಗೆ ಮಾಡಬೇಕು, ಹಂಚಾಕಬೇಕು, ಲಡ್ಡಾಗಿರೊ ತೀರು ರೀಪೀಸು ಬದ್ಲಾಸಬೇಕು, ಆಮ್ಯಾಲೆ ಮೇಸ್ಟ್ರು ಸರಿಯಾಗಿದ್ದರ ನೋಡಬೇಕು. ನಮ್ಮ ಗಡಿಭಾಗದಲ್ಲಿ ಕನ್ನಡ ಸ್ಕೂಲಿದ್ದವ, ಇಲ್ಲವ ನೋಡಬೇಕು. ಆ ಮ್ಯಾಲೆ ಅಮೆರಿಕಲ್ಲಾ ಆಫಗಾನೀಸ್ತಾನ ಕೋಗಿ ಕನ್ನಡ ಸಮ್ಮೇಳನ ಮಾಡಿ, ನಾನು ಬ್ಯಾಡ ಅನ್ನದಿಲ್ಲ."



"ಏ ಅಮೆರಿಕದಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ಮಾಡ್ತಾಯಿರೋರು, ಅಲ್ಲಿರೋರೆ ಕಣೊ. ಇವು ಹೋಗ್ಯವಷ್ಟೆಯ" ಎಂದ ಉಗ್ರಿ.

"ಹೋಗಿರೋರಿಗೂ ಕನ್ನಡಕೂ ಏನು ಸಮಂದದೊ ಉಗ್ರಿ. ಅವುರು ಕನ್ನಡಕೆ ಅಂತ ಮಾಡಿರೊ ಕ್ಯಲಸ ತೋರಸು ಒಪ್ಪಿಗತ್ತಿನಿ."

"ನೀನು ಯಮ್ಮೆಲ್ಲೆಗಳ ದೃಷ್ಟಿಲಿಟಗಂಡು ಮಾತಾಡಬ್ಯಾಡ ಕಣೊ, ಬ್ಯಾರೆ ಜನಗಳೂ ಹೋಗ್ಯವುರೆ."

"ನಿನ್ನ ಕರಿಲಿಲ್ಲ ಅಂತ ಸಿಟ್ಟು ಬಂದದೇನ್ಲ?" ಎಂದಳು ಜುಮ್ಮಿ.

"ನಾನು ಕರದ್ರು ಹೋಯ್ತಿರಲಿಲ್ಲ ಕಣಕ್ಕ, ಅಂತ ಕುಮಾರಸ್ವಾಮಿಗೆ ಹೋಗಿಲ್ಲ ಅಂದಮ್ಯಾಲೆ ನಾನ್ಯಾಕೋಯ್ತಿನಿ?"

"ಆಲಲಲೇ ಕುಮಾರಸ್ವಾಮಿಗೆ ಓಲಿಕೆ ಮಾಡಿಕತ್ತಿಯೇನೊ ನಿನ್ನ?"

"ಯಾಕೆ, ಓಲಿಕೆ ಮಾಡಿಕಬಾರದೇನೊ. ನನಿಗೆ ನಮ್ಮ ದೇಸದ ಸಮ್ವಿದಾನ ಗೊತ್ತದೆ, ಸೆಕ್ಯುಲರ್ ಅಂದ್ರೇನು ಅಂತ ಗೊತ್ತದೆ. ಅನಂತಮೂರ್ತಿ ಯಾರು ಅಂತ ಗೊತ್ತದೆ. ತಾಸ್ಕೆಂಟ್ ನಗರ ಎಲ್ಯದೆ ಅಂತ ಗೊತ್ತದೆ. ಇವಿಷ್ಟು ಕುಮಾರಣ್ಣನಿಗೆ ಗೊತ್ತಿಲ್ಲ."

"ತಾಸಕೆಂಟ್ ನಗರ ಎಲ್ಲದ್ದ?"

"ತಾಸ್ಕೆಂಟ್ ನಗರ ಜರ್ಮನಿ ಅತ್ರ ಅದೆ ಅನ್ನಕಂಡೇನಕ್ಕ, ನೀನೂ ಕೂಡ ಹೋಗಿ ಬಂದಿದ್ದಿ?"

"ನಾನು ಹೋಗಿದ್ದೆ?"

"ಎಸ್, ಇದೇ ಸೀನಾಚಾರಿ ಮದಿವಿಗೆ ಅಂತ ಭದ್ರವತಿಗೋಗಿದ್ವಿ, ಆಗ ನಿಮ್ಮ ರಂಗೇಗೌಡ ಮಾವಿನಕ್ಯರೆಲವುನೆ ನೋಡಬೇಕು ಅಂದೆ ನೀನು, ಆಗ ಅಂತರಗಂಗೆ ಮುಖಾಂತರ ನ್ಯಡಕಂಡು ಮಾವಿನಕ್ಯರಿಗೋಗಿದ್ವೋ ನ್ಯನಪಿದ್ದತೇನಕ್ಕ?"

"ಊ ಹೋಗಿದ್ವೊ?"

"ಆಗ ತಾಸ್ಕೆಂಟ್ ನಗರದ ಮ್ಯಾಲೆ ಹೋಗಿದ್ವೊ ಕಣಕ್ಕ. ನೀನು ಯಾವುದೋ ಮ್ಯಾಟ್ರಗೆ ಅಳತಾ ಇದ್ದಿದ್ರಿಂದ ಆ ಊರೆಸರ ಹೇಳಕ್ಯಾಗಲಿಲ್ಲ, ಈಗ ನೀನೆ ಹೋಗಿ ಕುಮಾರಸ್ವಾಮಿಯ ತಾಸ್ಕೆಂಟ್ ನಗರ ಎಲ್ಲ್ಯದೆ ಅನ್ನು, ನಾಳೆ ಹೇಳ್ತಿನಿ ಕಣಕ್ಕ ಅನ್ನದೆಯಿದ್ರೆ ಥೂ ಕುರೊ ಅನ್ನಕ್ಕ."

"ಅವುನೇನೊ ಹಳ್ಳಿಲೋಗಿ ಮನಿಕತ್ತನಂತೆ, ನಮ್ಮೂರಿಗೂ ಕರಿಯನೇನ್ಲ?"

"ಏನು ಮಾಡಕ್ಕೇ?"

"ನಮ್ಮೂರಲ್ಲು ಮನಿಗಿದ್ದೋಗ್ಲೀ."

"ಅಷ್ಟೆ ನೋಡು ಅವುನು ಬರದ್ರಿಂದ ಆಗದು."

"ಅಂಗಲ್ಲ ಕಂದ್ಯ. ಅವುನು ಬತ್ತನೆ ಅಂತ ರೋಡು ಮಾಡ್ತರಂತೆ, ಊರು ಸುತ್ತ ಗಿಡಗ್ಯಂಡೆ ಕಿತ್ತಾಕ್ತರಂತೆ, ಇಸುಗೂಲಿಗೆ ಸುಣ್ಣ ಹೂದರಂತೆ, ಹಂಚಿಲಿದೆಯಿದ್ರೆ ಹಂಚಾಕ್ತರಂತೆ" ಎಂದು ಜುಮ್ಮಿ ಕುಮಾರಣ್ಣನ ಆಗಮನದಿಂದಾಗುವ ಪವಾಡಗಳನ್ನು ವಿವರಿಸುತ್ತಿದ್ದಾಗ, ತೂಗಾಡಿದ ದೇಹವನ್ನು ಸರಿ ಮಾಡಿಕೊಂಡ ವಾಟಿಸ್ಸೆ.

"ಸೇಮ್ ಕಣಕ್ಕ, ಇಟೀಸ್ ಸೇಮ್‌ಟು ಅವರ್ ವಿಲೇಜ್. ಇಂತ ಜುಜುಬಿ ಕ್ಯಲಸಗಳಾಗಬೇಕು ಅಂದ್ರೆ ಮುಖ್ಯಮಂತ್ರಿ ಬಂದು ನಮ್ಮೂರಲ್ಲಿ ಮನಿಗಿದ್ದೋಗಬೇಕು ಅನ್ನದು ನಮ್ಮ ಲೈಪಿನ ಬಗ್ಗೆ ಮಾಡೊ ಅಣಕ ಕಣಕ್ಕ. ಇಂತ ಕ್ಯಲಸವ ನಮ್ಮ ದೊಡ್ಡಪ್ಪನೇ ಒಪ್ಪಲಿ ಹೇಳು ದ್ವಡಪ್ಪ."

"ಅವುನು ಬರದೆಯಿದ್ರು ಆದ್ರು ಮಾಡಿ ಕ್ಯಲಸ ಮಾಡುಸಬವುದು" ಎಂದ ಕಾಳಮಾವ ಗಂಭೀರವಾಗಿ.

"ಅವುನ್ಯಾಕೆ ಹಳ್ಳಿಮ್ಯಾಲೆ ಬತ್ತನೆ ಗೊತ್ತೇನೊ?" ಎಂದ ಉಗ್ರಿ.

"ಯಾಕೇಳು?"

"ಮುಖ್ಯಮಂತ್ರಿ ಕ್ಯಲಸವ ಅವುರಪ್ಪ ಮಾಡ್ತಯಿರದ್ರಿಂದ ಅವುನಿಗೆ ಬೆಂಗಳೂರಲ್ಲೇನೂ ಕ್ಯಲಸಿಲ್ಲ, ಅದ್ಕೆ ಬಂದು ಮನಿಕತ್ತನಂತೆ. ಪಾರ್ಟಿ ಕ್ಯಲಸೂ ಆಯ್ತು, ಪಡಪೋಸಿ ಜನಗಳ ಕೈಲಿ ಶಬ್ಬಾಸ್ ಅನ್ನಿಸಿಗಂಡಂಗೂ ಆಯ್ತು. ಇಂತವೇ ಚಲ್ರಿ ಬುದ್ದಿ ಕಣೊ."

"ಎಜ್ಯಾಕ್ಟ್ಲಿ ಕರಟ್ ಕಣೊ ಉಗ್ರಿ."

–ಬಿ. ಚಂದ್ರೇಗೌಡ

Zero Hour

ಮುನ್ನಿ



1. ಸಿ.ಎಂ. ಸಾಹೇಬರ ಹಳ್ಳಿ ವಾಸ್ತವ್ಯದ ಕುರಿತು ಒಂದು ಸಾಲು ಗೀಚಿ
   a) ಪುಖತ್ ಆಗಿ ತಿನ್ನೋಕೆ, ನಿದ್ದೆ ಹೊಡಿಯೋಕೆ ಹಳ್ಳಿಗೇ ಹೋಗ್ಬೇಕಾ?
   b) ಹಳ್ಳೀಲಿ ಅದಿರು ಉಂಟಾ ಅಂತಾ ಚೆಕ್ ಮಾಡೋಕೆ ಹೋಗ್ತಾರೇನೊ?
   c) ನಿರ್ಮಾಪಕ ಕುಮಾರಸ್ವಾಮಿ ಭಯಂಕರ ನಟನಾಗ್ತಿದಾರೆ.
   d) ಗೌಡ ನಾಟ್ಯ ಮಂಡಳಿಯ ಹೊಸ ಪ್ರಯೋಗ
2. "ನಾವು ಎಂಟುಗ್ರಹದ ಲೆಕ್ಕಾನೇ ಮಾಡೋದು. ಪ್ಲೂಟೋ ಗ್ರಹವಲ್ಲ ಅಂತಾ ನಮ್ಗೆ ಮೊದ್ಲೆ ಗೊತ್ತಿತ್ತು" ಎಂದಿದೆ ಜ್ಯೋತಿಷಿ ಚೆಂಭಟ್ಟ, ನೀವೇನಂತೀರಾ?
   a) ಈ ಚೆಂಭಟ್ಟ ವಿಧಾನಸೌಧದ ಸುತ್ತ ಸುತ್ತುವ ಕ್ಷುದ್ರಗ್ರಹ ಬಿಡು.
   b) ವೇದ ಕಾಲದಲ್ಲಿ ಪ್ಲೂಟೋ ಪತ್ತೆಯಾಗಿರಲಿಲ್ಲ, ಅದು ಪತ್ತೆಯಾಗಿದ್ದು 1930 ರಲ್ಲಿ ಅಂತಾ ಹೇಳು ಆ ಪೆದ್ದಂಭಟ್ಟನಿಗೆ
   c) ಆತನ 'ಗ್ರಹ'ಚಾರ ಕೆಡಲಿರುವ ಸೂಚನೆ
   d) ಮೇಲಿನೆಲ್ಲವೂ ಸರಿ
3. ಲಷ್ಕರ್ ಉಗ್ರರು ಇಬ್ರಾಹಿಂಗೆ ಬೆದರಿಸಿದ್ದಾರಂತೆ, ಕಾಮೆಂಟ್ ಮಾಡ್ತೀರಾ?
   a) ಹೌದ್ಹೌದು ಈ ಇಬ್ರಾಹಿಂ ಎಂಬ ನ್ಯಾಷನಲ್ ಲೀಡರಿಗೆ ಬೆದರಿಸ್ತಾರೆ ಅನಿಸುತ್ತೆ.
   b) ಇಬ್ರಾಹಿಂ ನೋಡಿದರೆ ಲಷ್ಕರಿಗಳೇ ಬೆದರ್‍ತಾರೆ ಬಿಡು
   c) ಅದೆಲ್ಲ ಇರ್‍ಲಿ ಬಿಡು ಮುನ್ನಿ, ಆ ಮನುಷ್ಯ ಪಿಸ್ತೂಲ್ ಇಟ್ಕೊಂಡು ಅಡ್ಡಾಡುತ್ತೇಕೆ?
   d) ಲಷ್ಕರಿ ಎಂದರೆ ದೇವೇಗೌಡ ಅಂತಾ ಅರ್ಥವೇನೊ?
4. 'ಅಕ್ಕ' ಸಮಾವೇಶದಲ್ಲಿ ರವಿಶಂಕರಾ, ವೀರೇಂದ್ರ ಹೆಗ್ಗಡೆ ಒಟ್ಟಿಗೆ ಮಿಂಚಿದರಂತೆ?
   a) 'ರವೀರೇಂದ್ರ ನಮೋ' ಎಂದವಂತೆ ಎನ್.ಆರ್.ಐ.ಗಳು.
   b) ಇಬ್ಬರೂ ಸೇರಿ 'ಪರದೇಶಿ ಯೋಗ' ಕಲಿಸಿದರಂತೆ
   c) ಅಪ್ಪಿಕೊಂಡು ಮುದ್ದಾಡುವುದೊಂದೇ ಬಾಕಿ ಇತ್ತಂತೆ
   d) ಏನೋ ಹೇಳಲು ಹೋದ ರವಿಶಂಕರ 'ಅಕ್ಕ ಸತ್ತರೆ ಅಮಾವಾಸ್ಯೆ ನಿಲ್ಲಲ್ಲ' ಎಂದನಂತೆ.
   e) ಕನ್ನಡ ಸಮಾವೇಶ ಅಂದ್ರೆ ಸ್ವಾಮಿಗಳ ಪಾದಪೂಜೆ ಅಲ್ಲ ಅಂತಾ 'ಅಕ್ಕ'ನಿಗೆ ಹೇಳು ಮುನ್ನಿ.
5. ಹೊಂದಿಸಿ... ಅಲ್ಲಲ್ಲ.... ನಿಂದಿಸಿ ಬರೆಯಿರಿ

1) ಕಟ್ಟಾ ಸುಬ್ರಮಣ್ಯ	a) ಸಿಂಗಲ್ ಡಿಜಿಟ್ಟು: ಅದೇ ಬಜೆಟ್ಟು
2) ಚಲುವರಾಯಸ್ವಾಮಿ	b) ಗೌಡರ ನೋಟು ಎಣಿಸುವ ಯಂತ್ರ
3) ಚನ್ನಿಗಪ್ಪ	c) ವಿದ್ಯುತ್ತೂ ಇಲ್ಲ, ವಿದ್ವತ್ತೂ ಇಲ್ಲ
4) ರೇವಣ್ಣ	d) ಭೂಮಿ ನುಂಗುವ ಬಚ್ಚಲು ಮಗ
5) ರಾಮಚಂದ್ರೇಗೌಡ	e) ಎಷ್ಟ್ ಟೈರ್ ನುಂಗಿದ್ರೂ tired ಆಗಲ್ಲ

ಉತ್ತರಗಳು:
1) d, 2) d, 3) b, 4) c, 5) 1-d, 2-e, 3-b, 4-c, 5-a

ಒಂದು ಸಾರ್ವತ್ರಿಕವಾದ ಅರ್ಥದಲ್ಲಿ, ಕಲ್ಪನೆಯ ಅಭಿವ್ಯಕ್ತಿಯೇ ಕಾವ್ಯ -ಷೆಲ್ಲಿ

ಒಳ್ಳೆಯ ಪರಂಪರೆ

ಈ ಚೀನಾದ ಜನ ಎಷ್ಟು ನೇರ ನಡೆನುಡಿಯ ಸಜ್ಜನರು! ಭಾರತಕ್ಕಿಂತಲೂ ಜಟಿಲ, ವೈಭವದ, ವಿಚಿತ್ರ ಸಂಸ್ಕೃತಿ ಪಡೆದು ಸಾವಿರಾರು ವರ್ಷ ಲೆಕ್ಕವಿಲ್ಲದಷ್ಟು ದಬ್ಬಾಳಿಕೆಯ, ದಿಟ್ಟ, ಮಾನವೀಯ ರಾಜರನ್ನು ಪಡೆದವರು. ಎಲ್ಲ ಬಗೆಯ ತತ್ವ, ನೀತಿ, ಆಧ್ಯಾತ್ಮಿಕತೆಯನ್ನು ಕಂಡವರು, ಶೋಧಿಸಿದವರು. ಕಳೆದ ನಾಲ್ಕು ದಶಕದಿಂದ ಕಮ್ಯೂನಿಸಂ ಆಡಳಿತದಲ್ಲಿ ತಮ್ಮ ಜಡಗೊಂಡಿದ್ದ ಚೇತನವನ್ನು ಪಣಕ್ಕಿಟ್ಟುಕೊಂಡವರು. ಕಮ್ಯೂನಿಸಂನ ಶಸ್ತ್ರಚಿಕಿತ್ಸೆಯಿಂದ ಮರು ಜೀವ ಪಡೆದು ಮತ್ತೊಮ್ಮೆ ತಮ್ಮ ಪ್ರಾಚೀನ ಮುಗುಳ್ನಗೆ ಬೀರಲು ಯತ್ನಿಸುತ್ತಿರುವವರು.


ಕ್ಷಮಿಸಿ. ಇದನ್ನೆಲ್ಲ ಹೇಳುವುದು ಅನಗತ್ಯವಾಗಿತ್ತು. ಮೊನ್ನೆ ನಾನು ಚೀನಾ ಬಗ್ಗೆ ಇತ್ತೀಚಿನ ಪುಸ್ತಕವೊಂದನ್ನು ಓದುತ್ತಾ ಗಮನಿಸಿದ ಸಣ್ಣ ವಿಷಯ ನಮೂದಿಸಲು ಇಷ್ಟೆಲ್ಲ ಹೇಳಬೇಕಾಗಿರಲಿಲ್ಲ. ಅಲ್ಲಿಯ ಗಣ್ಯ ಅಧಿಕಾರಿಯೊಬ್ಬ ತನ್ನ ಆಫೀಸಿಗೆ ಸೈಕಲ್ ಮೇಲೆ ಹೋಗುತ್ತಾನೆ; ಸರ್ಕಾರಿ ಕೆಲಸ ಮಾಡುವಾಗ ಮಾತ್ರ ಆಫೀಸಿನ ಕಾರು ಬಳಸುತ್ತಾನೆ.



ಆತ ಮತ್ತು ಅವನ ಸಹಾಯಕರು ಒಂದೇ ಕೋಣೆಯಲ್ಲಿ ಕೂತು ಕೆಲಸ ಮಾಡುತ್ತಾರೆ.

ಅದೂ ಇರಲಿ. ಈ ಚೀಣಿ ಆಫೀಸುಗಳಲ್ಲಿ ಸಿಬ್ಬಂದಿಯ ಸಭೆ ಕರೆದಾಗ ಅವರು ಟೇಬಲ್‌ಗಳ ಮೇಲೆ ಇಟ್ಟಿರುವುದು ಏನು ಗೊತ್ತೆ? ಒಳ್ಳೆಯ ಟೀ, ಬಿಸ್ಕತ್ತು ಮತ್ತು ಸಿಗರೇಟು ಪ್ಯಾಕೆಟ್‌ಗಳು.

ಚೀನೀಯರು ತಮ್ಮ ವಿಶಿಷ್ಟ ಸುಖದ ಸೊಗಡನ್ನು (ಕಮ್ಯುನಿಸ್ಟ್ ಆಡಳಿತದಲ್ಲೂ) ಕಳೆದುಕೊಂಡಿಲ್ಲ. ಹಾಗೆಯೇ ಕೆಲಸದ ಖುಷಿಯನ್ನು ಕೂಡ. ಸಿಗರೇಟ್, ಟೀ ನೀಡುವ ಸುಖವನ್ನು. ಆದ್ದರಿಂದಲೇ ಅಲ್ಲಿ ಉತ್ಪಾದಿಸುವ ಕೆಚ್ಚು, ಬದುಕುವ ಕಾತರ ಇವೆ.



ಜೂನ್ 26, 1988

ರಾಜ್ಯಪಾಲರನ್ನು ನೋಡಿದ್ದು

ಮೊನ್ನೆ ಕರ್ನಾಟಕದ ಗೌರ್ನರ್ ವೆಂಕಟಸುಬ್ಬಯ್ಯನವರನ್ನು ನೋಡಿದೆ. ಧರ್ಮವೀರ, ಗೋವಿಂದನಾರಾಯಣರನ್ನು ದೂರದಿಂದ ನೋಡಿದ್ದೆ. ಬ್ಯಾನರ್ಜಿಯವರನ್ನು ಕೂಡ. ರಾಜಭವನದ ಎದುರಿನ ಚಪ್ಪರದಲ್ಲಿ ಇವರು ಮಂತ್ರಿಗಳಿಗೆ ಪ್ರಮಾಣ ವಚನ ನೀಡುವಾಗ ದೂರದಲ್ಲಿ ಕಾಣಿಸುತ್ತಿದ್ದರು. ಹತ್ತಿರ ಕೂತು ಮಾತಾಡಿದ್ದು ಈ ವೆಂಕಟಸುಬ್ಬಯ್ಯನವರ ಜೊತೆಗೆ ಮಾತ್ರ. ಇದನ್ನೂ ನಾನು ಇಷ್ಟಪಟ್ಟವನಲ್ಲ. ಹೆಗಡೆಯವರ ಉದ್ದೇಶಪೂರ್ವಕ ತಪ್ಪು ಹೇಳಿಕೆಯ ಬಗ್ಗೆ (ರಾಜ್ಯಪಾಲರು ಪ್ರವಾಸದಲ್ಲಿದ್ದಾಗ) ಒಂದು ಮನವಿ ಸಲ್ಲಿಸಿದ್ದರಿಂದ ಒಮ್ಮೆ ಇವರೊಂದಿಗೆ ಮಾತಾಡುವುದು ಒಳ್ಳೆಯದೆನ್ನಿಸಿ ಸಂದರ್ಶನ ಬೇಕೆಂದು ಕೇಳಿದ್ದೆ. ಮಂಗಳವಾರ 11.30ಕ್ಕೆ ಬರಲು ಸೂಚಿಸಿದ್ದರು.

ನಾನು ರಾಜಭವನವೆಂದರೆ ಜನರಿಂದ ಕಿಕ್ಕಿರಿದಿರುತ್ತದೆ, ರಾಜ್ಯಪಾಲರು ತಲೆ ತುರಿಸಿಕೊಳ್ಳಲೂ ಪುರುಸೊತ್ತಿಲ್ಲದೆ ಒದ್ದಾಡುತ್ತಾರೆ ಎಂದು ತಿಳಿದಿದ್ದೆ. ಇಡೀ ರಾಜಭವನದ ಸಿಬ್ಬಂದಿ ನನಗಾಗಿ, ನಮ್ಮ ವಕೀಲರಿಗಾಗಿ ಕಾಯುತ್ತಿದ್ದಂತೆ ಇತ್ತು. ಬೊಮ್ಮಾಯಿಯವರ ಶಿಷ್ಯ ಕೋಟಲಿಂಗನಗೌಡರು, ಪ್ರಕಾಶರ ಅಭಿಮಾನಿಯಾದ ಇನ್ನೊಬ್ಬರು ಸಹಾಯಕರು. ಹಲವಾರು ಕಾವಲುಗಾರರು. ಒಂದು ರೂಮಿನಲ್ಲಿ ರಾಜ್ಯಪಾಲರ ಅಂಗರಕ್ಷಕ. ತೋಟದಲ್ಲಿ ಅಲ್ಲಲ್ಲಿ ಒಬ್ಬಬ್ಬರು ಸೇವಕರು. ಗೇಟಿನ ಹತ್ತಿರ ಕಾವಲುಗಾರರು. ಹಿಂದಿನ ರಾತ್ರಿ ನನಗೆ ರಾಜ್ಯಪಾಲರ ಸಂದರ್ಶನದ ಕಾಗದ ಕೊಟ್ಟಿದ್ದ ನಡುವಯಸ್ಸಿನವ ಖಾಕಿ ಬಟ್ಟೆಯಲ್ಲಿದ್ದು ನನ್ನನ್ನು ಆದರದಿಂದ ಸ್ವಾಗತಿಸಿದ. ಹತ್ತು ನಿಮಿಷ ಮುಂಚೆ ಹೋಗಿದ್ದರಿಂದ ಗೇಟಿನ ಹೊರಗೇ ಕಾದು ಸರಿಯಾದ ವೇಳೆಗೆ ಹೋಗೋಣವೆಂದುಕೊಂಡೆ, ಆದರೆ ಅಲ್ಲಿದ್ದ ರಾಜ್ಯಪಾಲರ ಸಿಬ್ಬಂದಿ 'ಬನ್ನಿ ಸಾರ್' ಎಂದು ಒತ್ತಾಯಿಸಿತು. ಅರೆ, ಇವರಿಗೆಲ್ಲ ನನ್ನ ಹೆಸರು ಗೊತ್ತಿರುವಂತಿದೆ.

ಸರಿಯಾಗಿ ಹನ್ನೊಂದೂವರೆಗೆ ರಾಜ್ಯಪಾಲರ ಕರೆ ಬಂತು. ಅಷ್ಟರಲ್ಲಿ ಮುಖ್ಯ ಸಹಾಯಕ ಕೋಟಲಿಂಗನಗೌಡರ ದೇಶಾವರಿ ನಗೆ, ದಿನನ್ನೂ ಹೇಳದೆ ಬಹಳ ಮಾತಾಡುವ ಅಧಿಕಾರಿಯ ವರಸೆ, ಒಂದೆರಡು ಚಿಕ್ಕಪುಟ್ಟ ಕುಶಲದ ಮಾತು ಆಡಿದ್ದರು. ಗೌರ್ನರ್ ವೆಂಕಟಸುಬ್ಬಯ್ಯ ಕೂತಿದ್ದರು. ನಗುತ್ತ ಸ್ವಾಗತಿಸಿದರು. ನಾನು ತಿಳಿದದ್ದಕ್ಕಿಂತ ಕುಳ್ಳನೆಯ, ನಸುಗಪ್ಪು ವ್ಯಕ್ತಿ. ಮಾತಾಡಲು 'ಸ್ಟಾಕ್' ವಿಷಯ ಇದ್ದೇ ಇತ್ತು. ನಿಮಗೆ ರಾವಣನ ಹೆಸರು ಹೇಗೆ ಬಂತು? ನೀವೇ ಇಟ್ಟುಕೊಂಡದ್ದೋ, ತಂದೆತಾಯಿ ಇಟ್ಟದ್ದೋ? ಯಥಾಪ್ರಕಾರ ನಾನು ಅದಕ್ಕೆಲ್ಲ ಹೊಣೆಯಲ್ಲ ಎಂದು ಹೇಳಿದೆ. ಗೌರ್ನರ್ ನಮ್ಮ ಪತ್ರಿಕೆ ಜಾಹೀರಾತು ಪಡೆಯದಿರುವ ಬಗ್ಗೆ, ನನ್ನ ಸಿನಿಮಾ ನಿರ್ದೇಶನದ ಬಗ್ಗೆ ವಿಷಯ ಸಂಗ್ರಹಿಸಿದ್ದರು. ಅವರು ಇನ್ನೂ ನಮ್ಮ ಮನವಿ ಓದಿರಲಿಲ್ಲ. ಆದ್ದರಿಂದ ಮಾತಾಡುವುದೇನೂ ಹೆಚ್ಚಾಗಿ ಇರಲಿಲ್ಲ. 'ಬೆಂಗಳೂರು ಹೇಗೆನ್ನಿಸುತ್ತೆ?' ಅಂದೆ. ಇದು ಅವರಿಗೆ ಮಾಮೂಲಿ ಪ್ರಶ್ನೆಯಾಗಿತ್ತು. 'ಮೆಚ್ಚದಿದ್ದರೆ ನೀವು ಬಿಡ್ತೀರಾ?' ಎಂದು ಹೇಳಿ 'ದಿಲ್ಲಿಯ ತರುವಾಯ ತುಂಬ ಒಳ್ಳೆಯ ಪಟ್ಟಣ' ಎಂದು ನಮ್ಮ ಆತ್ಮಕ್ಕೆ ಶಾಂತಿ ತಂದರು. ಈಗಾಗಲೇ ಈ ವ್ಯಕ್ತಿ ಕನ್ನಡದ ಹಲವಾರು ಮಾತು ಕಲಿತಿದ್ದರು. 'ಸುಡುಗಾಡು' ಎಂಬ ಪದ ತೆಲುಗಿನಲ್ಲೂ ಇದೆ ಅಂದರು. ತಾವೂ ಒಮ್ಮೆ ಪತ್ರಿಕೆ ನಡೆಸಿ ಕೈಸುಟ್ಟುಕೊಂಡದ್ದಾಗಿ ಹೇಳಿದರು. ನಾವು ಕೈ ಸುಟ್ಟುಕೊಳ್ಳುವ ಪ್ರಶ್ನೆಯೇ ಇಲ್ಲ ಎಂದು ಹೆಮ್ಮೆಯಿಂದ ಹೇಳಿದೆವು.



'ದಯವಿಟ್ಟು ನಮ್ಮ ಮನವಿ ಓದಿ. ಯಾವುದಾದರೂ ಸ್ಪಷ್ಟನೆ ಬೇಕಾದರೆ ನನಗೆ ತಿಳಿಸಿ-ಬಂದು ನೋಡುತ್ತೇನೆ' ಎಂದು ಹೇಳಿದೆ. ಒಳ್ಳೆಯ ಟೀ ಕೊಟ್ಟರು. 'ನಮಸ್ಕಾರ' ಅಂದು ಬಂದೆ. ■

ಈಗ ಹುಡುಗಿಯರಿಗಿಂತ್ಲೂ ಆಂಟಿಯರೇ ತುಂಟಿಗಳಾಗ್ತಿದ್ದಾರಲ್ಲಾ?




ಉಮಾಮಂಚಾಲಿ ಗುರುರಾಜ, ಸಂಗನಕಲ್ಲು
ಹೆಲ್ಮೆಟ್ ಕಡ್ಡಾಯ ಮಾಡಿದ ಹಾಗೆ ಡ್ರೈವ್ ಮಾಡುವಾಗ ಮೊಬೈಲ್ ಕಡ್ಡಾಯವಾಗಿ ಉಪಯೋಗಿಸಬಾರದೆಂದೂ ಮಾಡಿದರೆ?
* ನಮ್ಮ ಜಿ. ರಾಜಶೇಖರ್‌ರವರು ಹೇಳುವಂತೆ 'ಮೊಬೈಲ್ ಭಯೋತ್ಪಾದಕರು' ಕಡಿಮೆ ಆಗುತ್ತಾರೆ.

ಬಿ.ಎಸ್. ಇಮ್ಮಾನುವೇಲ, ಮಸರಕಲ
1) ಆಕಾಶದಲ್ಲಿ ಲಂಕೇಶರು ಟ್ವಿಂಕಲ್ ಸ್ಟಾರಾ, ಸಿಂಪಲ್ ಸ್ಟಾರಾ?
* ಬ್ರಿಲಿಯಂಟ್ ಸ್ಟಾರ್ ಅಂತಾಳೆ ಇಶಾ ಪಾಪು.
2) ಬೇವಿನ ಕಾಯಿ ಎಂಬ ಆರೋಪಿಯ ರಕ್ಷಣೆಗೆ ಹಾಗಲಕಾಯಿ ಎಂಬ ವಕೀಲನನ್ನು ನೇಮಿಸಿದರೆ...?
* HDK+CH ಕೇಸ್ ಆಗುತ್ತೆ.

ಬಸವರಾಜ ಬೆಸ್ತರ್, ಹರಪನಹಳ್ಳಿ
ಕವಿತಾಗೌಡಗೂ, ಕವಿತಾ ಲಂಕೇಶ್‌ಗೂ ಇರುವ ವ್ಯತ್ಯಾಸ?
* ಅವಳದ್ದು 'ಗುಳುಂ ಗುಳಂ'. ನಮ್ಮವಳದ್ದು 'ತನನಂ ತನನಂ.'

ಎ.ಎಸ್. ಸ್ವಾಮಿ, ಶೋರಾಪೂರ
ಬೆಕ್ಕು ಕಣ್ಣು ಮುಚ್ಚಿ ಹಾಲು ಕುಡಿಯುವುದೇಕೆ?
* ಕಾಲ ಬುಡದಲ್ಲಿ ಕೋಟ್ಯಂತರ ರೂಪಾಯಿ ಬಿದ್ದಿದ್ದರೂ ಗೌಡರು ಕಣ್ಣೀರಿಡುವುದೇಕೆ?



ವೈ.ಎ. ಸಂತೋಷ್ ಕಂಪ್ಲಿ
ಮನುಷ್ಯನಿಗೆ ನಿಷ್ಠಾವಂತ ಜತೆಗಾರನಾಗಿ ಕೊನೆಗೂ ಉಳಿಯೋದು ಯಾರು?
* ರಾಜ, ಸ್ವೆಫಿ ಮತ್ತು ಚಿನ್ನಿ ಅಂತಹವರು.

ರಾಮಚಂದ್ರ ಕೊಪ್ಪಲು, ಅರಳಾಪುರ
ಕೋಮುವಾದ, ಕುಟುಂಬವಾದದ ಸರ್ಕಾರವಾದ್ರೆ, ಕಾಂಗ್ರೆಸ್‌ನವರದ್ದು....
* ಕಂಟಕ ಸರಕಾರ.

ಬಿ.ಚಂದ್ರೇಗೌಡ, ಬೆಂಗಳೂರು
ಹೆಣ್ಣೇ ಇಲ್ಲದ ಪ್ರಪಂಚ ಹೇಗಿರುತ್ತಿತ್ತು?
* ನರಕದ ಬಗ್ಗೆ ಕೇಳಿದ್ದೀರಿ ಅಂತ ಭಾವಿಸುತ್ತೇವೆ ಚಂದ್ರೇಗೌಡರೆ.

ಅ.ರೆಡ್ಡಿ, ಬೆಂಗಳೂರು
ವಿಷ್ಣು ಚಕ್ರಕ್ಕೂ, ರೆಡ್ಡಿಯ ಸಿಡಿ ಚಕ್ರಕ್ಕೂ ಇರುವ ವ್ಯತ್ಯಾಸವೇನು?
* ಅದು Fast Motion, ಇದು Slow motion ಅಷ್ಟೇ.

ಜೆ.ಡಿ.ಎಲ್. ನವೀನ್, ಗದ್ದಂಬಚ್ಚಹಳ್ಳಿ
ದೊಡ್ಡವರು ಏಕಾಂತದಲ್ಲಿದ್ದಾಗ ಚಿಕ್ಕವರು ನೋಡಬಹುದಂತೆ, ಚಿಕ್ಕವರು ಏಕಾಂತದಲ್ಲಿದ್ದಾಗ ದೊಡ್ಡವರು ನೋಡಬಾರದಂತೆ ಯಾಕೆ?
* ದೊಡ್ಡವರು 'ಕಪಿಚೇಷ್ಟೆ'ಗಳನ್ನು ಮೀರಿರುತ್ತಾರೆ ಎಂಬ ಭ್ರಮೆ.

ಹೇಮಂತ್ ಮೋರಿಗೇರಿ, ಹರಪನಹಳ್ಳಿ
ರಾಜಕೀಯ ತಲ್ಲಣಗೊಳಿಸಿದ ಗಣಿ ಸ್ಫೋಟ ವಾಟಾಳ್ ನಾಗರಾಜ್‌ಗೆ ಕೇಳಿಸಿದಂತೆ ಕಾಣುತ್ತಿಲ್ಲವಲ್ಲ?
* ಅದು ಚಾಮರಾಜನಗರದ ಮರ್ಮ ಅನ್ನುವವರೂ ಇದ್ದಾರೆ ಗೊತ್ತಾ?

ಅನಾರ್ಕಲಿಸಲೀಂ ಚಿಣ್ಯ, ಶ್ರೀರಂಗಪಟ್ಟಣ
ಮಹಿಮಾ ಪಟೇಲ್ ಥರ ಎಲ್ಲಾ ರಾಜಕಾರಣಿಗಳೂ ಮೌನವ್ರತ ಮಾಡಿದರೆ ದೇಹಶುದ್ಧಿ, ದೇಶಶುದ್ಧಿ ಎರಡೂ ಆಗುತ್ತದೆಯಲ್ಲವೆ?
* ಆದರೆ, ಕಲ್ಕಿ ಎಂಬ ಅನಿಷ್ಟ ಅಂಟಿಕೊಳ್ಳುತ್ತಲ್ಲಾ...

ಟಿ.ಎಚ್. ನಾಯ್ಕ, ಅಂಬಾರಗೊಪ್ಪ
ಭಯೋತ್ಪಾದಕರು ಬಾಂಬ್ ಸಿಡಿಸಿದ್ರೆ ಸಾವು ನೋವು! ರಾಜಕೀಯ ವಲಯದಲ್ಲಿ ಬಾಂಬ್ ಸಿಡಿದ್ರೆ?
* ವಿಚಾರಣೆ, ತನಿಖೆ, ಮೊಕದ್ದಮೆಗಳೆಂಬ ಸೇಫ್ ಗಾರ್ಡ್‌ಗಳು ಇದ್ದೇ ಇವೆ.

ಆ.ರಾ. ಮಂಜುನಾಥ್, ಗೆದರೆ
ಈಗ ಹುಡುಗಿಯರಿಗಿಂತ್ಲೂ ಆಂಟಿಯರೇ ತುಂಟಿಗಳಾಗ್ತಿದ್ದಾರಲ್ಲಾ?
* 'ಟ' ಪ್ರಭಾವ ಅಂದರೆ ಅರ್ಥ ಆಗುತ್ತಾ.

ಎಸ್. ಶಶಿಧರ, ಬೆಂಗಳೂರು
ಕುರಿ ಕೊಬ್ಬಿದಷ್ಟೂ ಕುರುಬನಿಗೆ ಲಾಭ, ಕುರುಬ ಕೊಬ್ಬಿದಷ್ಟು?
* ಗೌಡನಿಗೆ ಕಷ್ಟ.

ಛೀ ತುಂಟಿ!

ಹೊಸದಾಗಿ ಮದುವೆ ಆಗಿದ್ದ ಅವರಿಬ್ಬರ ಮೊದಲ ರಾತ್ರಿ ಆದಾಗಿತ್ತು, "ನನಗೆ ಇದೆಲ್ಲ ಏನೂ ಗೊತ್ತಿಲ್ಲ ತುಂಬಾ ಭಯ ಆಗ್ತಿದೆ" ಅಂದಳು ಹುಡುಗಿ.

"ಏನೂ ಯೋಚನೆ ಮಾಡಬೇಡ. ನಿನ್ನದು ಜೈಲು, ನನ್ನದು ಖೈದಿ ಅಂತ ಭಾವಿಸಿ, ಖೈದಿಯನ್ನು ಜೈಲಿಗೆ ಸೇರಿಸುವ ಆಟ ಆಡೋಣ" ಅಂದ ಹುಡುಗ.

ಮೊದಲನೆ ಸುತ್ತು ಮುಗಿದ ನಂತರ ಹುಡುಗಿ "ಖೈದಿ ಜೈಲಿನಿಂದ ಪರಾರಿ ಆಗಿದ್ದಾನೆ" ಅಂದಳು. ಹುಡುಗ "ಬಾ ಅವನನ್ನು ಮತ್ತೆ ಬಂಧಿಸೋಣ" ಎಂದು ಎರಡನೆ ಸುತ್ತಿಗೆ ಇಳಿದ.



ಎರಡನೆ ಬಾರಿ ಮುಗಿದ ನಂತರ ಹುಡುಗ ಚೇತರಿಸಿಕೊಳ್ಳತೊಡಗಿದ. ಆದರೆ ಈ ಹೊಸ ಆಟವನ್ನು ಆನಂದಿಸುತ್ತಿದ್ದ ಹುಡುಗಿ "ನೋಡಿ, ಖೈದಿ ಮತ್ತೆ ಪರಾರಿಯಾಗಿದ್ದಾನೆ." ಎಂದು ದೂರುತ್ತ ಮೂರನೇ ಸುತ್ತಿಗೆ ಹುಡುಗನನ್ನು ಪ್ರೇರೇಪಿಸಿದಳು. ಹುಡುಗ ಕಷ್ಟಪಟ್ಟು ಆಟವಾಡಿದ.

ಅದಾದ ಮೇಲೆ ಅವನು ಏದುಸಿರು ಬಿಡುತ್ತಾ ಬಿದ್ದಿರುವಾಗ "ಖೈದಿ ಮತ್ತೆ ಪರಾರಿ ಆಗಿದ್ದಾನೆ" ಎಂದು ರಾಗ ಎಳೆದಳು. ಸುಸ್ತಾಗಿದ್ದ ಹುಡುಗ "ಅದು ಜೀವಾವಧಿ ಶಿಕ್ಷೆ ಅಲ್ಲ" ಎಂದು ಗೊಣಗಿದ.

ಬಹುಮಾನಿತ ಪ್ರಶ್ನೆ

ಇಂದಿರಾ ಶ್ರೀಧರ್, ದಾವಣಗೆರೆ
ದೇವೇಗೌಡರ ಕುಟುಂಬದವರು 'ಲಂಕೇಶ್'ಗೆ ಶಾಪ ಹಾಕ್ತಾ ಕೂತಿದ್ದಾರಂತಲ್ಲ?
* ನಮ್ಮ 'ಚಂಡಿ' ಮುಂದೆ ಅವರ 'ಚಂಡಿಹೋಮ' ವ್ಯರ್ಥ ಅಂತ ಗೊತ್ತಿರೋದ್ರಿಂದ ಇಗ್ಗೇನು ಮಾಡ್ತಾರೆ ಪಾಪ!

ನಮ್ಮ ಪ್ರಶ್ನೆಗೆ ನಿಮ್ಮ ಉತ್ತರ!!

ವಾರದ ಪ್ರಶ್ನೆ:

ಹಿರಿ 'AKKA'ನ ಚಾಳಿ ಸಚಿವ-ಶಾಸಕರಿಗೆಲ್ಲ.... ನೀವೇನಂತೀರಾ?

ಆಗಸ್ಟ್ 30ರ ಸಂಚಿಕೆಯ ನಮ್ಮ ಪ್ರಶ್ನೆ: ಕುಮಾರಸ್ವಾಮಿಯವರು ಮೊನ್ನೆ '6 ವರ್ಷದಲ್ಲಿ ಸಾಧಿಸಬಹುದಾದ್ದನ್ನು ಆರೇ ತಿಂಗಳಲ್ಲಿ ಸಾಧಿಸಿದ್ದೇನೆ' ಎಂದಿರುವುದರ ಅರ್ಥ?
ನಿಮ್ಮ ಉತ್ತರ: ಕೊಟ್ಟಿರೆ ಸಾಕು ಅಧಿಕಾರ ಕೆಲವೇ ದಿನ, ಕೋಟಿ ಹೊಡೆದು ಹರಾಜು ಮಾಡುವ ಈ ಸರ್ಕಾರನಾ'' ಎನ್ನುತ್ತಿದ್ದಾರೆ.
ಉತ್ತರ ಕಳುಹಿಸಿ ಬಹುಮಾನ ಪಡೆದಿರುವವರು: ಅನಾರ್ಕಲಿ ಸಲೀಂ ಚಿಣ್ಯ, ಶ್ರೀರಂಗಪಟ್ಟಣ


ದೇವೇಗೌಡರ ಅಳಿಯ ಡಾ. ಮಂಜುನಾಥರ 42 ಕೋಟಿ ರೂ.

“ಹೃದಯ ಸಾಮ್ರಾಜ್ಯ!”

“ಇದೋ ನೋಡಿ. ಇದೀಗ ಮಾಜಿ ಪ್ರಧಾನಿ ದೇವೇಗೌಡರ ಅಳಿಯ, ಪ್ರಖ್ಯಾತ ಹೃದ್ರೋಗ ತಜ್ಞ ಡಾ. ಸಿ.ಎನ್. ಮಂಜುನಾಥರ ಸರದಿ: ಪುರಾತನ ಬೆಂಗಳೂರಿನ ಹೃದಯ ಸ್ಥಾನದಲ್ಲಿರುವ ಶೇಷಾದ್ರಿಪುರದಲ್ಲಿ 42 ಕೋಟಿ ರೂ. ವೆಚ್ಚದ ಹೈಟೆಕ್ ಹಾರ್ಟ್ ಹಾಸ್ಪಿಟಲ್ ಯೋಜನೆ....

ಇದಕ್ಕೋಸ್ಕರವೇ ಸ್ವಸ್ತಿಕ್ ಕಾಂಪ್ಲೆಕ್ಸ್ ಪಕ್ಕದಲ್ಲಿದ್ದ “ಸತ್ಯಪ್ರಕಾಶ್ ಲಾಜ್” ಎಂಬ ಹಳೆಯ ಹೋಟೆಲ್ ಸಂಕೀರ್ಣದ 10,868 ಚದರಡಿಯ ಭಾರೀ ನಿವೇಶನ ಖರೀದಿ... ಮಾರುಕಟ್ಟೆ ಮೌಲ್ಯ ಕನಿಷ್ಠ 10 ಕೋಟಿ ರೂಪಾಯಿಗಳೆಂದು ಅಂದಾಜು ಮಾಡಲಾದ ಈ ದುಬಾರಿ ಆಸ್ತಿಯನ್ನು ಅದರ ಮೂಲ ಮಾಲೀಕರಿಂದ ಬರೀ 3 ಕೋಟಿ 80 ಲಕ್ಷ ರೂ. ಎಂದು ಅಧಿಕೃತ ಕ್ರಯಪತ್ರದಲ್ಲಿ ನಮೂದಿಸಿ ಅಗ್ರಿಮೆಂಟು!

ಯಥಾಪ್ರಕಾರ ಅವರ ಮೈದುನ ಸನ್ಮಾನ್ಯ ಎಚ್.ಡಿ. ಕುಮಾರಸ್ವಾಮಿಯವರು ಕರ್ನಾಟಕದ ಸಿಂಹಾಸನಾರೋಹಣ ಮಾಡಿದ ನಂತರವೇ ಈ ಪ್ರಾಪರ್ಟಿ ಡೀಲಿಗೆ ಎದುರಾಗಿದ್ದ ಅಡೆತಡೆಗಳೆಲ್ಲವೂ ನಿವಾರಣೆಯಾಗಿ ವಹಿವಾಟು ಯಶಸ್ವಿ....




ಅಂದರೆ ಮಾರ್ಚ್ 27, 2006 ರಂದೇ ಸದರಿ ಆಸ್ತಿಯ ಸುತ್ತಮುತ್ತ ಕಳೆದ 10 ವರ್ಷಗಳಿಂದ ಬಿಗಿದುಕೊಂಡಿದ್ದ ಕೋರ್ಟು ಕಚೇರಿ ತಗಾದೆಗಳೆಲ್ಲ ದಿಢೀರನೇ ಇತ್ಯರ್ಥಗೊಂಡು ಡಾ. ಮಂಜುನಾಥರ ಹಾಸ್ಪಿಟಲ್ ಕಂಪನಿಯ ಖರೀದಿ ವ್ಯವಹಾರದ ದಾರಿ ಸುಗಮ....

ಒಂದು ಕಡೆ ಹೆಚ್ಚೂ-ಕಮ್ಮಿ ಅದೇ ವಾರದಲ್ಲಿ ಅಂದರೆ ಮಾರ್ಚ್ 24, 2006 ರಂದು ಡಾ. ಮಂಜುನಾಥರ ಪತ್ನಿ ಅನಸೂಯ ಮತ್ತವರ ಸೋದರ ಹಾಗೂ ಅತ್ತಿಗೆಯರೆಲ್ಲ ಸೇರಿ ವೈಟ್‌ಫೀಲ್ಡ್‌ನ 36 ಕೋಟಿ ರೂ. ಮೌಲ್ಯದ ಐಟಿ-ಕಾಂಪ್ಲೆಕ್ಸ್ ಕಟ್ಟಡ ಖರೀದಿ ಮುಗಿಸುತ್ತಿದ್ದಂತೆಯೇ, ಮತ್ತೊಂದೆಡೆ ಡಾಕ್ಟರರ ಬಿಸಿನೆಸ್ ಪಾರ್ಟನರುಗಳೆಲ್ಲ ಸೇರಿ ಈ ಸತ್ಯಪ್ರಕಾಶ್ ಲಾಜ್ ಖರೀದಿ ವ್ಯಾಪಾರವನ್ನು ಸುಸೂತ್ರವಾಗಿ ನೆರವೇರಿಸಿಬಿಟ್ಟರು!

ಯಾವುದಿದು ಟ್ರನಿಟ ಕಂಫರ್ಟ್ ಪ್ರೈ. ಲಿ.?

ದೇವೇಗೌಡರ ವಂಶಾವಳಿಯಲ್ಲಿಯೇ ಅತ್ಯಂತ ಹೆಚ್ಚಿನ ವಿದ್ಯೆ ವೃತ್ತಿ ಪ್ರಾವಿಣ್ಯತೆ ಹಾಗು ಸಾಕಷ್ಟು ಸಾಮಾಜಿಕ ವರ್ಚಸ್ಸು ಗಳಿಸಿಕೊಂಡು ಸುದ್ದಿ ಮಾಧ್ಯಮಗಳಲ್ಲೂ ನಿರಂತರವಾಗಿ ಪ್ರಚಾರದಲ್ಲಿದ್ದುಕೊಂಡೇ ಬಂದಿರುವ ಡಾ. ಸಿ.ಎನ್. ಮಂಜುನಾಥ್‌ರ ಅಧಿಕೃತ ಪದನಾಮ (ಪ್ರತಿಷ್ಠಿತ) ಜಯದೇವ ಸರ್ಕಾರಿ ಹೃದ್ರೋಗ ಕೇಂದ್ರದ ಡೈರೆಕ್ಟರ್!



ಡಾ. ಮಂಜುನಾಥ್

ಕಳೆದ ದಶಕದುದ್ದಕ್ಕೂ ತಮಗಿಂತ ಕನಿಷ್ಠ 10 ವರ್ಷ ಸೀನಿಯಾರಿಟಿ ಹೊಂದಿದ್ದ ನಿಕಟಪೂರ್ವ ನಿರ್ದೇಶಕ ಡಾ. ಎನ್. ಪ್ರಭುದೇವ್‌ರಿಗೆ ಪಡಬಾರದ ಕಷ್ಟ, ಕಿರುಕುಳ, ಚಿತ್ರಹಿಂಸೆಗೆ ಗುರಿ ಮಾಡಿ ಕಡೆಗೂ ಅವರೇ ಸ್ವಯಂನಿವೃತ್ತಿ ಪಡೆದು ನಿರ್ಗಮಿಸುವಂತೆ ಮಾಡುವಲ್ಲಿ ಯಶಸ್ವಿಯಾದ ಡಾ. ಮಂಜುನಾಥರು ತೀರ ಇತ್ತೀಚೆಗಷ್ಟೇ “ಜಯದೇವ”ದ ಡೈರೆಕ್ಟರ್

ರವೀಂದ್ರ ರೇಶ್ಮೆ


ಪದವಿ ಗಿಟ್ಟಿಸಿಕೊಂಡು ತಮ್ಮ ಬದುಕಿನ ಸರ್ವೋತ್ಕೃಷ್ಟ ಆಸೆಯನ್ನೀಡೇರಿಸಿಕೊಂಡರು....

ಆದರೆ ಕರ್ನಾಟಕದ ಹಾಲಿ ರಾಜ ಪರಿವಾರದ ಮಹತ್ವಾಕಾಂಕ್ಷಿ ಅಳಿಯ ಡಾ. ಮಂಜುನಾಥರಿಗೆ “ಜಯದೇವ ಆಸ್ಪತ್ರೆ” ಕೇವಲ ಸಾಮಾಜಿಕ ಪ್ರತಿಷ್ಠೆಯ ತಾಣವಷ್ಟೇ... ಅವರ ಹೃದ್ರೋಗ ಚಿಕಿತ್ಸಾಶಾಸ್ತ್ರದ ಅನುಷ್ಠಾನಕ್ಕೆ ಆರಿಸಿಕೊಂಡ ಅಸಲೀ “ಕರ್ಮಭೂಮಿ” ಎಂದರೆ ಬಸವನಗುಡಿಯ ಆರ್.ವಿ. ಟೀಚರ್ಸ್ ಕಾಲೇಜು ಬಳಿಯಿರುವ ‘ಟ್ರನಿಟ ಹಾಸ್ಪಿಟಲ್ ಅಂಡ್ ಹಾರ್ಟ್ ಫೌಂಡೇಷನ್’ ಎಂಬ ಖಾಸಗಿ ಹೈಟೆಕ್ ಆಸ್ಪತ್ರೆಯೆ!!

ಮೊನ್ನೆ ಆಗಸ್ಟ್ 14-15 ರಂದು ತನ್ನ 6 ನೇ ವಾರ್ಷಿಕೋತ್ಸವದ ಸಂಭ್ರಮವನ್ನು ಪ್ರಕಟಿಸಿಕೊಂಡ ಈ ಟ್ರನಿಟ ಆಸ್ಪತ್ರೆಯ ಅಧಿಕೃತ ಉತ್ಸವ ಮೂರ್ತಿಯೆಂದರೆ ಅದರ CMD ಡಾ.ಬಿ.ಜಿ. ಮುರಳೀಧರ ಎಂಬ ಮತ್ತೊಬ್ಬ ಕಾರ್ಡಿಯಾಕ್ ಸ್ಪೆಷಲಿಸ್ಟ್... ಆದರೆ ಇಡೀ ‘ಟ್ರನಿಟ’ ಸಾಮ್ರಾಜ್ಯದ ಗರ್ಭಗುಡಿಯಲ್ಲಿನ ಅಧಿದೇವತೆ ಇನ್ನಾರೂ ಅಲ್ಲ, ಡಾ. ಸಿ.ಎನ್. ಮಂಜುನಾಥರೇ ಎಂಬ ವಾಸ್ತವಾಂಶ ರಾಜಧಾನಿಯ ಸಮಸ್ತ ವೈದ್ಯಕೀಯ ಸಮುದಾಯಕ್ಕೆಲ್ಲ ಜನಜನಿತ...

ತಮ್ಮ VVIP ಮಾವನವರಾದ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರ ಸಮಸ್ತ ಅಧಿಕಾರ, ಪ್ರಭಾವಳಿಯನ್ನೆಲ್ಲ ಪಣಕ್ಕಿಟ್ಟು ಬಡಿದಾಡಿ ಸರ್ಕಾರಿ ಜಯದೇವ ಆಸ್ಪತ್ರೆಯ ಮುಖ್ಯಸ್ಥನ ಹುದ್ದೆಯನ್ನು ಗಿಟ್ಟಿಸಿಯೂ ಡಾ. ಸಿ.ಎನ್. ಮಂಜುನಾಥರಿಗೆ ಇದೀಗ ತಮ್ಮದೇ ಖಾಸಗಿ ಹೃದ್ರೋಗ-ಸಂಸ್ಥಾನ ಸ್ಥಾಪಿಸಿಕೊಳ್ಳುವವರೆಗೂ ಬಹುಶಃ ನೆಮ್ಮದಿಯಿರುವಂತಿಲ್ಲ.

ಇಂತಹ ಖಾಸಗಿ ತುಡಿತದಿಂದಾಗಿಯೇ ಮೊನ್ನೆ ಆ. 14 ರಂದು ಪತ್ರಿಕಾಗೋಷ್ಠಿ ಕರೆದು ಟ್ರನಿಟ ಕಂಫರ್ಟ್ ಕಂಪನಿಯ ಸಿ.ಎಂ.ಡಿ. ಡಾ. ಮುರಳೀಧರರ ಬಾಯಿಂದ ತಮ್ಮ ಕನಸಿನ ಅನಾವರಣ ಮಾಡಿಸಿದರು ಡಾ. ಮಂಜುನಾಥ್!



ಹಾಸ್ಪಿಟಲ್ ತಲೆ ಎತ್ತಲಿರುವ ಶೇಷಾದ್ರಿಪುರಂನ ಸತ್ಯಪ್ರಕಾಶ್ ಲಾಜ್‌ನ ಜಾಗ

ಸುಮಾರು 42 ಕೋಟಿ ರೂ. ವೆಚ್ಚದಲ್ಲಿ 125 ಬೆಡ್‌ಗಳುಳ್ಳ ಅತ್ಯಾಧುನಿಕ ಸೂಪರ್ ಸ್ಪೆಷಾಲಿಟಿ ಹಾರ್ಟ್ ಹಾಸ್ಪಿಟಲ್ ಕಟ್ಟಡವನ್ನು ನಿರ್ಮಿಸಲಿರುವ ‘ಟ್ರನಿಟ’ ಕಂಪನಿ 2008 ರ ಮಾರ್ಚ್‌ನಲ್ಲಿ ಅಂದರೆ ಇನ್ನೆರಡೇ ವರ್ಷಗಳಲ್ಲಿ ಶೇಷಾದ್ರಿಪುರ-ಮಲ್ಲೇಶ್ವರದ ಕಡೆಯ ನಿವಾಸಿಗಳಿಗೊಂದು ವಿನೂತನ ಆರೋಗ್ಯಧಾಮವನ್ನು ಸಮರ್ಪಿಸಲಿದೆ!!

ಜಯದೇವದಲ್ಲಿ ಸರ್ವೀಸು!! ಟ್ರನಿಟಿಯಲ್ಲಿ ಬಿಸಿನೆಸ್ಸು!!

ಡಾ. ಮಂಜುನಾಥರಿಗೆ ಡೈರೆಕ್ಟರ್ ಪಟ್ಟ ದಕ್ಕುವವರೆಗೂ, ಅಂದರೆ ಹಿಂದಿದ್ದ ಡಾ. ಎನ್. ಪ್ರಭುದೇವರಂತಹ ಸಮರ್ಪಣಾಭಾವದ ವೈದ್ಯಕೀಯ ಆಡಳಿತಗಾರರನ್ನು ಉಚ್ಚಾಟಿಸುವವರೆಗೂ ಜಯದೇವ ಆಸ್ಪತ್ರೆಗೆ ಕರ್ನಾಟಕ ಸರ್ಕಾರದಿಂದ ನಿರಂತರವಾಗಿ ಹಣಕಾಸು ಕೊರತೆ, ಸಿಬ್ಬಂದಿ ಕೊರತೆ, ಸವಲತ್ತುಗಳ ಕೊರತೆ ಹಾಗೂ ಆಗಾಗ್ಗೆ ಆರೋಪ-ವಿಚಾರಣೆಗಳ ಹಾವಳಿ ತಪ್ಪದಂತೆ ನೋಡಿಕೊಳ್ಳಲಾಗಿತ್ತು....

ಸಿಬ್ಬಂದಿಯ ಮಾಸಿಕ ವೇತನಕ್ಕೆ ಅಗತ್ಯವಿರುವ ಅನುದಾನಕ್ಕೂ ಖೋತಾ ಮಾಡಿ ಸಂಸ್ಥೆಯ ಕತ್ತು

⇨⇨⇨

‘ಟ್ರನಿಟ ಕಂಫರ್ಟ್’ ಕಂ.ಲಿ.ನ ಡೈರೆಕ್ಟರ್ ಮಂಡಲಿ



1. ಡಾ. ಬಿ.ಜಿ. ಮುರುಳೀಧರ್- ಚೇರ್ಮನ್ ಮತ್ತು ಎಂ.ಡಿ.
2. ಡಾ. ಪ್ರಕಾಶ್ (ಸಿಎಂಡಿಯವರ ಪಡ್ಡಕ)
3. ಡಾ. ನಾಗಪ್ರಕಾಶ್ (ಸಿಎಂಡಿಯವರ ಮೈದುನ)
4. ಡಾ. ರಮೇಶ್ (?)
5. ಡಾ. ಸಿ.ಎನ್. ಮಂಜುನಾಥ್-ನಿರ್ದೇಶಕರು, ಜಯದೇವ ಹೃದ್ರೋಗ ಸಂಸ್ಥೆ
6. ಡಾ. ಟಿ.ಸಿ. ಭೂಪಾಲ್-ಮೆಡಿಕಲ್ ಸೂಪರಿಂಟೆಂಡೆಂಟ್ ಜಯದೇವ ಹೃದಯ. ಸಂ.
7. ಈಶ್ವರಪ್ಪ-ಬೆಂಗಳೂರಿನ ವ್ಯಾಪಾರಸ್ಥರು
8. ಶ್ರೀನಿವಾಸ್-ಬಳ್ಳಾರಿಯ ಪಾಮ್ ಆಯಿಲ್ ಮತ್ತು ಐರನ್‌ಓರ್ ವ್ಯಾಪಾರಿ
9. ಡಾ. ವೆಂಕಟೇಶಲು-ಕಾರ್ಡಿಯಾಲಜಿಸ್ಟ್ ಬಳ್ಳಾರಿ ಹಾಗೂ ಟ್ರನಿಟ ಆಸ್ಪತ್ರೆ, ಬೆಂಗಳೂರು.

10,868 ಚದರಡಿ ಪ್ರಾಪರ್ಟಿಗೆ ಬರೀ 3.80 ಕೋಟಿ!

“ಹೋಟೆಲ್ ಸತ್ಯಪ್ರಕಾಶ್,” ನಂ. 175, (ಹೊಸ ನಂಬರುಗಳು 139 ರಿಂದ 144/2 ವರೆಗೆ) ಶೇಷಾದ್ರಿಪುರಂ, ಬೆಂಗಳೂರು 20, ಎಂಬ ಹೋಟೆಲ್ ಸಂಕೀರ್ಣವಿದ್ದ ನಿವೇಶನವೇ ಇದೀಗ ಡಾ. ಮಂಜುನಾಥ್ ಪಾಲುದಾರಿಕೆಯ “ಟ್ರನಿಟ ಕಂಫರ್ಟ್ ಪ್ರೈ.ಲಿ” ಕಂಪನಿಗೆ ಮಾರಾಟವಾಗಿದೆ......

ಹಳೆಯ ಸಂಪ್ರದಾಯಸ್ಥ ಬೆಂಗಳೂರಿಗರ ಒಡನಾಟವಿರುವ ಶೇಷಾದ್ರಿಪುರಂ ಪ್ರದೇಶದಲ್ಲಿವತ್ತು ಬೆಂಗಳೂರು ಮೆಟ್ರೋ ರೈಲುದಾರಿ ಪಾಸಾಗಲಿದೆ ಎಂಬುದು ಖಚಿತಗೊಳ್ಳುತ್ತಿದ್ದಂತೆಯೇ ಇಲ್ಲಿನ ನಗರಾಸ್ತಿ ಬೆಲೆ ದಿಢೀರನೆ, ಚದರಡಿಗೆ 5 ಸಾವಿರದಿಂದ 10 ಸಾವಿರಕ್ಕೇರಿಬಿಟ್ಟಿದೆ....

ಕಂದಾಯ ಇಲಾಖೆಯ ದರಪಟ್ಟಿಯ ಪ್ರಕಾರವೇ ಶೇಷಾದ್ರಿಪುರದಲ್ಲಿ ಜಮೀನಿನ ಬೆಲೆ ಚದರಡಿಗೆ 5 ಸಾವಿರ ರೂ.ಗಳಷ್ಟಿದೆ..... ಈ ಸರ್ಕಾರಿ ದರಪಟ್ಟಿಯ ಪ್ರಕಾರವೇ ಲೆಕ್ಕ ಹಾಕಿದರೂ ಸದರಿ ‘ಸತ್ಯಪ್ರಕಾಶ್ ಹೋಟೆಲ್’ ಸಂಕೀರ್ಣವಿದ್ದ 10,868 ಚದರಡಿ ವಿಸ್ತೀರ್ಣದ ನಿವೇಶನಕ್ಕೆ ಕನಿಷ್ಠ 6 ಕೋಟಿ ರೂಪಾಯಿಯಷ್ಟಾದರೂ ಮೌಲ್ಯ ನಿಗದಿಯಾಗಬೇಕಿತ್ತಲ್ಲವೆ?

ಹಾಗೆಯೇ ಪ್ರಚಲಿತ ಮಾರುಕಟ್ಟೆ ಬೆಲೆಯಲ್ಲಿಯೇ ವ್ಯಾಪಾರ ಕುದುರಿದ್ದಲ್ಲಿ ಸದರಿ ಆಸ್ತಿಯ ಬೆಲೆ ಕನಿಷ್ಠ 10 ಕೋಟಿ ರೂಪಾಯಿಗಳೆಂದಾದರೂ ನಿಷ್ಕರ್ಷೆಯಾಗಿರಬೇಕು.

ಪ್ರಶ್ನಿತ ನಿವೇಶನದಲ್ಲಿ ನಿಂತಿದ್ದ ಹಳೆಯ ಕಟ್ಟಡ ವ್ಯಾಪ್ತಿಯು ಪೂರ್ವದಿಂದ ಪಶ್ಚಿಮಕ್ಕೆ 34.9ಚ.ಮಿ. ಹಾಗೂ ಉತ್ತರದಿಂದ ದಕ್ಷಿಣಕ್ಕೆ 36.79 ಚ.ಮಿ. ಎಂದು ಅಳೆಯಲಾಗಿತ್ತು,

ವ್ಯಾಪಾರಿ ಲೆಕ್ಕಾಚಾರ ಹೀಗಿದ್ದೂ, ಬಹುಶಃ ಮಾಜಿ ಪ್ರಧಾನಿಯ ಅಳಿಯ ಹಾಗು ಹಾಲಿ ಮುಖ್ಯಮಂತ್ರಿಯ ಭಾವ ಡಾ. ಮಂಜುನಾಥರ ‘ಹೃದಯಕ್ಕೆ’ ಅಪ್ಯಾಯಮಾನಿಸಿದ ಜಾಗೆಯೆಂದೋ ಏನೋ ಆಸ್ತಿಯ ಮೂಲ ಮಾಲೀಕರು ಕೇವಲ 3.80 ಕೋಟಿ ರೂಪಾಯಿಗಳಿಗೇ ಸೇಲ್ ಡೀಡು ಮಾಡಿಕೊಟ್ಟು ಕೃತಾರ್ಥರಾಗಿರಬೇಕಲ್ಲವೆ?

ಆಸ್ತಿವ್ಯಾಜ್ಯಕ್ಕೆ ದಿಢೀರ್ ತೆರೆ!!

ಸಿಟಿ ಕೋರ್ಟ್ ಹಾಲ್ ನಂ. 7 ರಲ್ಲಿರುವ ಜಿಲ್ಲಾ ನ್ಯಾಯಾಧೀಶರೆದುರು ಪಾರ್ಟಿಷನ್ ಸೂಟ್ ನಂಬರ್ 7734/96 ಸಂಖ್ಯೆಯ ವ್ಯಾಜ್ಯವನ್ನು ವಾಪಸ್ಸು ಪಡೆಯುತ್ತಿರುವುದಾಗಿ ಇದೇ ಮಾರ್ಚ್ ದಿನಾಂಕ 27, 2006 ರಂದು ಶ್ರೀಮತಿ ಛಾಯಾದೇವಿ, W/o ಕೆ.ಎಂ.ಶ್ರೀನಿವಾಸಮೂರ್ತಿ, ಬೆಂ- 78, ಎಂಬಾಕೆ ಅರ್ಜಿ ಸಲ್ಲಿಸುತ್ತಿರುವಂತೆಯೆ ಶೇಷಾದ್ರಿಪುರಂನ ಉದ್ದೇಶಿತ ಆಸ್ತಿ-ಖರೀದಿ ವಹಿವಾಟಿನಲ್ಲಿ ಡಾ. ಮಂಜುನಾಥರ ‘ಟ್ರನಿಟ’ ಕಂಪನಿಗೆ ದಾರಿ ಸುಸೂತ್ರವಾಗಿಬಿಟ್ಟಿತು...

‘ಸತ್ಯಪ್ರಕಾಶ್ ಹೋಟೆಲ್’ ಸಂಕೀರ್ಣವಿದ್ದ ನಿವೇಶನದ ಮೂಲ ಮಾಲೀಕರಾದ ಲೇಟ್ ಸುಬ್ಬಯ್ಯನವರ ವಿಧವಾಪತ್ನಿ ಶ್ರೀಮತಿ ಅಶ್ವತ್ಥಮ್ಮ ಮತ್ತು ಆಕೆಯ ಮೂವರು ಹೆಣ್ಣುಮಕ್ಕಳಾದ ನಾಗಮಣಿ ಪಪ್ಪುಲಾ, ಗಾಯತ್ರಿ ಪ್ರಭಾಕರ್ ಹಾಗೂ ಸುಮತಿಯವರ ಕುಟುಂಬದ ವಿರುದ್ಧ ಕಳೆದ 10 ವರ್ಷಗಳಿಂದ ಆಸ್ತಿ-ಪಾಲುದಾರಿಕೆ ಕೋರಿ ನ್ಯಾಯಾಲಯದಲ್ಲಿ ಬಡಿದಾಡುತ್ತ ಬಂದಿದ್ದ ಈ ಛಾಯಾದೇವಿ ತಾನು ಲೇ. ಸುಬ್ಬಯ್ಯನವರ “ಸಾಕುಮಗಳು” ಎಂದು ವಾದಿಸಿದ್ದರು.

ಜತೆಗೆ ಸತ್ಯಪ್ರಕಾಶ್ ಹೋಟೆಲ್ಲಿನ ಮಾಲೀಕ ಹಾಗೂ ಕಟ್ಟಡದ ಲೀಸುದಾರರಾದ ಭೋಜರಾವ್‌ರನ್ನೂ ಈಕೆ ಪ್ರತಿವಾದಿ ಎಂದು ಹೆಸರಿಸಿದ್ದರು....

ಕಳೆದ ವರ್ಷ ದಿನಾಂಕ 12.10.2005 ರಂದೇ ಟ್ರನಿಟ ಕಂಫರ್ಟ್ ಕಂಪನಿಯೊಂದಿಗೆ ಅಶ್ವತ್ಥಮ್ಮ ಮತ್ತು ಮೂವರು ಹೆಣ್ಣುಮಕ್ಕಳು ಮಾಡಿಕೊಂಡ ಮಾರಾಟ ಒಪ್ಪಂದವನ್ನು ಆಕ್ಷೇಪಿಸುತ್ತಲೇ ಬಂದ ಛಾಯಾದೇವಿ ಏಕಾಏಕಿ “out of court settlement” ಏರ್ಪಟ್ಟಿದೆ ಎಂದು ಘೋಷಿಸಿ 27.3.06 ರಂದು ಅರ್ಜಿ ವಾಪಸ್ಸು ಪಡೆದಿದ್ದು ಕುತೂಹಲಕಾರಿಯಾಗಿತ್ತು....

ಸಮಸ್ತ ವ್ಯವಹಾರವನ್ನು ಹತ್ತಿರದಿಂದ ಗಮನಿಸಿದ ಹಿತೈಷಿಗಳ ಪ್ರಕಾರ “ಸಾಕುಮಗಳು” ಛಾಯಾದೇವಿಯವರಿಗೂ 80-90 ಲಕ್ಷ ರೂ. ಪರಿಹಾರಧನವನ್ನು ನೀಡಲಾಗಿದೆಯೆಂದೂ, ಹಾಗೆಯೇ ದೀರ್ಘಕಾಲೀನ ಬಾಡಿಗೆದಾರ ‘ಸತ್ಯಪ್ರಕಾಶ್’ ಮಾಲೀಕ ಭೋಜರಾಯರಿಗೆ 1.30 ಕೋಟಿ ರೂ. ನಷ್ಟ ಸಾಂತ್ವನ-ನಿಧಿ ನೀಡಿ ಸೆಟಲ್ ಮಾಡಿಕೊಳ್ಳಲಾಯಿತಂತೆ.... ಹಾಗೆಯೇ ಕಟ್ಟಡದಲ್ಲಿ ಬಾಡಿಗೆಗಿದ್ದ ಬೇಕರಿ, ಬಾರ್ಬರ್‌ಶಾಪು, ಇತ್ಯಾದಿ ಸಣ್ಣಪುಟ್ಟ ವ್ಯಾಪಾರಿಗಳಿಗೂ ‘ಸೂಕ್ತ’ ‘ರಾಜಧನ’ ಸಲ್ಲಿಸಿ ಡಾ. ಮಂಜುನಾಥರ ಟ್ರನಿಟ ಕಂಪನಿಯ ವಹಿವಾಟನ್ನು ಸಮರ್ಪಕವಾಗಿ ಇತ್ಯರ್ಥಗೊಳಿಸಲಾಯಿತಂತೆ....


ಕಾವ್ಯ ಸತ್ಯ, ಸೌಂದರ್ಯ ಶಕ್ತಿಗಳನ್ನು ಕುರಿತ ಹಂಬಲದ ಅಭಿವ್ಯಕ್ತಿ -ಲೀ ಹಂಟ್

ಎಮ್ಮೆಲ್ಲೆಯ ಮರಳು ಮಾಫಿಯಾ
ಜನ ಮರುಳೋ ಜಾತ್ರೆ ಮರುಳೋ?

ಜನ ಮರುಳೋ, ಜಾತ್ರೆ ಮರುಳೋ? ಒಟ್ನಲ್ಲಿ ಮರಳು ಮಾಫಿಯಾ ಜಾತ್ರೆ ಮಾಡುತ್ತಿದೆ. ಈ ಜಾತ್ರಾ ಉತ್ಸವದ ಸಂಚಾಲಕ ಬಾನಗಡಿ ಬಾಲರಾಜ್! ಈತ ಕೊಳ್ಳೇಗಾಲಕ್ಕೆ ಶಾಸಕ. ಹಿಂದುಳಿದ ಕೊಳ್ಳೇಗಾಲ ಅತಿ ಹಿಂದುಳಿದ ತಾಲ್ಲೂಕಾಗುವತ್ತ ಸಾಗಿದೆ.

ಕೃಪೆ: ಬಾಲರಾಜ್ & ಗ್ಯಾಂಗ್‌ನ ಹಗಲು ದರೋಡೆ!

ಕೃಷ್ಣ ಸುದರ್ಶನ ಚಕ್ರತೀರ್ಥ!



ಶಾಸಕ ಬಾಲರಾಜ್

ಕೊಳ್ಳೇಗಾಲ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಮುಳ್ಳೂರು, ಹಳೆ ಹಂಪಾಪುರ, ದಾಸನಪುರ, ಧನಗೆರೆ, ಸರಗೂರು, ಸತ್ತೇಗಾಲಗಳ ಕಾವೇರಿ ನದಿ ತೀರದಿಂದ ಸಾಕಷ್ಟು ಮರಳು ಹತ್ತಾರು ವರ್ಷಗಳಿಂದ ಲೂಟಿಯಾಗುತ್ತಲೇ ಇದೆ. ಗಣಿ ಇಲಾಖೆಯ ಉಪನಿರ್ದೇಶಕ ಚೌಡಯ್ಯ ಎಂಬ ಚಿಲ್ಲರೆ ಬುದ್ಧಿಯ ಅಧಿಕಾರಿ ಶಾಸಕ ಬಾಲರಾಜ್‌ನ ಮರಳು ಮಾಫಿಯಾಕ್ಕೆ ಸಂಪೂರ್ಣ ಬೆಂಬಲ ಘೋಷಿಸಿ, ಸಿಕ್ಕಷ್ಟು ಎಂಜಲನ್ನು ನೆಕ್ಕುತ್ತಲೇ ಇದ್ದಾನೆ.

ಈ ಹಿಂದೆ ಮರಳು ಮಾಫಿಯಾದ ಸುದರ್ಶನ್ ಎನ್ನುವವನು ಎಂ.ಪಿ. ರಾಜಶೇಖರನ್‌ನ ಹೆಸರನ್ನು ಮುಂದಿಟ್ಟುಕೊಂಡು ಅಂದಿನ ಉಪವಿಭಾಗಾಧಿಕಾರಿ ಟಿ. ವೆಂಕಟೇಶನನ್ನು ಸರಿ ಮಾಡಿಕೊಂಡು ಹರಳೆ ಗ್ರಾಮದಲ್ಲಿ ಒಂದು ಜಾಡು ಹೊಡೆದಿದ್ದ. ಕೇವಲ 3-99 ಲಕ್ಷಕ್ಕೆ ಟೆಂಡರ್ ಪಡೆದು, ಲೂಟಿಗೆ 'ಅಧಿಕೃತ' ಸೀಲು ಗಿಟ್ಟಿಸಿಬಿಟ್ಟ. ಹರಳೆಗ್ರಾಮದ ಜಾಡಿನಲ್ಲಿನ ದಂಧೆ ನೋಡಿ ಪ್ರಭಾವಿತನಾದ ಕೃಷ್ಣ ಎಂಬುವವನು ಸರಗೂರಿನಲ್ಲಿ ಮರಳು ತೆಗೆಯಲು ಶುರು ಮಾಡಿದ. ಸುಭಾಷ್ ಭರಣಿ, ಕೆ. ಶಿವರಾಂ ಹೆಸರು ಹೇಳಿಕೊಂಡು ಬಂದ ಈ ಕೃಷ್ಣ 25 ಲಕ್ಷಕ್ಕೆ ಹರಾಜು ಪಡೆದು, ಕೋಟಿಗಟ್ಟಲೇ ಮೌಲ್ಯದ ಮರಳು ನುಂಗಿಬಿಟ್ಟ.

ಹರಳೆ ಜಾಡಿನಲ್ಲಿ ಜನರಿಂದ ಒಂದಿಷ್ಟು ವಿರೋಧ ವ್ಯಕ್ತವಾಗುತ್ತಿದ್ದಂತೆ ಎಚ್ಚರಗೊಂಡ ಸುದರ್ಶನ ಶಾಸಕ ಬಾಲರಾಜ್‌ನ ಮೊರೆ ಹೋದ. ಬಾಲರಾಜನೂ ದಂಧೆಗೆ ಇಳಿದೇ ಬಿಟ್ಟ. ಬಾಲರಾಜ್‌ನ ಹೆಂಡತಿ ವಿಮಲಾರ ಸಂಬಂಧಿಕನೊಬ್ಬ ಕಾಡುಮನೆ ಎಸ್ಟೇಟ್‌ನ ಮಾಲೀಕ ಶಿವಪ್ರಕಾಶನನ್ನು ಈ ದಂಧೆಗೆ ಎಳೆತಂದ. ಬಾಲರಾಜ್‌ನ ಗ್ಯಾಂಗ್‌ಗೆ ಮತ್ತಷ್ಟು ಎನರ್ಜಿ ಬಂತು. ದಂಧೆಗೆ ಸಹಕರಿಸದ ಡಿವೈಎಸ್ಪಿ ಶಿವಮೂರ್ತಿಯವರನ್ನು ಎತ್ತಂಗಡಿ ಮಾಡಲಾಯ್ತು, ಡಿವೈಎಸ್‌ಪಿ ನಾಗರಾಜ್ ಮತ್ತು ಸರ್ಕಲ್ ಇನ್ಸ್‌ಪೆಕ್ಟರ್ ನಾಗಪ್ಪ ಎಂಬ ಸಾಧು ಪ್ರಾಣಿಗಳನ್ನು ಇಲ್ಲಿಗೆ ತಂದುಕೊಂಡರು. ತಹಶೀಲ್ದಾರ್ ಪಿ. ಸುಬ್ಬಾರಿಗೆ ವಾರ್ನಿಂಗ್ ಕೊಟ್ಟು ತೆಪ್ಪಗಾಗಿಸಿದರು.

ಕರಿಕಲ್ಲು ಕ್ವಾರಿಗಳ ನಡುವಿನ ಜಗಳದಲ್ಲಿ ತಲೆತೂರಿಸಿದ ಶಾಸಕ ಬಾಲರಾಜ್ ಒಂದೆರಡು ಕ್ವಾರಿಗಳನ್ನೂ ತನ್ನದಾಗಿಸಿಕೊಂಡ. ಸಂಪಂಗಿ ರಾಮಯ್ಯನೆಂಬ ಕಲ್ಲುಗಳ್ಳನನ್ನು ಮಣಿಸಿ, ತನ್ನ ಕಡೆ ಕರೆದುಕೊಂಡ.

ಕಣ್ಣಿಗೆ ಮಣ್ಣು

ಹಿಂದೆ ಜಿಲ್ಲಾಧಿಕಾರಿ ಹರ್ಷಗುಪ್ತ ಇದ್ದಾಗ ಮರಳು ಮಾಫಿಯಾ ಮುಚ್ಚಿಕೊಂಡು ಕುಳಿತಿತ್ತು, ಅವರ ವರ್ಗಾ ಆದಾಗಿನಿಂದ ಕರಿಕಲ್ಲು, ಮರಳು ಮಾಫಿಯಾಗಳೆಲ್ಲ ಹಬ್ಬದೂಟ ಶುರು ಇಟ್ಟವು.

ನೆಪಮಾತ್ರಕ್ಕೆ ಒಂದು ಜಾಡಿಗೆ ಪರವಾನಗಿ ಪಡೆದ ಕೃಷ್ಣ ಅಕ್ರಮವಾಗಿ ಹಲವಾರು ಜಾಡುಗಳಿಗೆ ಕೈ ಹಾಕಿ ಸರ್ಕಾರದ ಕಣ್ಣಿಗೆ ಮಣ್ಣು ತೂರಿದ. ತಾ.ಪಂ. ಸದಸ್ಯ ಬಸವಣ್ಣನೂ ಮರಳಲ್ಲಿ ಮುಳುಗೆದ್ದ. ಜೆಡಿಎಸ್ ಬ್ಲಾಕ್ ಅಧ್ಯಕ್ಷ ಅಜೀಮ್ ಅಹಮ್ಮದ್, ಸಿದ್ದಯ್ಯನಪುರದ ರಮೇಶ್‌ಗಳೆಲ್ಲ ಶಾಸಕ ಬಾಲರಾಜ್‌ನ ಗ್ಯಾಂಗ್ ಸೇರಿ ನಿತ್ಯ ಲೂಟಿಗಿಳಿದರೂ ಈ ಗ್ಯಾಂಗ್ ಈಗ ಮುಳ್ಳೂರು ಬಳಿ ಇರುವ ಮರಳಿಗೆ ಬಾಯಿ ಹಾಕುತ್ತಿದೆ.

ನೆಪಮಾತ್ರಕ್ಕೆ ಒಂದು ಮರಳು ಜಾಡಿನ ಹರಾಜು ಗಿಟ್ಟಿಸುತ್ತಾರೆ. ನಂತರ ಅಕ್ರಮದಂಧೆ ಶುರು ಮಾಡುತ್ತಾರೆ. ನಿಯಮದ ಪ್ರಕಾರ ಗಣಿ ಇಲಾಖೆಯವರು ಟ್ರಿಪ್‌ಶೀಟ್ ನೀಡಿದ ಬಳಿಕ ಮರಳು ತೆಗೆಯಬೇಕು. ಆದರೆ ಇಲ್ಲಿ ಮರಳನ್ನು ತೆಗೆದು ಖಾಲಿಯಾದ ಬಳಿಕ ಟ್ರಿಪ್‌ಶೀಟ್ ವಿತರಿಸುತ್ತಾರೆ! ಪ್ರಶ್ನಿಸಿದರೆ ಗಣಿ ಅಧಿಕಾರಿ ಚೌಡಯ್ಯನಂತೂ ನಾಚಿಕೆ ಬಿಟ್ಟು ಹೇಳುತ್ತಾನೆ: "ನಿಮ್ಮ ಹತ್ತಿರ ದುಡ್ಡು ಇದ್ದರೆ ನಿಮಗೂ ಪರ್ಮಿಷನ್ ಕೊಡ್ತೀವಿ ಬನ್ರಿ...."

ದಿನೇ ದಿನೇ ಅಂತರ್ಜಲ ಕುಸಿತವಾಗುತ್ತಿದೆ. ಬರಲಿರುವ ದಿನಗಳಲ್ಲಿ ಜನರಿಗೆ ಕುಡಿಯುವ ನೀರು ಸಿಗುವುದು ಕಷ್ಟವಿದೆ. ಮನೆಹಾಳ ಮರಳುಗಳ್ಳ ಶಾಸಕ ಬಾಲರಾಜನಿಗೆ ಬುದ್ಧಿ ಕಲಿಸಬೇಕಲ್ಲವೇ?

-ವರದಿಗಾರ

ಜಯದೇವ ಆಸ್ಪತ್ರೆ



⇨⇨⇨ ಹಿಸುಕುವಂತಹ ವಾತಾವರಣ ನಿರ್ಮಿಸಿ 'ಜಯದೇವ' ಆಸ್ಪತ್ರೆಯನ್ನು ಯಾತಾನಾಮಯ ಪರಿಸ್ಥಿತಿಗೆ ತಳ್ಳಿದ್ದ 'ರಾಜಪರಿವಾರ' ಇವತ್ತು ಡಾ. ಮಂಜುನಾಥರ ಅಧಿಪತ್ಯ ಶುರುವಾದ ಮೇಲೆ ಯಥೇಚ್ಛ ನಿಧಿ-ನಿಕ್ಷೇಪದ ಸುವರ್ಣಯುಗವನ್ನೇ ಉದ್ಘಾಟಿಸಿಬಿಟ್ಟಿದೆ.

ಇತ್ತೀಚೆಗೆ ಆಸ್ಪತ್ರೆಯ ಪಕ್ಕದಲ್ಲಿಯೇ ಬಿಡಿಎ ವತಿಯಿಂದ ನಿರ್ಮಿಸಲಾದ 'ಜಯದೇವ ಫ್ಲೈಓವರ್'ರನ್ನು ಸಿ.ಎಂ.ಸಾಹೇಬರೇ ಉದ್ಘಾಟಿಸಿದಾಗ ಅವರ ಬ್ರದರ್-ಇನ್-ಲಾ ಡಾ. ಮಂಜುನಾಥರ ಜಯದೇವರ ಆಸ್ಪತ್ರೆಗೆ ಬಿಡಿಎನಿಂದ 1 ಕೋಟಿ ರೂ. ದೇಣಿಗೆ ಚೆಕ್ಕು ಕೊಡಿಸಿದ್ದು ನೆನಪಿದೆಯೆ....

ಇದೇ ರೀತಿ ಜಯದೇವ ಬಡರೋಗಿಗಳ ನಿಧಿಗೆ ಕೆಎಸ್‌ಆರ್‌ಟಿಸಿಯಿಂದ, ಮೈಸೂರು ಮಿನರಲ್ಸ್‌ನಿಂದ, ಹಟ್ಟಿ ಚಿನ್ನದ ಗಣಿಯಿಂದ, ಕೆನರಾ ಬ್ಯಾಂಕಿನಿಂದ.... ಹೀಗೆ ಹಲವು ಹತ್ತು ಸರ್ಕಾರಿ-ಅರೆಸರ್ಕಾರಿ ಸಂಸ್ಥೆಗಳಿಂದ "ದಾನ" ರೂಪದಲ್ಲಿ ಹಣದ ಹೊಳೆಯೆ ಹರಿದು ಬರುತ್ತಿದೆ... ಎಷ್ಟಾದರೂ ರಾಜಪರಿವಾರದ ಅಳಿಯನ ಆಸ್ಥಾನದಲ್ಲಿ ಸುಖ-ಸಮೃದ್ಧಿ-ಐಶ್ವರ್ಯಗಳಿಗೆ ಕೊರತೆಯಾಗದಂತೆ ನೋಡಿಕೊಳ್ಳಬೇಕಾದ್ದು 'ಕುಟುಂಬದ'ದ ನೈತಿಕ ಹೊಣೆಯಲ್ಲವೆ?

"ಜಯದೇವ" ಎಂಬ ಸರ್ಕಾರಿ ಸಂಸ್ಥೆಯ ರಾಜವೈಭವದ ಜತೆಗೆಯೇ ಡಾ. ಮಂಜುನಾಥರಿಗೆ ಟ್ರಿನಿಟಿ, ಮಲ್ಲಿಗೆ, ವೊಕಾರ್ಟ್‌ಗಳಂತಹ ಖಾಸಗಿ ಸಾಮಂತ ರಾಜ್ಯಗಳಲ್ಲೂ ಯಥೇಚ್ಛ ಬಿಜಿನೆಸ್ಸು....

ಇತ್ತೀಚೆಗೆ 'ಲಂಕೇಶ್' ಜತೆಗೆ ಮಾತನಾಡಿದ್ದ ಅವರ ಯಂಗೆಸ್ಟ್ ಬ್ರದರ್-ಇನ್-ಲಾ "ಮುನ್ನಾಭಾಯಿ" ಡಾ. ರಮೇಶ್ "ನಮ್ಮ ಭಾವ ಡಾ. ಮಂಜುನಾಥ್ ವರ್ಷಕ್ಕೆ 15 ಲಕ್ಷ ಇನ್-ಕಂಟ್ಯಾಕ್ಸ್ ಕಟ್ತಾರೆ ಸಾರ್" ಎಂದು ಹೆಮ್ಮೆ ಪಟ್ಟಿದ್ದು ಸುಳ್ಳಲ್ಲ ತಾನೆ! ■

ಗ್ರಹಣಪೀಡಿತ ಸತ್ಯಪ್ರಕಾಶ್ ಲಾಜ್


ಶುಚಿತ್ವ, ಶಿಷ್ಟಾಚಾರಗಳಿಂದ ದೂರವೇ ಉಳಿದಿದ್ದ ಸತ್ಯಪ್ರಕಾಶ್ ಲಾಜ್ ಅಂದಿನಿಂದಲೂ ಗ್ರಹಣ ಪೀಡಿತವೇ!

ಇವತ್ತು ಅಲ್ಲಿ ಲಾಜ್ ಇಲ್ಲ... 1987-88 ರಲ್ಲಿ ರಾಜ್ಯಾದ್ಯಂತ ಕೋಲಾಹಲ ಎಬ್ಬಿಸಿದ್ದ ವಕೀಲ ರಶೀದ್ ಕೊಲೆ ಪ್ರಕರಣ ನೆನಪುಂಟಲ್ಲವೆ? ವಕೀಲ ರಶೀದ್ ಈ ಸತ್ಯಪ್ರಕಾಶ್ ಲಾಜ್‌ನಲ್ಲೇ ಕೊಲೆಯಾಗಿದ್ದರು ಎಂಬುದು ಅಂದಿನ ಚರ್ಚಾವಸ್ತುವಾಗಿತ್ತು,


ಇದೀಗ ಆ ಸತ್ಯಪ್ರಕಾಶ್ ಲಾಜ್ ಇದ್ದ ಭೂಮಿಯಲ್ಲೇ ದೇವೇಗೌಡರ ಅಳಿಯ ಡಾ. ಸಿ.ಎನ್. ಮಂಜುನಾಥರ 'ಭವ್ಯ' ಟ್ರಿನಿಟಿ ಹಾಸ್ಪಿಟಲ್ ತಲೆ ಎತ್ತಲಿದೆ.

ಮಾಡದವಂತರಲ್ಲಿ ತಲೆತಗ್ಗಿಸುವಂತಿದ್ದ ಸತ್ಯಪ್ರಕಾಶ್ ಲಾಜ್‌ನ ಜಾಗದಲ್ಲೇ ದೂಡಗೇಡಿಗಳ ಹಾಸ್ಪಿಟಲ್ ತಲೆ ಎತ್ತುತ್ತಿರುವುದು ಗೌಡರ ತಲೆತಲಾಂತರದ ರಾಜಕೀಯ ಕುರುಹು ಆಗಬಲ್ಲದಷ್ಟೇ!

ನಾನು ಕಾಂಗ್ರೆಸ್ ಸವಾಸ ಮಾಡಿ ಒಂದೊರ್ಸಾಯ್ತು



ನಮ್ಮ ಜನಪ್ರಿಯ ಮುಖ್ಯಮಂತ್ರಿಗಳಾದ ಕುಮಾರಸ್ವಾಮಿಗಳು ಆಡಳಿತ ನಡೆಸುವುದೆಂದರೆ ಹಳ್ಳಿಗಳಿಗೆ ಹೋಗಿ ಮಲಗುವುದು ಎಂದು ಭಾವಿಸಿದ್ದಾರಂತಲ್ಲಾ, ಇದರಿಂದ ಹಳ್ಳಿಗಳ ಮುಗ್ಧ ಜನರು "ಮುಖ್ಯಮಂತ್ರಿಯೇ ನಮ್ಮ ಮನೆಗೆ ಬಂದು ಮಲಗಿದ್ದರು. ನೋಡಿ ಇದೇ ಜಾಗದಲ್ಲಿ ಕುಳಿತು ತಿಂಡಿ ತಿಂದರು. ಅದೇ ಜಾಗದಲ್ಲಿ ಕಕ್ಕಸ್ಸು ಮಾಡಿದರು. ನೋಡಿ ಇದೇ ಜಾಗದಲ್ಲಿ ಒಂದು ಲೀಟರಿನಷ್ಟು ಹುಚ್ಚೆ ಹುಯ್ದರು. ಆ ನಂತರ ಈ ಜಾಗದಲ್ಲವರು ಅಂಗಾತ ಮಲಗಿ ಗೊರಕೆ ಬಾರಿಸಿದರು" ಎಂದು ಹೇಳಿಕೊಂಡು ತಿರುಗುವುದು ಬಿಟ್ಟರೆ ಇನ್ನಾವ ಪಾಯ್ದೆಯೂ ಈ ಹಳ್ಳಿ ವಾಸ್ತವ್ಯದಿಂದ ಸಂಭವಿಸಲಾರದೆಂದು ಹಳ್ಳಿಗರೇ ಹೇಳುತ್ತಿದ್ದಾರಂತಲ್ಲಾ, ಜನರ ಬದುಕನ್ನು ಹಸನು ಮಾಡಲೆಂದೇ ಜಿಲ್ಲಾ ಪಂಚಾಯ್ತಿ, ಮಂಡಲ ಪಂಚಾಯ್ತಿ ಎಂಬ ಸೆಮಿಸರ್ಕಾರಗಳನ್ನು ತಂದು ಸುಧಾರಣೆಗೆ ಕೈ ಹಾಕಿದ್ದ ನಜೀರ್ ಸಾಹೇಬರ



ಪಂಚಾಯ್ತಿ ವ್ಯವಸ್ಥೆಯನ್ನು ಹಾಳು ಮಾಡಿ, ಅದೇ ಪಂಚಾಯ್ತಿ ಕಟ್ಟೆಗೆ ಹೋಗಿ ಮಲಗಿ ಬರುವವರು, ನಿಜಕ್ಕೂ ಹಳೆಯ ಮಂಡಲ ಪ್ರಧಾನರ ಮಗನೇ ಇರಬೇಕು. ಏಕೆಂದರೆ, ಪ್ರಧಾನಿ ಸ್ಥಾನವನ್ನು ಮಂಡಲ ಪ್ರಧಾನನ ಸ್ಥಾನಕ್ಕಿಳಿಸಿದ ದೇವೇಗೌಡರು ಕೊಡುವ ಸಲಹೆಗಳೇ ಇಂತ ಶ್ರೇಷ್ಠ ಸಲಹೆಗಳೆಂದು ಕಾಂಗ್ರೆಸ ಕನಿಷ್ಠ ದರ್ಜೆ ಜನರೇ ಆಡಿಕೊಳ್ಳುತ್ತಿದ್ದಾರಂತಲ್ಲಾ, ಥೂತ್ತೇರಿ!

* * * * * *

ಕುಮಾರಸ್ವಾಮಿಗಳ ಚಿಕ್ಕಕಾನ್ಯ ವಸತಿ ವ್ಯವಸ್ಥೆ ನೋಡಿಕೊಳ್ಳುವ ಉಸ್ತುವಾರಿ ಹೊತ್ತಿದ್ದಂತಹ ಜಿ.ಟಿ. ದೇವೇಗೌಡ, ಒಳಗೊಳಗೇ ಕೆಂಡಕಾರಿಕೊಂಡರೂ "ನಾನು ಏನೇ ಮಾಡಿದರು. ಅದು ಸಮಗ್ರ ಮೈಸೂರು ಜಿಲ್ಲೆ ಭವಿಷ್ಯವನ್ನೇ ಕುರಿತು ಮಾಡುತ್ತೇನೆ. ನನಗೆ ಮೈಸೂರಿನ ಭವಿಷ್ಯ ಮುಖ್ಯ. ಆದ್ದರಿಂದ ಈ ಜಿಲ್ಲೆಗೆ ನಮ್ಮವರೇ ಆದ ಮಂತ್ರಿಯ ಅಗತ್ಯವಿದೆ. ಹಾಗೇ ನಮ್ಮವರೇ ಜಿಲ್ಲಾ ಉಸ್ತುವಾರಿ ಮಂತ್ರಿಯಾದರೆ ಇನ್ನೂ ಒಳ್ಳೆಯದು" ಎಂದು ಕುಮಾರಸ್ವಾಮಿಗೆ ಸೂಚ್ಯವಾಗಿ ತಿಳಿಸಿದರಂತಲ್ಲಾ, ಜಿ.ಟಿ. ಇಂಗಿತವನ್ನರಿತ ಕುಮಾರಸ್ವಾಮಿ "ಈ ಮಾಸಾಂತ್ಯದಲ್ಲಿ ದೇವೇಗೌಡರು ಸಚಿವ ಸಂಪುಟ ವಿಸ್ತರಿಸಬಹುದು. ಆಗ ನಿಮ್ಮ ಭಾವನೆ ಏನಿದೆ ಅದನ್ನ ನಾನು ತಂದೆಯವರ ಗಮನಕ್ಕೆ ತರಲು ಇಚ್ಛೆಪಡ್ತಿನಿ" ಎಂದು ಸಾರ್ವಜನಿಕವಾಗಿ ಅಭಿವ್ಯಕ್ತಿಸುವಂತೆ ಮಾತನಾಡಿ ಜಿ.ಟಿ. ಮುಖವನ್ನು ನೋಡಿದರಂತಲ್ಲಾ. ಆಗ ಜಿ.ಟಿ. "ನೋಡು ಕುಮಾರಣ್ಣ ಆ ಡಿ.ಟಿ. ಜಯಕುಮಾರನಿಗೆ ಹೃದ್ರೋಗ. ಯಾವಾಗ ಏನೊ ಅನ್ನಂಗವ್ನೆ. ಅವನ ಕೈಲಿ ಈ ಜಿಲ್ಲಾ ಉಸ್ತುವಾರಿ ಆಗಲ್ಲ, ಆದ್ರಿಂದ ದಸರಾ ಬರೋದ್ರೊಳಗೆ ಏನಾದ್ರು ಮಾಡಿ" ಎಂದು ಕಡು ನಿಷ್ಠೆಯಿಂದ ಪರಿಚಾರಕ ವೃತ್ತಿ ಮಾಡಿ ಚಾತಕ ಪಕ್ಷಿಯಂತೆ ಕಾಯುತ್ತಿದ್ದಾರಂತಲ್ಲಾ, ಥೂತ್ತೇರಿ!!!

* * * * * *

ಸಾಯಿಬಾಬನ ಭೂದಿಮಂತ್ರ, ತಮಿಳುನಾಡಿನ ಯಜ್ಞಯಾಗ, ನಂಜನಗೂಡು ನಂಜುಂಡೇಶ್ವರನ ಪ್ರಸಾದ, ಶೃಂಗೇರಿ ಶಾರದಾಂಬೆಯ ಆಶೀರ್ವಾದಗಳಿಂದ ಬದುಕುಳಿದ ಕುಮಾರಣ್ಣ, ಶೃಂಗೇರಿ ಪುಕ್ಕಲು ಪುರೋಹಿತರಿಗೆ ಖುಷಿಯಾಗಲೆಂದು "ಈ ಪ್ರಾಂತ್ಯದಲ್ಲಿ ನಕ್ಸಲ್ ಚಟುವಟಿಕೆಗೆ ಕಾರಣರಾದವರ ಮೇಲೆ ಉಗ್ರಕ್ರಮ ಕೈಗೊಳ್ಳುತ್ತೇನೆ. ಅದ್ಯಾರು ತೋರುಸುರಿ" ಎಂದು ಸುತ್ತಮುತ್ತ ನೋಡಿದರಂತಲ್ಲಾ, ಆಗ ಜನಿವಾರದ ಪತ್ರಕರ್ತರು, ಜನಿವಾರ ಕಿತ್ತೆಸೆದು ಉಡಿದಾರದಲ್ಲೇ ಬದುಕುತ್ತಿರುವ ಪತ್ರಕರ್ತರೆಲ್ಲಾ ಸೇರಿ ತಮಗಾಗದ ಜಾತಿ ಮತ್ತು ಜನಗಳ ಮೇಲೆ ದೂರು ಹೇಳಿದವಂತಲ್ಲಾ, ಇದರಿಂದ ಕುಪಿತಗೊಂಡ ಕುಮಾರಣ್ಣ "ನೋಡಿ ನೀವೇನೂ ಹೆದರ ಬೇಡಿ. ನಾನು ನಕ್ಸಲರತ್ರ ಮಾತನಾಡಿ ಅವ್ರ್ಯಾರೂ ನಿಮ್ಮ ತಂಟೆಗೆ ಬರದಂತೆ ಬುದ್ಧಿ ಹೇಳ್ತಿನಿ" ಎಂದಾಗ ಚೆಡ್ಡಿ ಪತ್ರಕರ್ತರು ಮುಖಮುಖ ನೋಡಿಕೊಂಡವಂತಲ್ಲಾ, ಇದನ್ನು ಗ್ರಹಿಸಿದ ಕುಮಾರಣ್ಣ "ನೋಡಿ ಇದು ಸಾಮಾಜಿಕ ಕಾರ್ಯಕ್ರಮ ಮತ್ತು ಆಧುನಿಕ ಸಶಸ್ತ್ರ ಆಯುಧಗಳಿಂದ ಬಗೆಹರಿಯುವ ವಿಷಯವಾದ್ದರಿಂದ ನಾನು ಪೊಲೀಸರಿಗೆ ಮತ್ತು ಅಧಿಕಾರಿಗಳಿಗೆ ಹೇಳ್ತೀನಿ. ಆದರೆ ಈ ಹಾಳು ಅಧಿಕಾರಿಗಳು ಸರ್ಕಾರ ಹೋಗುತ್ತೋ, ಇರುತ್ತೊ ಅಂತ ಕಾಯ್ತಾ ಕುಂತುಗೊಂಡು ಕೆಲಸನೇ ಆಗ್ತಯಿಲ್ಲ" ಎಂದು ಬಂಗ ಹೇಳಿಕೊಂಡಾಗ ಶೃಂಗೇರಿ 'ಬ್ರಾ'ಗಳು ಬಾಯಿಮುಚ್ಚಿಕೊಂಡು ನಕ್ಕವಂತಲ್ಲಾ, ಥೂತ್ತೇರಿ!!!

* * * * * *

ಎರಡನೇ ಮದುವೆಯಾದ ಮಧ್ಯ ವಯಸ್ಕನ ಉತ್ಸಾಹದಲ್ಲಿದ್ದ ಸಿದ್ಧರಾಮಣ್ಣನನ್ನ ಮಾತನಾಡಿಸಬೇಕೆನಿಸಿತಲ್ಲಾ, ಕಾಂಗ್ರೆಸ್ ಸಮಾವೇಶದ ಪೆಂಡಾಲಿನ ಮೂಲೆಯಲ್ಲಿ ನಿಂತಿದ್ದ ಸಿದ್ಧರಾಮಣ್ಣನನ್ನು ಅಲ್ಲೇ ಹತ್ತಿರದಲ್ಲಿದ್ದ ಕಾರಿಗತ್ತಿಸಿಕೊಂಡು ನಾಲ್ಕು ಪ್ರಶ್ನೆ ಕೇಳಿದರೆ ಹೇಗೆ ಅನ್ನಿಸಿತು.

"ಹಲೋ ಸಿದ್ಧರಾಮಣ್ಣ ನಾನು ಯಾಹು."

"ಗೊತ್ತು, ಏನ್ಸಮಾಚಾರ?"

"ಒಂದಿಷ್ಟು ಮಾತಾಡಬೇಕಿತ್ತು."

"ಸಂಜೆ ಸಿಗಣ ಬಿಡಿ."

"ಇಲ್ಲ, ಡೆಡ್ ಲೈನ್‌ನಲ್ಲಿದ್ದಿನಿ. ಪತ್ರಿಕೆ ಸಂಜೆ ಪ್ರಿಂಟಿಗೋಗಬೇಕು."

"ಕೇಳಿ ಅದೇನು?"

"ಈ ಕಾಂಗ್ರೆಸಿನೋರ ಸವಾಸ ಹ್ಯಂಗನ್ನುಸ್ತಾಯಿದೆ?"

"ಅಂತ ಹೊಸ ಅನುಭವ ಏನಿಲ್ಲ, ಅವರ ಸಹವಾಸ ಮಾಡಕ್ಕಿಡದು ಆಗ್ಲೆ ಒಂದೊರ್ಸಾಯ್ತು."

"ನನಿಗೇನೊ ಸರಿಯಾದ ಟಗರ ತಂದು ಸೋನಿಯಮ್ಮನಿಗೆ ಬಲಿಕೊಟ್ಟು ಕಾಂಗ್ರೆಸಿನೋರು ರಾಜ್ಯ ಹಿಡಿಯಂಗೆ ಕಾಣ್ತರೆ."

"ಹಿಡಿಲಿ ಬಿಡಿ. ಆ ದ್ಯಾವೇಗೌಡನಿಗಿಂತ ಉತ್ತಮ ಇಲ್ಲಿರೋರು."

"ನಿವಂಗನ್ನಕಂಡಿದ್ದಿರಷ್ಟೇ. ಆ ಕುಮಾರಸ್ವಾಮಿಗಿಂತ ಯಾತ್ರಲ್ಲಿ ಕಡಮೆ ಅವ್ನೆ ಶಿವಕಮಾರ?"

"ಶಿವಕುಮಾರ ದೇವೇಗೌಡರ ಮಕ್ಕಳಷ್ಟು ನಯವಂಚಕ ಅಲ್ಲ, ಏನಿದ್ರು ಎದುರಾ ಬದುರಾ ಮಾತಾಡ್ತನೆ."

"ಖಾಲಿ ಜಮೀನು ವಿಷಯದಲ್ಲಿ ಅವ್ನು ದೇವೇಗೌಡರ ಮಕ್ಕಳಂಗಂತೆ?"

"ಅದೇನೊ ನನಿಗೊತ್ತಿಲ್ಲ."

"ಸಿಂಧ್ಯಾ ನಿಮಗಾದ ಅನ್ಯಾಯದ ಸಮಯದಲ್ಲಿ ಸಪೋರ್ಟು ಮಾಡಬೇಕಾಗಿತ್ತು ಅಂದವ್ರಲ್ಲಾ?

"ಅಂದವ್ನೆ. ನಾನು ನೋಡಿದೆ. ದೇವೇಗೌಡ್ರು ಆಗ್ಲೆ ಕರದು ಮಂತ್ರಿ ಮಾಡಿದ್ರೆ ಸುಮ್ನಾಯ್ತಿದ್ದ ಅವ್ನು."

"ಪ್ರಕಾಶ್ ನಿಮ್ಮ ಜೊತೆ ಬಂದಿದ್ರೆ ಬಹುಶಃ ನೀವು ಕಾಂಗ್ರೆಸ್ಸಿಗೋಯ್ತಿರಲಿಲ್ಲ ಅಂತ ಕಾಣ್ತದೆ."

"ಪ್ರಕಾಶ್ ಯಾವತ್ತೂ ಅಧಿಕಾರ ಬುಟ್ಟು ಬಂದೋನಲ್ಲ, ಮಾನ ಅವಮಾನಗಳು ಕಡಮೆ ಆತನಿಗೆ. ಅಂತವ್ನು ನನ್ನ ಜೊತೆ ಬರತಿದ್ನ ಅಂತ ಯಂಗೇಳ್ತಿರಿ ನೀವು?"

"ಸುಮ್ನೆ ಅಂಗಂದೆ."

"ಅದ್ಕೆ ನಿಮಗೆ ತಲೆಯಿಲ್ಲ ಅನ್ನದು."

"ಥೂತ್ತೇರಿ!!!"

-ಯಾಹೂ

ನನ್ನ ಸೋಲಿಸೋರು ಯಾರು?

"ಇದೊಂದು ಅಪರೂಪದ ಸಂದರ್ಶನ. ಸೆಪ್ಟೆಂಬರ್ 2 ರ ಸಂಜೆ ಸಿದ್ಧರಾಮಯ್ಯನವರಿಗೆ ಫೋನ್ ಮಾಡಿ 'ಮಾತಾಡುತ್ತೀರಾ, ಸಂದರ್ಶನಕ್ಕೆ ಬಿಡುವಿದೆಯಾ?' ಎಂದಾಗ 'ಆಗಲಿ ಬನ್ನಿ' ಎಂದರು.

ವಿಜಯನಗರದಲ್ಲಿರುವ ಅವರ ಬೆಂಡದ ಮನೆಗೆ ರಾತ್ರಿ 8 ಗಂಟೆಗೆ ಹೋದಾಗ ಇಡೀ ರಸ್ತೆ ಕಟೌಟ್, ಬ್ಯಾನರ್, ಕಾರ್‌ಗಳು, ಪೊಲೀಸರು ಹಾಗೂ ಬೆಂಬಲಿಗರಿಂದ ತುಂಬಿ ಹೋಗಿತ್ತು. ಆದರೆ ಸಿದ್ಧರಾಮಯ್ಯಗೆ ಜ್ವರ... ಮಾರನೇ ದಿನ ಸೆಪ್ಟೆಂಬರ್ 3ರಂದು ಸೋನಿಯಾ ಗಾಂಧಿ ಜೊತೆ 3 ಲಕ್ಷ ಜನರೆದಿರು ಭಾಷಣ ಮಾಡಬೇಕಿದ್ದ ಸಿದ್ಧರಾಮಯ್ಯ ಜ್ವರದಲ್ಲೂ ಕೂಲಾಗೇ ಇದ್ದರು.

ಕರ್ನಾಟಕದ ರಾಜಕೀಯದಲ್ಲಿ ಬಹಳ ಮಹತ್ವದ ಈ ಘಟ್ಟದಲ್ಲಿ ಸಿದ್ಧರಾಮಯ್ಯ ಏನು ಯೋಚಿಸುತ್ತಿದ್ದಾರೆ, ಅವರ ಮುಂದಿನ ಹೆಜ್ಜೆ ಏನು, ಮುಖ್ಯವಾಗಿ ಅವರೆಂತಾ ವ್ಯಕ್ತಿ ಎಂಬುದನ್ನು ಅನಾವರಣಗೊಳಿಸುವ ಮಾತುಕತೆಯನ್ನು ಇಲ್ಲಿ ನೀಡಿದ್ದೇವೆ.

ಸಂದರ್ಶನ

ಲಂಕೇಶ್: ಕರ್ನಾಟಕ ರಾಜಕೀಯದ ಮೇಲೆ ಕಾಂಗ್ರೆಸ್-ಎಐಪಿಜೆಡಿ ವಿಲೀನ ಯಾವ ಪರಿಣಾಮ ಬೀರುತ್ತೆ? ವಿಲೀನದ ಮಹತ್ವ ಎಷ್ಟು?

ಸಿದ್ಧರಾಮಯ್ಯ: ನೋಡಿ.... ನಾವೆಲ್ಲಾ ಒಂದು ಮೂರನೇ ಪರ್ಯಾಯ ಶಕ್ತಿ ಕಟ್ಟಬೇಕೂಂತ 7-8 ತಿಂಗಳು ಚರ್ಚಿಸಿ ಎಐಪಿಜೆಡಿ ಮಾಡಿದೆವು. ಪಾರ್ಟಿ ಕಟ್ಟೊ ಮೊದಲು ಅಹಿಂದ ಮೂಲಕ ಹಿಂದುಳಿದವರಲ್ಲಿ, ದಲಿತರಲ್ಲಿ ಅಲ್ಪಸಂಖ್ಯಾತರಲ್ಲಿ ಜಾಗೃತಿ ಮೂಡಿಸಿದ್ದೆವು. ಒಂದು ರೀತೀಲಿ ಅಹಿಂದ ಎಐಪಿಜೆಡಿಗೆ ಸಾಮಾಜಿಕ ತಳಹದಿ ಒದಗಿಸಿತ್ತು. ಆದರೆ ಕರ್ನಾಟಕದಲ್ಲಿ ಪ್ರಾದೇಶಿಕ ಪಕ್ಷ ಕಟ್ಟಿ ಅಧಿಕಾರ ಪಡೆಯೋದು ಕಷ್ಟ. ನಾಳೆ ಸಮ್ಮಿಶ್ರ ಸರ್ಕಾರ ಬಂದರೂ ಆಡಳಿತ, ಸಮನ್ವಯ ಕಷ್ಟ. ಒಂದೇ ಪಾರ್ಟಿ ಸರ್ಕಾರ ಬಂದರೆ ಉತ್ತಮ ಅನ್ನಿಸಿತು.



ಸಂಪಾದಕರೊಂದಿಗೆ ಸಿದ್ಧರಾಮಯ್ಯ

ಲಂ: ನಿಮಗೆ ವೈಯಕ್ತಿಕವಾಗಿ ಈ ವಿಲೀನ ಎಷ್ಟು ಮಹತ್ವದ್ದು?

❑ನನಗೆ ಪರ್ಸನಲ್ಲಾಗಿ ಇದು ಅನಿವಾರ್ಯವಾಗಿತ್ತು, ರಾಜಕೀಯವಾಗಿ ಅಗತ್ಯವಾಗಿತ್ತು, ಅಂದರೆ ಅಧಿಕಾರಕ್ಕಾಗಿ ಅಲ್ಲ, ಕರ್ನಾಟಕದಲ್ಲಿ ಜಾತಿ ರಾಜಕೀಯ, ಕೋಮುವಾದ ಸೋಲಿಸಲು....

ಲಂ: ಕಾಂಗ್ರೆಸ್ ಎಷ್ಟು ಸೆಕ್ಯುಲರ್?

❑ಕಾಂಗ್ರೆಸ್ ಕೋಮುವಾದದೊಂದಿಗೆ ರಾಜಿ ಮಾಡಿಕೊಂಡಿಲ್ಲ, ಬಾಬರಿ ಮಸೀದಿ ಕೆಡವಿದಾಗ ಅದನ್ನು ಬೇರೆ ರೀತಿಯಾಗಿ ಹ್ಯಾಂಡಲ್ ಮಾಡಬಹುದಿತ್ತು ಎಂಬುದನ್ನು ಹೊರತುಪಡಿಸಿ....

ಗೌರಿ ಲಂಕೇಶ್

ಲಂ: ಆದರೆ ಕಾಂಗ್ರೆಸ್ ಈಗ 'ವಂದೆ ಮಾತರಂ' ಪರವಾಗಿದೆಯಲ್ಲ!

❑(ಯೋಚಿಸಿ) ಆ ತರ ಏನಿಲ್ಲ.

ಲಂ: ಸೋನಿಯಾ ಗಾಂಧಿ ಯಾವ ತರದ ಮಹಿಳೆ?

❑(ನಗುತ್ತಾ ಲವಲವಿಕೆಯಿಂದ) ನಾನವರನ್ನು ಮೂರು ಸಾರಿ ಭೇಟಿಯಾದೆ. **She is very simple,** ನಮ್ಮ ಭೇಟಿಯೂ ಭಾಳಾ **co-ordial** ಆಗಿತ್ತು, ಅಷ್ಟು ದೊಡ್ಡ ಪಕ್ಷದ ನಾಯಕಿ ಅಂತ ಗರ್ವ, ಅಂತದ್ದೆಲ್ಲ ಅವರಲ್ಲಿಲ್ಲ, ಒಂದು ಸಾರಿ **one to one** ಮಾತಾಡಿದೊ, ಬಹಳ ಸರಳ ವ್ಯಕ್ತಿತ್ವ ಅವರದು.

ಲಂ: ನೀವು ಗ್ರಹಿಸಿದಂತೆ ದೇವೇಗೌಡ ಎಂತಾ ಮನುಷ್ಯ.. ನಿಜವಾದ ವ್ಯಕ್ತಿತ್ವ ಏನು? ಪುತ್ರಪ್ರೇಮ, ಇತ್ಯಾದಿ ಬಿಟ್ಟು ಹೇಳಿ.

❑(ಸ್ವಲ್ಪ ನಿಧಾನಿಸಿ) ದೇವೇಗೌಡ ಈಸ್ ಎ ಹಾರ್ಡ್‌ವರ್ಕರ್, ಅಂದ್ರೆ ದಿನಕ್ಕೆ 10-12 ಗಂಟೆ ಕೆಲಸ ಮಾಡ್ತಾರೆ. ಆದ್ರೆ ಅವರಲ್ಲಿ ಯಾವ ಐಡಿಯಾಲಜಿ, ಸಿದ್ಧಾಂತ, ಬದ್ಧತೆ ಒಂದೂ ಇಲ್ಲ, ಅವರ ಅಭಿಪ್ರಾಯಾನೇ ಎಲ್ಲರ ಮೇಲೂ ಹೇರುತ್ತಾರೆ. ನನ್ನ ಪ್ರಕಾರ ದೇವೇಗೌಡ್ರು ತನಗೇನು ಸಿಗುತ್ತೆ ಅಂತಾ ಸದಾ ಯೋಚಿಸುತ್ತಿರುತ್ತಾರೆ! ಅದಕ್ಕೆ ಸಿಕ್ಕಿದೋರನ್ನ ಬಳಸಿ ಬಿಸಾಕ್ತಾರೆ..... ತುಳಿದರೆ ಪಾತಾಳಕ್ಕೇ ತುಳಿತಾರೆ... (ನಗು)

ಲಂ: ನೀವು ಹೇಗೆ ಬದುಕುಳಿದಿರಿ?

❑ನಾನು ಮೊದಲಿಂದಲೂ ಅವರ ಜೊತೆ ಇದ್ದೋನಲ್ಲ, 1999 ರಿಂದ ಜೊತೆಗಿದ್ದೆವು. ಆಗ ದೇವೇಗೌಡ ಒಬ್ಬರೇ ಲೀಡರ್ ಅಲ್ಲ, ಹೆಗಡೆ, ಪಟೇಲ್, ಬೊಮ್ಮಾಯಿ ಎಲ್ಲಾ ಇದ್ರು. ಆಗ ದೇವೇಗೌಡ ಬಿಟ್ಟರೆ ಹಳೇ ಮೈಸೂರಲ್ಲಿ ಬೇರೆ ಒಕ್ಕಲಿಗ ಲೀಡರ್‌ಗಳೂ ಇರಲಿಲ್ಲ, ಜನರೊಂದಿಗೆ ಚೆನ್ನಾಗಿ ಬೆರಿತಿದ್ರು. ಸನ್ನಿವೇಶಾನೂ ಅನುಕೂಲವಾಗಿತ್ತು, ಒಕ್ಕಲಿಗ ಲೀಡರ್ ಆಗಿ ಎಮರ್ಜ್ ಆದರು. ಆದರೆ ಸಿಎಂ, ಪಿಎಂ ಆಗಿದ್ದು ದೈವಬಲದಿಂದ ಅನ್ನಂಡಿದ್ದಾರೆ... ಅದು ಹಾಗಲ್ಲ.

ಲಂ: ಸಿಂಧ್ಯಾ-ಎಂ.ಪಿ. ಪ್ರಕಾಶ್ ನಿಮ್ಮ ಬೆಂಬಲಕ್ಕೆ ನಿಲ್ಲಲಿಲ್ಲ, ಬರಲಿಲ್ಲ ಯಾಕೆ?

❑(ಮೌನ...ನಂತರ) ಅವರ್ಯಾಕೆ ದೇವೇಗೌಡರ ಜೊತೆ ಸೇರಿಕೊಂಡರು.... **I do not know.**

ಲಂ: ಎಂ.ಪಿ. ಪ್ರಕಾಶ್ ವ್ಯಕ್ತಿತ್ವದ ಬಗ್ಗೆ ಹೇಳಿ?

❑(ದೀರ್ಘ ಮೌನ.... ನಂತರ ನಗುತ್ತಾ) ಅವರು ಯಾವತ್ತೂ ತಮ್ಮನ್ನು ಅಸರ್ಟ್ ಮಾಡಿಕೊಂಡು ರಾಜಕಾರಣ ಮಾಡಲಿಲ್ಲ. ಹೇಳಬೇಕಾದ್ದನ್ನು ನೇರವಾಗಿ ಹೇಳುತ್ತಲೂ ಇರಲಿಲ್ಲ, ಹೇಳಿದ್ದನ್ನೇ ಸುತ್ತಿ ಬಳಸಿ ಹೇಳ್ತಿರೋರು. ಯಾರನ್ನೂ ನಿಷ್ಠೂರ ಮಾಡಿಕೋತಿರಲಿಲ್ಲ.

ಲಂ: ಕುಮಾರಸ್ವಾಮಿ ನನ್ನ ಲೀಡರ್ ಅಂತಾ ಒಪ್ಪಿಕೊಂಡರಲ್ಲಾ ಪ್ರಕಾಶ್?

❑ಅದನ್ನ ಜನ ಎಂ.ಪಿ. ಪ್ರಕಾಶ್‌ರಂತವರಿಂದ ನಿರೀಕ್ಷಿಸಿರಲಿಲ್ಲ, ಆದರೆ ಸಿಂಧ್ಯಾ ಧೈರ್ಯ ಮಾಡಿದರು.

ಲಂ: ದೇವೇಗೌಡರ ಪವರ್ ಪಾಲಿಟಿಕ್ಸ್‌ನಲ್ಲಿ ವಿಶೇಷ ಗುಣ ಲಕ್ಷಣ, ಚಿಂತನೆ, ಏನಾದರು ಕಾಣಿಸಿತಾ ನಿಮಗೆ?

❑**No...** ಅವರದು ಯಾವಾಗಲೂ ಅಧಿಕಾರಕ್ಕಾಗಿ ಯೋಚನೆ ಅಷ್ಟೆ... ಅದಕ್ಕಾಗಿ ಹೋಮ, ಹವನ, ಮಾಟ-ಮಂತ್ರ ಅಂತ ಇರ್ತಾರೆ.

ದೇಶಕ್ಕಾಗಿ ಯೋಚಿಸೊ ಬದಲು ಕುಟುಂಬಕ್ಕಾಗಿ ಯೋಚಿಸೋದು, ದೇಶಕ್ಕಾಗಿ ಆಳೋ ಬದಲು ಕುಟುಂಬಕ್ಕಾಗಿ ಆಳೋದೇ ಅವರ ಗುಣ.

'ನಮ್ಮಪ್ಪನಿಗೆ ಹಿಂಸೆ ಆಗ್ತಾಯಿತ್ತು, ಅದಕ್ಕೆ ಬಿಜೆಪಿ ಜತೆಗೋದ್ದೊ, ಸರ್ಕಾರ ಮಾಡ್ದೊ' ಅಂದ್ರು ಕುಮಾರಸ್ವಾಮಿ. ಇವರು ಈ ಸರ್ಕಾರ ಮಾಡಲಿಲ್ಲ ಅಂತ ಯಾರು ಅಳುತ್ತಾ ಇದ್ರು, ಬಿಟ್ಟು ಬಿಡಬಹುದಿತ್ತಲ್ಲಾ? ಅಷ್ಟೇ ಅಲ್ಲ ಈ ಚೆನ್ನಿಗಪ್ಪ 'ನಾನು ದೇವೇಗೌಡರ ಮನೆ ಜೀತದಾಳಾಗಲೂ ತಯ್ಯಾರ್' ಅಂತಾರೆ. ಇನ್ನೊಬ್ಬರು ಎಚ್.ಡಿ. ಕುಮಾರಸ್ವಾಮಿ ಹೆಸರಲ್ಲಿ, ಮತ್ತೊಬ್ರು ಚೆನ್ನಮ್ಮನವರ ಹೆಸರಲ್ಲಿ ಪ್ರಮಾಣ ವಚನ ಸ್ವೀಕರಿಸುತ್ತಾರೆ.... ಗುಲಾಮಗಿರಿ ಯಾವ ಲೆವೆಲ್‌ನಲ್ಲಿದೆ ನೋಡಿ. ಇವರಿಗೆಲ್ಲಾ ಸಂವಿಧಾನದ ಅರ್ಥ ಪ್ರಜಾಪ್ರಭುತ್ವದ ಮಹತ್ವ ಏನೂ ಗೊತ್ತಿಲ್ಲ.

ದೇವೇಗೌಡ ಪಿಡಬ್ಲ್ಯೂಡಿ ಮಂತ್ರಿಯಾಗಿದ್ದಾಗ ಮುಖ್ಯಮಂತ್ರಿ ಆಗೋ ಆಸೆ ಇತ್ತು. ಆದ್ದರಿಂದಲೇ ಭ್ರಷ್ಟಾಚಾರ ಮಾಡಿ ಹೆಸರೂ, ಇಮೇಜ್ ಕೆಡಿಸಿಕೋಬಾರದೆಂಬ ಹಿಂಜರಿಕೆಯೂ ಇತ್ತು. ಅವರಿಗೆ ಪ್ರಧಾನಮಂತ್ರಿ ಆಗೋ ನಿರೀಕ್ಷೆ-ಕಲ್ಪನೆ ಇರಲಿಲ್ಲ. ಆಮೇಲೆ ಮುಖ್ಯಮಂತ್ರಿ, ಪ್ರಧಾನಮಂತ್ರಿನೂ ಆಗಿ ಈಗ ಮಗನ್ನ ಮುಖ್ಯಮಂತ್ರಿ ಮಾಡಿದ್ದಾರೆ. ಇವೆಲ್ಲಾ ಆಸೆ ಈಡೇರಿದ ಮೇಲೆ ಇಮೇಜ್ ಬಗ್ಗೆ ಅವರ್ಯಾಕೆ ತಲೆ ಕೆಡಿಸಿಕೊಳ್ತಾರೆ. ಈಗ ಹಣ ಇದ್ದರೆ ಅಧಿಕಾರ ಉಳಿಯುತ್ತೆ, ಮತ್ತೆ ಅಧಿಕಾರ ಗಿಟ್ಟಿಸೋಕೆ ಹಣ ಇದ್ರೆ ಸಾಕು ಅಂತ ಅವರ ಯೋಚನೆ.

(ಅಷ್ಟರಲ್ಲಿ ನಮಗೆ ಟೀ-ಬಿಸ್ಕತ್, ಸಿದ್ಧರಾಮಯ್ಯನವರಿಗೆ ಒಂದು ಗ್ಲಾಸ್ ಮಜ್ಜಿಗೆ ತಂದರು ಸಹಾಯಕ ಪುಟ್ಟಸ್ವಾಮಿ. 'ಏನಾಕ್ಕಿದ್ದೀರ್ಲ ಇದ್ಕೆ' ಎನ್ನುತ್ತಲೇ ಮಜ್ಜಿಗೆ ಕೈಗೆತ್ತಿಕೊಂಡರು ಸಿದ್ಧರಾಮಯ್ಯ. ಲೋಟದಲ್ಲಿ ಕೊತ್ತಂಬರಿ ಸೊಪ್ಪಿತ್ತು).

ಲಂ: ನಿಮಗೆ ಬಿಡುವು ಸಿಗುತ್ತಾ? ಅಂತಾ ಸಮಯ ಹೇಗೆ ಕಳೀತೀರಿ?

❑**Hardly I find time.** ನಾನು ಹೆಚ್ಚಾಗಿ ಜನರ ಜೊತೆ ಇರ್ತೀನಿ. ಪ್ರತಿ ಸಂಡೆ ಮೈಸೂರಿಗೆ ಹೋಗ್ತೀನಿ, ಮನೇಲಿದ್ದಾಗ ರಾತ್ರಿ ಹತ್ತೂವರೆಗೆ ಕನ್ನಡ ನಾಡಿ ನ್ಯೂಸ್ ತಪ್ಪದೆ ನೋಡ್ತೀನಿ.

ಲಂ: ಇನ್ನೂ ಬಿಡುವು ಸಿಕ್ಕಿದರೆ?

❑ಸಂಗೀತ... ಕ್ಲಾಸಿಕಲ್ ಮ್ಯೂಸಿಕ್ ನನಗಿಷ್ಟ. ಜೊತೇಲಿ ರಫಿ, ಮುಖೇಶ್‌ರಂತಹ ಸಂಗೀತಗಾರರ ಹಳೇ ಹಿಂದಿ ಹಾಡು ಕೇಳೋದೂ ಇರುತ್ತೆ.

ಲಂ: ನೀವು ಲೋಹಿಯಾವಾದಿಗಳ ಜೊತೆಲಿದ್ದವರು. ಆ ಅನುಭವದ ಬಗ್ಗೆ ಹೇಳಿ?

❑ಆಗ ನಾನಿನ್ನೂ ಹುಡುಗ, ಲಾಯರ್ ಆಗಿದ್ದೆ. ಎಂ.ಡಿ. ನಂಜುಂಡಸ್ವಾಮಿ, ರಾಮದಾಸ್ ನಾವೆಲ್ಲಾ ಬಹಳ ಚರ್ಚೆ ಮಾಡುತ್ತಿದ್ವಿ. ಲೋಹಿಯಾ ದೂರದೃಷ್ಟಿಯಿದ್ದ, ದೇಶದ ಬಗ್ಗೆ ಯೋಚಿಸುತ್ತಿದ್ದ ಅಪರೂಪದ ನಾಯಕ. ಅಂಬೇಡ್ಕರ್ ತರ ಇವತ್ತೂ ಪ್ರಸ್ತುತತೆ ಇರೋ ಚಿಂತನೆಗಳು ಅವರದ್ದು.

ಲಂ: ಪುಸ್ತಕ ಓದೋದು....

❑ನ್ಯೂಸ್ ಜರ್ನಲ್ ನೋಡ್ತಿರ್ತೀನಿ. ಇತ್ತೀಚೆಗೆ ಮೀಸಲಾತಿ ಬಗ್ಗೆ ಅರುಣ್ ಶೌರಿ ಬರೆದಿರೊ ಪುಸ್ತಕ ಓದಿದೆ.

ಲಂ: ಈ 30 ವರ್ಷದಲ್ಲಿ ರಾಜಕೀಯ ಎಷ್ಟು ಬದಲಾಗಿದೆ?

❑ಸ್ವಾರ್ಥ ರಾಜಕೀಯ ಜಾಸ್ತಿಯಾಗಿದೆ. ಜನ-ದೇಶದ ಬಗ್ಗೆ ಪ್ರೀತಿ ಕಾಳಜಿ ಕಡಿಮೆ ಆಗ್ತಿದೆ. ಪವರ್ ಸಿಕ್ಕಿದರೆ ಹಣ, ಪವರ್ ಗಳಿಸಲೂ ಹಣ ಇದೇ ರಾಜಕೀಯ ಅನ್ನೋ ವಾತಾವರಣ ಬಂದುಬಿಟ್ಟಿದೆ.

ಲಂ: ಹಾಗಾದ್ರೆ ನೀವು ಪ್ರಾದೇಶಿಕ ಪಕ್ಷ ಮಾಡದೆ ಹೋಗಿದ್ದು ಹಣದ ಕೊರತೆಯಿಂದಾನಾ?

❑ಪಾರ್ಟಿ ಕಟ್ಟೋಕೆ ಹಣ ಬೇಕೇ ಬೇಕಾಗುತ್ತೆ, ಆದರೆ ಹಣಾನೇ ಮುಖ್ಯ ಅಲ್ಲ. ಪ್ರಾದೇಶಿಕ ಪಕ್ಷದ ಸ್ಥಿತಿಗತಿ ಬಗ್ಗೆ ನಾನು ಮೊದಲೇ ಹೇಳಿದ್ದೀನಿ. ಹಣದ ವಿಷಯಕ್ಕೆ ಬಂದರೆ, ಪವರ್ ಸಿಕ್ಕಾಗ ಹಣ ಕೊಡೋರು ಬರಬಹುದು, ಆದರೆ ಹೊಸ ಪಾರ್ಟಿ ಕಟ್ಟೋವಾಗ ಯಾರೂ ಮುಂದೆ ಬರಲ್ಲ.

ಇವತ್ತಿನ **election** ಬಹಳ ದುಬಾರಿಯಾಗಿ ಹೋಗಿದೆ. ಆದ್ರೆ ಒಂದು ವಿಷಯ, ನನಗೆ ಇವತ್ತೂ ಪ್ರಾಮಾಣಿಕವಾಗಿ ಅನ್ನಿಸೋದು **voters are not corrupt.**

ಲಂ: ಕುಮಾರ ಸ್ವಾಮಿಗೆ ಮುಖ್ಯಮಂತ್ರಿ ಆಗಬೇಕು ಅನ್ನೋ ಆಸೆ ಯಾವಾಗ ಬಂತು ಅನ್ನಿಸುತ್ತೆ?

❑ಆತ ಬಹಳ **ambitious,** ರಾಮನಗರದಿಂದ ಮೊದಲ ಸಾರಿ ಎಂಎಲ್‌ಎ ಆಗಿ ಗೆದ್ದಾಗಲೇ ಈ ಆಸೆ ಇತ್ತು ಅವರಿಗೆ. ಆಗಲೇ ಬಿಜೆಪಿ ಜೊತೆ ಸಂಬಂಧಾನೂ ಬೆಳೆಸಿಕೊಂಡಿದ್ರು. ಆದರೆ ಗೌಡರಿಗೆ ನನ್ನ ಬಿಟ್ಟು ಮಗನ್ನ ಸಿಎಂ ಮಾಡೋಕಾಗುತ್ತಿರಲಿಲ್ಲ ಆಗ.



ಲಂ: ಅಂದರೆ.... ಬಿಡಿಸಿ ಹೇಳಿ?

❑ನನ್ನ ಅವಾಯ್ಡ್ ಮಾಡಲು ಕಾಂಗ್ರೆಸ್ ಜೊತೆ ಸರ್ಕಾರ ಮಾಡಿದ್ರು. ಅದೊಂತರಾ **stop gap** ವ್ಯವಸ್ಥೆ. ನಂತರ ನನ್ನ ಆಚೆ ಕಳಿಸಿ ಬಿಜೆಪಿ ಜೊತೆ ಸೇರಿ ಕುಮಾರಸ್ವಾಮಿ ಸಿಎಂ ಮಾಡೋ ಪ್ಲಾನ್ ಅವರಿಗೆ ಮೊದಲೇ ಇತ್ತು.

ಲಂ: ದೇವೇಗೌಡ ಮತ್ತವರ ಕುಟುಂಬದವರು ಇಷ್ಟೊಂದು ಹಣ, ಆಸ್ತಿ ಮಾಡಿಕೋತಿದ್ದಾರಲ್ಲ.... ಯಾಕಿರಬಹುದು?

❑ನಿಮ್ಮ ಪತ್ರಿಕೇಲೇ ಎಲ್ಲಾ ಬರ್ದಿದ್ದೀರಲ್ವಾ. (ಕೆಲ ಕ್ಷಣ ಯೋಚಿಸಿ) ನೋಡಿ 2004ರ ನಂತರ ಅಧಿಕಾರ ಬಂದ ಮೇಲೆ ಎಷ್ಟು ಸಾಧ್ಯಾನೋ ಅಷ್ಟು ಹಣ ಮಾಡಲು ಅವರು ತೀರ್ಮಾನ ಮಾಡಿಕೊಂಡಿದ್ದಾರೆ.

ಲಂ: ಅದು ಇಡೀ ಕರ್ನಾಟಕಕ್ಕೆ ಕಾಣ್ತಾ ಇದೆ, ಆದರೆ ಈ ಮಟ್ಟದ ಭ್ರಷ್ಟಾಚಾರ ಯಾಕೆ?

❑ದೇವೇಗೌಡ ಪಿಡಬ್ಲ್ಯೂಡಿ ಮಂತ್ರಿಯಾಗಿದ್ದಾಗ ಮುಖ್ಯಮಂತ್ರಿ ಆಗೋ ಆಸೆ ಇತ್ತು, ಆದ್ದರಿಂದಲೇ ಭ್ರಷ್ಟಾಚಾರ ಮಾಡಿ ಹೆಸರೂ, ಇಮೇಜ್ ಕೆಡಿಸಿಕೋಬಾರದೆಂಬ ಹಿಂಜರಿಕೆನೂ ಇತ್ತು. ಅವರಿಗೆ ಪ್ರಧಾನಮಂತ್ರಿ ಆಗೋ ನಿರೀಕ್ಷೆ-ಕಲ್ಪನೆ ಇರಲಿಲ್ಲ. ಆಮೇಲೆ ಮುಖ್ಯಮಂತ್ರಿ, ಪ್ರಧಾನಮಂತ್ರಿನೂ ಆಗಿ ಈಗ ಮಗನ್ನ ಮುಖ್ಯಮಂತ್ರಿ ಮಾಡಿದ್ದಾರೆ. ಇವೆಲ್ಲಾ ಆಸೆ ಈಡೇರಿದ ಮೇಲೆ ಇಮೇಜ್ ಬಗ್ಗೆ ಅವರ್ಯಾಕೆ ತಲೆ ಕೆಡಿಸಿಕೊಳ್ತಾರೆ. ಈಗ ಹಣ ಇದ್ದರೆ ಅಧಿಕಾರ ಉಳಿಯುತ್ತೆ, ಮತ್ತೆ ಅಧಿಕಾರ ಗಿಟ್ಟಿಸೋಕೆ ಹಣ ಇದ್ರೆ ಸಾಕು ಅಂತ ಅವರ ಯೋಚನೆ.

ಲಂ: ನಿಮ್ಮನ್ನು ಕೆಲವರು ಕುರುಬ ಜನಾಂಗದ ಲೀಡರ್ ಅಂತಾರಲ್ಲ?

❑ನಾನು ಬರೀ ಕುರುಬರ ಲೀಡರ್ ಅಲ್ಲ, ನನ್ನ ಜೊತೆ ಬೇರೆ ಎಲ್ಲಾರೂ ಇದಾರೆ. ನನ್ನ ಮನೆ ಹತ್ತಿರ ಒಂದಿಬ್ಬರು ಅದೇ ಜಾತಿ ಜನ ಕಾಣಿಸಿಕೊಂಡೇಟಿಗೆ

ಈ ಕಾಂಗ್ರೆಸ್ ಪಾರ್ಟಿ ಜನರಿಗೆ ಇನ್ನೂ ಒಂದು ...ಮಾನ ಕಳೆದರೂ ಬುದ್ಧಿ ವಿವೇಕ ಬರುವುದಿಲ್ಲ ...ಯುಬದನ್ನು ಭಾನುವಾರದ ಕಾಂಗ್ರೆಸ್-ಎಬಿಬಿಜೆಡಿ ...ಲೀನ ಸಮಾವೇಶ ಮತ್ತೊಮ್ಮೆ ಸಾಬೀತುಪಡಿಸಿದೆ.

ರಾಜಕೀಯ ಮಾತನಾಡುವ ವೇಳೆಯಲ್ಲಿ ಭಟ್ಟಂಗಿ ...ಷಣ ಮಾಡುವುದು. ಅರ್ಥ, ತರ್ಕ ಒಂದೂ ...ರವಂತೆ ವರ್ಣಿಸುವುದರಲ್ಲಿ ಖರ್ಗೆ, ಧರಂಸಿಂಗ್ ...ಬ್ಬರೂ ಪೈಪೋಟಿ ನಡೆಸಿ ಮೊನ್ನಿನ ವಿಲೀನ ...ಮಾವೇಶದ ನಿಜವಾದ ಸ್ಫೂರ್ತಿಯನ್ನು ಹಾಳು ...ಗೆಡವಿಬಿಟ್ಟರು.

ಸಾಮಾನ್ಯವಾಗಿ ಭಾನುವಾರ ಯಾವ ಕಾರ್ಯ...ಮವನ್ನೂ ಒಪ್ಪಿಕೊಳ್ಳದ ಸೋನಿಯಾ ಗಾಂಧಿ ...ದ್ಧರಾಮಯ್ಯನವರಿಗೋಸ್ಕರ ಬೆಂಗಳೂರಿಗೆ ಹೇಳಿದ ...ಮಯಕ್ಕೆ ಸರಿಯಾಗಿ ಬಂದೇನೋ ಹೋದರು. ...ಮಾವೇಶದ ದಿನ ಧರಂಸಿಂಗ್ ಐದು ನಿಮಿಷ, ...ರ್ಗೆ 10, ಸಿದ್ಧರಾಮಯ್ಯ 15, ಕೊನೆಗೆ ಸೋನಿಯಾ ...ಮೂವತ್ತು ನಿಮಿಷ (ಅನುವಾದ ಸೇರಿ) ಭಾಷಣ

ವಿಲೀನ ಸಮಾವೇಶ

ಮಿಂಚಿದ ಸಿದ್ದು, ಅವಿವೇಕಿ ಕಾಂಗೈಗಳು

ಮಾಡುವುದೆಂದು ನಿರ್ಧಾರವಾಗಿತ್ತು. ಸರಿ ಶುರು ವಾಯಿತಲ್ಲ ಖರ್ಗೆ ಸಾಹೇಬರ ಭಟ್ಟಂಗಿ ಭಾಷಣ.

ಎರಡು ನಿಮಿಷ ಅವರಿಗೆ ಸ್ವಾಗತ, ಇವರಿಗೂ ಸ್ವಾಗತದಲ್ಲೇ ಮುಗಿಯಿತು. ಉಳಿದ ಸಮಯವನ್ನು ನೆಹರು, ಇಂದಿರಾ, ರಾಜೀವ್ ಸೋನಿಯಾಗೆ ಜೈ ಎಂದು ಖರ್ಚು ಮಾಡಿಬಿಟ್ಟರು ಖರ್ಗೆ. ಕೆಪಿಸಿಸಿ ಪ್ರೆಸಿಡೆಂಟಾಗಿ ರಾಜ್ಯ ರಾಜಕೀಯದ ಇವತ್ತಿನ ಸ್ಥಿತಿಗತಿ, ಕೋ-ಜಾ ಸರ್ಕಾರದ ಭ್ರಷ್ಟಾಚಾರ, ಕೋಮುವಾದ ಒಂದೂ ಖರ್ಗೆ ಮಾತಲ್ಲಿ ಸುಳಿಯಲಿಲ್ಲ.



ಸಮಾವೇಶಕ್ಕೆ ಪಾಲ್ಗೊಂಡಿದ್ದ ಜನಸ್ತೋಮ

ಸಿದ್ಧರಾಮಯ್ಯ ಸೇರ್ಪಡೆಯಿಂದ ಕಾಂಗ್ರೆಸ್‌ಗಾಗುವ ಲಾಭ, ರಾಜ್ಯ ರಾಜಕೀಯದಲ್ಲಾಗುವ ಪರಿಣಾಮ ಒಂದೂ ಖರ್ಗೆ ಬಾಯಿಂದ ಬರಲಿಲ್ಲ.

ಇನ್ನು ಧರಂಸಿಂಗ್ ಮೊದ್ಮಣಿ ತರ ಕನ್ನಡದಲ್ಲಿ ಶುರು ಮಾಡಿ ಜನ ಹೆದರಿಕೊಳ್ಳುವಷ್ಟರಲ್ಲಿ ಹಿಂದಿಗೆ ಹಾರಿದರು. ಅವರ ಮಾತಿನಲ್ಲೂ ಅಸಂಬದ್ಧತೆ ಬಿಟ್ಟರೆ ಏನೂ ಇರಲಿಲ್ಲ.

ಈ ಸಮಾವೇಶದಲ್ಲಿ ನಿಜಕ್ಕೂ ಮಾತಿನಲ್ಲಿ ಮಿಂಚಿದವರು ಸಿದ್ಧರಾಮಯ್ಯ ಹಾಗೂ ಸೋನಿಯಾ ಗಾಂಧಿ.

ಸಮಾವೇಶಕ್ಕೆ ಬಂದಿದ್ದವರ ಪೈಕಿ ಕಾಂಗ್ರೆಸ್‌ನವರೆಷ್ಟು-ಸಿದ್ಧರಾಮಯ್ಯ ಕಡೆಯವರೆಷ್ಟೆಂಬುದು ಅಷ್ಟು ಮುಖ್ಯವಲ್ಲ. ಆದರೆ ಈ ಎರಡೂ ಪಾರ್ಟಿಗಳ ವಿಲೀನದ ಬಗ್ಗೆ ಕಾಂಗ್ರೆಸ್ ನೀಡಿದ ಪತ್ರಿಕಾ ಜಾಹೀರಾತುಗಳಲ್ಲಿ ಸೋನಿಯಾ ಬಿಟ್ಟರೆ ಸಿದ್ಧರಾಮಯ್ಯ ಫೋಟೋ ಎಲ್ಲೂ ಎದ್ದು ಕಾಣುವಂತಿರಲಿಲ್ಲ. ಅಷ್ಟೇ ಯಾಕೆ ಅರಮನೆ ಮೈದಾನದಲ್ಲೂ ನೆಹರೂ ಕುಟುಂಬದವರ ಕಟೌಟ್ ಬಿಟ್ಟರೆ ಸಿದ್ಧರಾಮಯ್ಯನವರ ಒಂದೂ ಕಟೌಟ್ ಇರಲಿಲ್ಲ. ಒಂದು ಕಡೆ ವೇದಿಕೆ ಹತ್ತಿರವೇ ದೊಡ್ಡ ಬ್ಯಾನರ್‌ನಲ್ಲಿ ಕಾಂಗ್ರೆಸ್‌ನ ಡಿ.ಕೆ. ಶಿವಕುಮಾರ್ ಪುಂಡು ಮುಖ ರಾಚುತ್ತಿತ್ತು.

ಇದು ಕಾಂಗ್ರೆಸ್ ಸಂಸ್ಕೃತಿ. ಈ ಪಾರ್ಟಿ ಹೊಕ್ಕವರನ್ನು ನಡೆಸಿಕೊಳ್ಳುವ ವಿಧಾನ.



ಸಮಾವೇಶದಲ್ಲಿ ಸೋನಿಯಾರೊಂದಿಗೆ ಸಿದ್ದರಾಮಯ್ಯ

ಸಿದ್ಧರಾಮಯ್ಯ ಇದನ್ನೆಲ್ಲಾ ಗಮನದಲ್ಲಿಟ್ಟುಕೊಳ್ಳಬೇಕಿದೆ. ಅವರು ತಮ್ಮನ್ನು ತಾವೇ ಅಸರ್ಟ್ ಮಾಡಿಕೊಳ್ಳದೇ ಹೋದರೆ ಕಾಂಗ್ರೆಸ್ ಸಮುದ್ರ ಅವರನ್ನು ನುಂಗಿ ನೀರು ಕುಡಿದು ಬಿಡುತ್ತದೆ.

ಖರ್ಗೆ, ಧರಂಸಿಂಗ್, ಡಿಕೆಗಿಂತಾ ವ್ಯಕ್ತಿತ್ವ, ಮಾತುಗಾರಿಕೆ, ಜನಸಂಪರ್ಕದಲ್ಲಿ ಉತ್ತಮವಾಗಿರುವ ಸಿದ್ಧರಾಮಯ್ಯ ಕಾಂಗ್ರೆಸ್‌ನ ಭಟ್ಟಂಗಿ ನಾಯಕರುಗಳಿಗಿಂತಾ ಭಿನ್ನವಾಗುಳಿಯಬೇಕಿದೆ.

-ಈಶ

...ಗೆ ಜಾತಿ ಪಟ್ಟ ಕಟ್ಟಬೇಡಿ....

ಲಂ: ಮಂತ್ರಿಯಾಗಿದ್ದಾಗ ಸ್ವಜಾತಿ ಅಧಿಕಾರಿಗಳನ್ನೇ ...ತ್ತಿರ ಬಿಟ್ಟುಕೊಂಡಿದ್ದೀರಿ ಅನ್ನೋ ಬಗ್ಗೆ....

❑ (ತಾಳ್ಮೆಯಿಂದ) ನೋಡಿ ಒಬ್ಬ ಮಂತ್ರಿ ...ಮ್ಯೂನಲ್-ಜಾತಿವಾದಿ ಅನ್ನೋ ಮೊದಲು ಅವನ ...ಯ ಏನೂ ಅನ್ನೋದನ್ನೂ ನೋಡಬೇಕು. ನಾನು ...ಕಾಸು ಮಂತ್ರಿಯಾಗಿ ಏಳು ಬಜೆಟ್ ಕೊಟ್ಟಿದ್ದೀನಿ. ...ವೃದ್ಧಿ ಕಾರ್ಯಕ್ಕೆ ಹಣ ಹಂಚುವಾಗ ನಿಮಗೆ ...ಲ್ಲಿ ಜಾತಿ, ಕಮ್ಯೂನಲಿಸಂ ಕಾಣಿಸ್ತಾ. ಕುರುಬರೂ ...ರಿದಂತೆ ಎಲ್ಲಾ ನನ್ನ ಹತ್ತಿರ ಬರೋದ್ಯಾಕೆಂದರೆ ...ರೆಯವರು ಜನಾನ ಮಾತಾಡಿಸಲ್ಲ, ನಾನು ಮಾತಾ...ನಿ ಮಾತಾಡೋ ಲೀಡರ್ ಹತ್ರಾ ತಾನೆ ಜನ ...ತ್ತಾರೆ.

ಲಂ: ನೀವು ಮುಂಗೋಪಿ ಅಂತಾ ಎಲ್ಲೂ...ಳ್ತಾರಲ್ಲ?

❑ ಈಗ ಖಂಡಿತಾ ಇಲ್ಲ, ಮೊದಲು ಲಾಯರ್ ...ದ್ದಾಗ, ಮೊದಲ ಸಾರಿ ಎಂಎಲ್‌ಎ ಆದಾಗ ...ಂಗೋಪ ಇತ್ತು. ಈಗ ನನಗೆ ಕೋಪ ಬರಲ್ಲ, ...ರಾದ್ರೂ ಆಗದೇ ಇರೋ ಕೆಲಸ ಮಾಡಿಕೊಡಿ ...ತ ಪೀಡಿಸಿದ್ರೆ, ರೇಜಿಗೆ ಮಾಡಿದ್ರೆ ರೇಗಾಡ್ತೀನಿ ...ೆ.

ಲಂ: ನೀವು lazy (ಆಲಸಿ) ಅನ್ನೋ ಮಾತಿದೆಯಲ್ಲ? (ಈ ಪ್ರಶ್ನೆ ಅವರಿಗೆ ಕಿರಿಕಿರಿ ಮಾಡುತ್ತೇನೊ ...ಸಿತ್ತು. ಆದರೆ ಸಿದ್ಧರಾಮಯ್ಯ ಬಹಳ ಸ್ಪೋರ್ಟಿವ್ ... ತೆಗೆದುಕೊಳ್ತಾ)

❑ ಸೋಮಾರಿ ಅನ್ನೋದು... ಏಕೆ ಬಂತೋ ...ತ್ತಿಲ್ಲ, ನಾನು ಸೋಮಾರಿ ಅಲ್ಲ, Unnecessary ... ಕಾಲ ಕಳಿಯಲ್ಲ, ಮನೇಲೇ ಕೂತುಕೊಂಡು ...ಕೊಂಡು ಕಾಲ ಕಳೆಯಲ್ಲ, ಆದರೂ ಸೋಮಾರಿ ...ತ ಕೆಲವರಿಗಿದೆ. ನನಗೆ ಕೊಟ್ಟಿದ್ದ ಫೈನಾನ್ಸ್ ಖಾತೇನಾ ...ಸಿಯಂಟಾಗಿ ನಿಭಾಯಿಸಿದ್ದೀನಿ. ಸೋಮಾರಿಗಳು ...ಕೆಲಸ ನಿಭಾಯಿಸಕ್ಕಾಗಲ್ಲ, ಅಷ್ಟೇ ಅಲ್ಲ ನನ್ನಷ್ಟು ...ರ್ ಯಾರೂ ಮಾಡಲ್ಲ.

ಲಂ: ನಿಮ್ಮ ಪತ್ನಿ-ಮಕ್ಕಳ ಬಗ್ಗೆ ಹೇಳಿ....

❑ ಹೆಂಡತಿ ಪಾರ್ವತಿ ನಮ್ಮ ಹಳೇ ಸೆಂಟಿಮೆಂಟಿನ ....

ಲಂ: ಅವರು ಹೊರಗಡೆ ಎಲ್ಲೂ ಕಾಣಿಸೋದೇ ...ಲ್ವಾ? ಕರೀರಿ, ಮಾತಾಡಿಸೋಣ!

❑ She is very shy. ಇಷ್ಟಪಡಲ್ಲ, (ಹಾಗೆ ...ನ್ನು ಸಿದ್ಧರಾಮಯ್ಯನವರೇ ನಾಚಿಕೊಂಡರು)

ಲಂ: ನಿಮ್ಮನ್ನ ದೇವೇಗೌಡರು ಪಾರ್ಟಿಯಿಂದ ...ಸ್ ಮಾಡಿದಾಗ ಪಾರ್ವತಿಯವರು ಏನಂದ್ರು?

❑ (ನಗುತ್ತಾ) [illegible] ಹೇಳಬೇಕೆಂದ್ರೆ ಏನೂ ಹೇಳಲಿಲ್ಲ,

ಆದ್ರೆ ನನ್ನ ಮಗನಿಗೆ ಇದ್ರಲೆಲ್ಲಾ ಇಂಟರೆಸ್ಟ್ ಇದೆ.

ಲಂ: ಯಾವುದರಲ್ಲಿ ರಾಜಕೀಯದಲ್ಲಾ?

❑ ಹೌದು. ಆದರೆ ಜನರ ಪ್ರೀತಿ, ನಂಬಿಕೆ ಪಡೆದುಕೊಂಡರೆ ಮಾತ್ರ ರಾಜಕೀಯ ಸಾಧ್ಯ ಅಂತಾ ಅವನಿಗೆ ಹೇಳಿದ್ದೀನಿ.

ಲಂ: 30 ವರ್ಷದ ರಾಜಕೀಯ ಜೀವನ ತೃಪ್ತಿ ಕೊಟ್ಟಿದೆಯಾ?

❑ ನಾನು ಹೀಗೇ ಇರಬೇಕು ಅಂತಾ Life ನ plan ಮಾಡಿಕೊಂಡು ರಾಜಕಾರಣ ಮಾಡಿದೋನಲ್ಲ, I am happy. ಮುಂದೆ ಏನೂ ಆಗದಿದ್ದರೂ ತಲೆ ಕೆಡಿಸಿಕೊಳ್ಳಲ್ಲ, ಎಂಎಲ್‌ಎ ಆಗಬೇಕೂಂತ ಇತ್ತು, ಆದೆ. ಮಿನಿಸ್ಟರ್ ಯೋಚನೆನೇ ಇರಲಿಲ್ಲ, ನಜೀರ್‌ಸಾಬ್ ಮತ್ತು ರಾಚಯ್ಯನೋರು ಹೆಗಡೆಗೆ ಹೇಳಿ ಮಂತ್ರಿ ಮಾಡಿಸಿದರು. ಸಿಎಂ ಕ್ಯಾಂಡಿಡೇಟ್ ಆಗ್ತೀನಂತಾ ಅಂದುಕೊಂಡಿರಲಿಲ್ಲ, I may become CM or not. ಆಗಲಿಲ್ಲಾಂತ ಡಿಪ್ರೆಸ್ ಆಗಲ್ಲ.

ಲಂ: ಹಾಗಾದ್ರೆ ಏನು ಬೇಡ ಅಂತಾ ಸುಮ್ಮನಿರಬಹುದಿತ್ತಲ್ಲ?

❑ ಅದು ಹಾಗಲ್ಲ, ರಾಜಕೀಯದಲ್ಲಿ ನಾನು ಎಂದೂ ಈ ಥರಾ betrayal, ವಂಚನೆ ಕಂಡಿರಲಿಲ್ಲ, ಆದ್ದರಿಂದಲೇ ಈ ಟರ್ಮ್ ನಂತರ ರಾಜಕೀಯಾನೇ ಬಿಡಬೇಕೂಂತ ಇದ್ದೆ. ಆದರೆ ಯಾವಾಗ ನನ್ನನ್ನು ರಾಜಕೀಯವಾಗಿ ಮುಗಿಸಲು ಸಂಚು ಮಾಡಿದರೋ ಆಗ ಇದೊಂದು ಕೊನೇ ಹೋರಾಟ ಮಾಡಬೇಕು ಅನ್ನಿಸಿತು.

ನನಗೆ manupulation ಗೊತ್ತಿಲ್ಲ, ರಾಜಕೀಯ ತಂತ್ರಗಾರಿಕೆ ಮಾಡಿದೋನಲ್ಲ, ಆದರೂ ಇಂತದ್ದನ್ನೆಲ್ಲಾ ಮಾಡೋರ ವಿರುದ್ಧ ಹೋರಾಟಕ್ಕೆ ರೆಡಿಯಾಗಿದ್ದೀನಿ (ನಗು).



ಪತ್ನಿ ಪಾರ್ವತಮ್ಮನೊಂದಿಗೆ

ಲಂ: ಈ ಸರ್ಕಾರ ಉಳಿಯುತ್ತಾ? ಮುಂದೆ ಎಲೆಕ್ಷನ್ ಬಂದಾಗ ನಿಮ್ಮ ಅಜೆಂಡಾ ಏನಿರುತ್ತೆ?

❑ ಸರ್ಕಾರ ಸದ್ಯಕ್ಕೆ ಉಳಿದಿದೆ. ಆದರೆ ಟರ್ಮ್ ಮುಗಿಸಲ್ಲ ಅನ್ನಿಸುತ್ತೆ, ಯಡಿಯೂರಪ್ಪ ಮುಖ್ಯಮಂತ್ರಿ ಆಗಲು ಅವರು ಬಿಡಲ್ಲ.

ಎಲೆಕ್ಷನ್ ಬಂದಾಗ ಕಾಂಗ್ರೆಸ್‌ಗೆ ಅಧಿಕಾರ ಕೊಡಿ. ಎಲ್ಲರಿಗೂ ನ್ಯಾಯ ಸಿಗೊ ಸರ್ಕಾರ ಕೊಡ್ತೀವಿ. ಕೋಮುವಾದಿಗಳ ಕೈಗೆ ಅಧಿಕಾರ ಕೊಡಬೇಡಿ. ಸಮ್ಮಿಶ್ರ ಸರ್ಕಾರ ವಿಫಲ ಆಗಿದೆ ಅಂತಾ ಕೇಳ್ತೀವಿ.

ಲಂ: ಕರ್ನಾಟಕ ಅಭಿವೃದ್ಧಿ ಬಗ್ಗೆ ನಿಮಗೆ ಯಾವ ತರದ ಚಿಂತನೆಗಳಿವೆ?

❑ ಕರ್ನಾಟಕಾನಾ ಒಂದು ಸಮೃದ್ಧ ನಾಡು ಮಾಡಲು ಬೇಕಾದಷ್ಟು ಸಂಪನ್ಮೂಲ ಇದೆ. ಸರ್ಕಾರ ಬಳಸಿಕೋಬೇಕು. ನೀರು, ಖನಿಜ ಎಲ್ಲಾದರ ಬಗ್ಗೆನೂ ಸರಿಯಾದ ಪಾಲಿಸಿ ಮಾಡಿದರೆ ಸಾವಿರಾರು ಕೋಟಿ ಜನರೇಟ್ ಮಾಡಬಹುದು. ಕನಿಷ್ಠ ಏಳೆಂಟು ಸಾವಿರ ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಹೊಸದಾಗಿ ಆಗುತ್ತೆ. ನದಿ ನೀರನ್ನು ಸರಿಯಾಗಿ ಬಳಸಬೇಕು. ಇದೆಲ್ಲಾ ಆಗಿಲ್ಲ. ತಮಿಳುನಾಡಿನವರು ಬಹಳ ಹಿಂದೇನೇ ಇದನ್ನೆಲ್ಲಾ ಮಾಡಿಕೊಂಡರು. ಆದರೆ ನಾವು ವರ್ಷಕ್ಕೆ 4 ರಿಂದ 5 ಸಾವಿರ ಕೋಟಿ ಖರ್ಚು ಮಾಡಬೇಕಾಗಿದೆ. 65 ನೇ ಇಸವೀಲಿ 100 ಕೋಟಿ ಅಂತ ಶುರುವಾದ ಕೃಷ್ಣಾ ಯೋಜನೆ ಈಗಲೂ ಮುಗಿದಿಲ್ಲ, ಖರ್ಚು 3 ಸಾವಿರ ಕೋಟಿ ಮೀರಿದೆ. ವರಾಹೀದೂ ಅಷ್ಟೇ 18 ಕೋಟಿ ಅಂತಾ ಶುರು ಮಾಡಿ ಈಗ 1400 ಕೋಟಿ ಆಗಿದೆ.

ಸರ್ಕಾರ ಖರ್ಚು ಮಾಡೋದ್ರಲ್ಲಿ 40 ಪರ್ಸೆಂಟ್ ಕೆಲಸಕ್ಕಾದರೆ ಉಳಿದ 60 ಸೋರಿಕೆ ಆಗ್ತಿದೆ.

ಲಂ: ವಿಶ್ವ ಬ್ಯಾಂಕ್ WTO ಗಳೆಲ್ಲಾ ಇರೋವಾಗ ನಮಗೆ ಒಂದು ಸ್ವತಂತ್ರ ಆರ್ಥಿಕ ನೀತಿ ಇರೋಕೆ ಸಾಧ್ಯಾನಾ?

❑ ಸಂಪೂರ್ಣವಾಗಿ ಇರಲ್ಲ. ಇದನ್ನೆಲ್ಲಾ ದೇಶದ ಮಟ್ಟದಲ್ಲೇ ಒಪ್ಪಿಕೊಂಡಾಗಿದೆ. ಅದು ರಾಜ್ಯಗಳಿಗೂ ಅನ್ವಯ ಆಗುತ್ತೆ. ನಮ್ಮದು ಫೆಡರಲ್ ಸ್ಟೇಟ್. ನಾವು ಪ್ರತ್ಯೇಕವಾಗಿ ಇರೋಕಾಗಲ್ಲ. ವಿದೇಶಿ ಬಂಡವಾಳ ಬಂದಾಗ ನಮ್ಮ ಜನಗಳ ಕೆಲಸ ಕಿತ್ತುಕೊಳ್ಳದಂತೆ ನೋಡಿಕೋಬಹುದು. ಆದ್ರೆ ನಮ್ಮ ಷರತ್ತು ಕಂಡೀಷನ್ ಅವರು ಪಾಲಿಸಲೇಬೇಕು ಅನ್ನೋಕಾಗಲ್ಲ. ಕೆಲವು ಸಾರಿ ಅವರು ಬೇಡಾ ಅಂದ್ರೂ ರೈತರಿಗೆ ಕರೆಂಟ್ ಸಬ್ಸಿಡಿ ಕೊಡ್ತಿದ್ದೀವಲ್ಲ.

ಲಂ: ಮುಂದೆ ಕಾಂಗ್ರೆಸ್ ಗೆದ್ದು ಅಧಿಕಾರ ಹಿಡಿದರೆ ನಿಮ್ಮ ಸ್ಥಾನ ಏನು?

❑ ಗೊತ್ತಿಲ್ಲ, ಹೈಕಮಾಂಡ್ ಏನೇ ತೀರ್ಮಾನ ತಗೊಂಡರೂ ರಾಜ್ಯ ಶಾಸಕಾಂಗದ ಅಭಿಪ್ರಾಯ ತಗೋತಾರೆ.

ಲಂ: ಹಾಗಾದೆ, ಕಾಂಗ್ರೆಸ್‌ನೊಳಗೆ ಅಂತರಿಕ ಪ್ರಜಾಪ್ರಭುತ್ವ ಇದೇ ಅಂತೀರಾ!

❑ ಖಂಡಿತಾ.... ನಾನು ಕಾಂಗ್ರೆಸ್ ಸೇರೋ ಮೊದಲು ಕರ್ನಾಟಕ ಪಾರ್ಟಿಯ ಎಲ್ಲರ ಅಭಿಪ್ರಾಯ ಕೇಳಿದ ನಂತರವೇ ಸೋನಿಯಾಗಾಂಧಿಯವರು ಆಗಲಿ ಅಂದ್ರು. ಇದು ಅಂತರಿಕ ಪ್ರಜಾಪ್ರಭುತ್ವಾನೆ.

ಲಂ: ಒಬ್ಬ ರಾಜಕಾರಣಿಯಾಗಿ ಸೋನಿಯಾ ಹೇಗನ್ನಿಸುತ್ತಾರೆ?

❑ ಸೋನಿಯಾ ಗಾಂಧಿ ಪಾರ್ಟಿನಾ ಚೆನ್ನಾಗಿ ಕಟ್ಟುತ್ತಿದ್ದಾರೆ. ಅವರ ಪರ ಜನಾದೇಶ ಇದ್ದಾಗಲೂ ಎಂಪಿಗಳು ಆರಿಸಿದಾಗಲೂ ಪ್ರಧಾನಿ ಆಗಲ್ಲ ಅಂದ್ರು. ಲಾಭದ ಹುದ್ದೆ ವಿವಾದ ಬಂದಾಗ ತಾನೇ ಮೊದಲು ರಾಜೀನಾಮೆ ಕೊಟ್ಟು ಮತ್ತೆ ಚುನಾವಣೇಲಿ ಗೆದ್ದು ಬಂದ್ರು, ಅವರಿಗೆ Democratic values ಬಗ್ಗೆ ಗೌರವ ಇದೆ.

ಲಂ: ಚಾಮುಂಡೇಶ್ವರಿ ಉಪಚುನಾವಣೆ ಯಾವಾಗ?

❑ ಅಕ್ಟೋಬರ್-ನವೆಂಬರ್‌ಗೆ ಅನ್ನಿಸುತ್ತೆ.

ಲಂ: ನಿಮ್ಮ ಪ್ರತಿಸ್ಪರ್ಧಿ ಯಾರಾಗಬಹುದು!

❑ ಶ್ರೀಕಂಠದತ್ತ ಒಡೆಯರ್ ಪತ್ನಿಯವರನ್ನು ನಿಲ್ಲಿ ಅಂತ ಕೇಳಿ ಇಲ್ಲ ಅನ್ನಿಸಿಕೊಂಡಿದ್ದಾರೆ. ರಾಜಶೇಖರ ಮೂರ್ತಿ, ರೇವಣ್ಣಸಿದ್ಧಯ್ಯ ಆಗಲ್ಲ ಅಂದಿದ್ದಾರೆ. ಸುತ್ತೂರು ಸ್ವಾಮಿಗಳ ತಮ್ಮನ್ನು ಕೇಳಿದರೂ ಅಂತ ಸುದ್ದಿ ಇದೆ.

ಲಂ: ಆಮೇಲೆ?

❑ (ದೃಢವಾಗಿ) ಅವರು ಭಾರಿ ಹಣ ಖರ್ಚು ಮಾಡುತ್ತಾರೆ. ದೇವೇಗೌಡರು ಕನಿಷ್ಠ ಹದಿನೈದು ದಿನ ಅಲ್ಲೇ ಕ್ಯಾಂಪ್ ಮಾಡ್ತಾರೆ. ಕುಮಾರಸ್ವಾಮಿ, ರೇವಣ್ಣ ಎಲ್ಲಾ ಬರ್ತಾರೆ, ಲಿಂಗಾಯಿತ ಕ್ಯಾಂಡಿಡೇಟ್ ಹಾಕಿ ಒಕ್ಕಲಿಗರ ಓಟೂ, ನಾಯಕರ ಓಟೂ ಎಳೆದುಕೊಂಡು ನನ್ನನ್ನು ಸೋಲಿಸಬೇಕೂಂತ ಅವರ ಪ್ಲಾನ್ ಇದೆ. ಆದರೆ ನನ್ನ ಸೋಲಿಸೋ ಕ್ಯಾಂಡಿಡೇಟನ್ನು ಇನ್ನು ಹುಡುಕುತ್ತಿದ್ದಾರೆ.

ಲಂ: ಕುಮಾರಸ್ವಾಮಿ ಈಗಲೇ ನಿಮ್ಮ ಕ್ಷೇತ್ರಕ್ಕೆ ಹೋಗಿ ಹಳ್ಳೀ ಮನೆಲಿದ್ದು ಬಂದಿದ್ದಾರೆ. ಅದೂ ಎಲೆಕ್ಷನ್ ತಂತ್ರಾನಾ?

❑ ಅವರು ಅವತ್ತು ನಂಜನಗೂಡಿನಲ್ಲಿ ಉಳೀಬೇಕಿತ್ತು. ಆದ್ರೂ ನನ್ನ ಕ್ಷೇತ್ರದ ಚಿಕ್ಕಾನೆ ಅನ್ನೋ ಊರಿಗೆ ಹೋಗಿ ಕಂಟ್ರಾಕ್ಟರ್ ಒಬ್ಬರ ಮನೇಲಿ ರಾತ್ರಿ ಉಳಿದರು. ಇದಕ್ಕೆ ಎರಡು ಕಾರಣ ಇದೆ

ಒಂದು 150 ಕೋಟಿ ಗಣಿ ಲಂಚದಿಂದ ಜನರ ಗಮನ ಬೇರೆ ಕಡೆ ತಿರುಗಿಸಿಕೊಳ್ಳುವುದು. ಇನ್ನೊಂದು ಚೈ, ಎಲೆಕ್ಷನ್. ಕುಮಾರಸ್ವಾಮಿ ಅಲ್ಲಿಗೆ ಹೋಗಿ ಬಾಯಿಗೆ ಬಂದಂಗೆ ಮಾತಾಡಿ ಬಂದಿದ್ದಾರೆ

ಲಂ: ನೀವು [illegible]?

❑ (ನಗುತ್ತಾ) ಖಂಡಿತಾ ಗೆದ್ದೇ ಗೆಲ್ತೀನಿ

ಚೆಡ್ಡಿ ಶಾಸಕರ ಹೈಜಾಕ್‌ಗೆ ಕುಮಾರಣ್ಣನ ತಂತ್ರ

ಜನಾರ್ಧನ ರೆಡ್ಡಿ ಸ್ಫೋಟಿಸಿದ 'ಗಣಿ ಬಾಂಬ್' ಬುಸ್ಸೆಂದ ನಂತರ ಸದ್ಯಕ್ಕೆ ಎಲ್ಲವೂ ಸರಿಹೋಯ್ತು ಎಂದುಕೊಂಡಿದ್ದ ರಾಜ್ಯ ಬಿಜೆಪಿ ಮುಖಂಡರಿಗೆ, ಮುಖ್ಯಮಂತ್ರಿ ಕುಮಾರಸ್ವಾಮಿ ಒಳಗಿಂದೊಳಗೆ ತನ್ನ ಪಕ್ಷದ ಒಕ್ಕಲಿಗ ಜನಾಂಗ ಸೇರಿದಂತೆ ಇನ್ನಿತರ ಅತೃಪ್ತ ಶಾಸಕರನ್ನು ಜೆಡಿಎಸ್‌ಗೆ ಸೆಳೆಯಲು ಯತ್ನಿಸುತ್ತಿರುವ ಯೋಜನೆ ರೂಪಿಸಿರುವುದು ನುಂಗಲಾರದ ತುತ್ತಾಗಿದೆ. ಎಲ್ಲವೂ ಅಂದುಕೊಂಡಂತೆ ನಡೆದರೆ, ಮುಂದೆ ರಾಜ್ಯದಲ್ಲಿ ಮಧ್ಯಂತರ ಚುನಾವಣೆ ಎದುರಾಗುವ ವೇಳೆಗೆ ಬಿಜೆಪಿಯಲ್ಲಿರುವ ಕೆಲವು ಒಕ್ಕಲಿಗ ಶಾಸಕರು ಸೇರಿದಂತೆ ಬಹುತೇಕ ಶಾಸಕರು ಜೆಡಿಎಸ್ ಸೇರುವುದು ಖಚಿತವಾಗಿದೆ.


ಕುಮಾರಸ್ವಾಮಿ

ಕುಮಾರಸ್ವಾಮಿ ಬಿಜೆಪಿಯ ಶಾಸಕರನ್ನು ಹೈಜಾಕ್ ಮಾಡಲು ಯತ್ನಿಸುತ್ತಿರುವುದು ಇದೇ ಮೊದಲಲ್ಲ, ಬಿಜೆಪಿ ಶಾಸಕ ಅನಿಲ್ ಲಾಡ್ ಮೂಲಕ ಅಂದಿನ ವಿರೋಧಪಕ್ಷದ ನಾಯಕ ಯಡಿಯೂರಪ್ಪನವರನ್ನೇ ಪಕ್ಷಾಂತರಕ್ಕೆ ಪ್ರಚೋದಿಸಿದ್ದರು. ಅಂದು ಯಡಿಯೂರಪ್ಪನವರಿಗೆ ನಿರೀಕ್ಷಿತ ಶಾಸಕರ ಬೆಂಬಲ ದೊರೆಯದಿದ್ದರಿಂದ, ಬಿಜೆಪಿ ಹೋಳು ಮಾಡುವ ಅಜೆಂಡಾದಿಂದ ಹಿಂದೆ ಅವರು ಸರಿದಿದ್ದರು.

ಆದರೆ ಕಳೆದ ಜನವರಿಯಲ್ಲಿ ನಡೆದ ಕ್ಷಿಪ್ರ ಕ್ರಾಂತಿಯ ನಂತರ ಕುಮಾರಣ್ಣನೇ ರಾಜ್ಯದ ಮುಖ್ಯಮಂತ್ರಿಯಾದರು. ಆಗ ಮಾಡಿದ ಮೊದಲ ಕೆಲಸ ಬಿಜೆಪಿಯಲ್ಲಿ ಭಿನ್ನಮತ ಶಾಶ್ವತವಾಗಿರುವಂತೆ ನೋಡಿಕೊಳ್ಳುವುದೇ ಆಗಿತ್ತು. ಅದಕ್ಕೆ ಪೂರಕವಾಗಿ ಸಂಪುಟದಲ್ಲಿ ಸಂಸದ ಅನಂತ್‌ಕುಮಾರ್ ನಿಷ್ಠರನ್ನು ಯಡ್ಡಿ ಮುಖಾಂತರ ಸಂಪುಟದಿಂದ ಹೊರಗಿಡಿಸುವಲ್ಲಿ ಯಶಸ್ವಿಯಾಗಿಬಿಟ್ಟರು.

[illegible]

ಒಂದು ಕಡೆ ಉಪಮುಖ್ಯಮಂತ್ರಿ ಯಡಿಯೂರಪ್ಪರ ಮೂಲಕ ಸಂಸದ ಅನಂತ್‌ಕುಮಾರ್ ನಿಷ್ಠರನ್ನು ಸಂಪುಟದಿಂದ ಹೊರಗಿಟ್ಟು ಬಿಜೆಪಿಯಲ್ಲಿ ಭಿನ್ನಮತ ಹುಟ್ಟು ಹಾಕಿದ ಕುಮಾರಸ್ವಾಮಿ ಮತ್ತೊಂದೆಡೆ ಅದೇ ಅತೃಪ್ತ ಶಾಸಕರನ್ನು ಕರೆದು ಅವರ ಕ್ಷೇತ್ರಕ್ಕೆ ಆಗಬೇಕಾದ ಅಭಿವೃದ್ಧಿ ಕೆಲಸಗಳಿಗೆ ಹಣ ಬಿಡುಗಡೆ ಮಾಡಿ, ತಮ್ಮದೇ ಪಕ್ಷದ ಉಪಮುಖ್ಯಮಂತ್ರಿಯ ವಿರುದ್ಧ ಆ ಪಕ್ಷದ ಶಾಸಕರನ್ನೇ ಎತ್ತಿ ಕಟ್ಟತೊಡಗಿದರು.

ಹೀಗೆ ಬಿಜೆಪಿಯಲ್ಲಿ ಪರಸ್ಪರ ಬದ್ಧದ್ವೇಷಿಗಳಾದ ಯಡಿಯೂರಪ್ಪ ಹಾಗೂ ಅನಂತಕುಮಾರ್‌ರನ್ನು ಶಾಶ್ವತ ಶತ್ರುಗಳಾಗುವಂತೆ ಮಾಡುವ ಕಾಯಕದಲ್ಲಿ ಯಶಸ್ವಿಯಾದ ಕುಮಾರಸ್ವಾಮಿ, ಆನಂತರ ಆರಂಭಿಸಿದ್ದೇ ಬಿಜೆಪಿಯ ಶಾಸಕರನ್ನು ಸಾಮೂಹಿಕವಾಗಿ ಜೆಡಿಎಸ್‌ಗೆ ಕರೆತರುವ ಪ್ರಯತ್ನ.

[illegible]

ಇವತ್ತು ಬಿಜೆಪಿಯ 79 ಶಾಸಕರ ಪೈಕಿ ಒಕ್ಕಲಿಗ ಜನಾಂಗದಿಂದ ಆಯ್ಕೆಯಾಗಿರುವವರು ಕೇವಲ 9 ಮಂದಿ. ಒಕ್ಕಲಿಗರು ಬಲಾಢ್ಯವಾಗಿರುವ ಹಳೇ ಮೈಸೂರಿನ ಜಿಲ್ಲೆಗಳಲ್ಲಿ ಬಿಜೆಪಿಗೆ ಅಂತಹ ಗಟ್ಟಿ ನೆಲೆಯೇನೂ ಇಲ್ಲ.

ಕಳೆದ ಚುನಾವಣೆಯಲ್ಲಿ ರಾಜ್ಯದಲ್ಲಿ ಬೀಸಿದ ಕಾಂಗ್ರೆಸ್ ವಿರೋಧಿ ಅಲೆಯಿಂದ ಆಯ್ಕೆಯಾದ ಬಿಜೆಪಿಯ ಒಕ್ಕಲಿಗ ಅಭ್ಯರ್ಥಿಗಳಾದ ಸಿ.ಟಿ. ರವಿ, ಅರಗ ಜ್ಞಾನೇಂದ್ರ, ಶೃಂಗೇರಿಯ


ಶಂಕರಲಿಂಗೇಗೌಡ

ಜೀವರಾಜ, ಉತ್ತರಹಳ್ಳಿಯ ಅಶೋಕ್, ಬನ್ನೂರಿನ ಸುನೀತ ವೀರಪ್ಪಗೌಡ, ಮೈಸೂರು ಚಾಮರಾಜ ಕ್ಷೇತ್ರದ ಶಂಕರಲಿಂಗೇಗೌಡ, ಕಳ್ಳಂಬೆಳ್ಳದ ಕಿರಣ್‌ಕುಮಾರ್, ಪುತ್ತೂರಿನ ಶಕುಂತಲಾ ಶೆಟ್ಟಿ, ಬಂಟ್ವಾಳದ ನಾಗರಾಜ ಶೆಟ್ಟಿ ಪೈಕಿ ಅಶೋಕ್, ಅರಗ ಜ್ಞಾನೇಂದ್ರ ಮತ್ತು ಶಂಕರಲಿಂಗೇಗೌಡ ಸ್ವಂತ ಬಲದ ಮೇಲೆ ಸತತ ಮೂರು ಬಾರಿ ವಿಧಾನಸಭೆಗೆ ಆಯ್ಕೆಯಾಗಿ ಬಂದವರು. ಉಳಿದವರ್‍ಯಾರು ಮುಂದಿನ ಚುನಾವಣೆಯಲ್ಲಿ ಆಯ್ಕೆಯಾಗುವುದಿರಲಿ, ಠೇವಣಿ ಉಳಿಸಿಕೊಳ್ಳುವುದು ಕಷ್ಟ.

ಇಂತಹ ಸನ್ನಿವೇಶದಲ್ಲಿ ಸಿ.ಟಿ. ರವಿ, ಜೀವರಾಜ್, ಸುನೀತ ವೀರಪ್ಪ ಗೌಡ, ಕಿರಣ್‌ಕುಮಾರರಂತಹ ಅತೃಪ್ತ ಒಕ್ಕಲಿಗ ಶಾಸಕರನ್ನು ತಮ್ಮತ್ತ ಸೆಳೆದುಕೊಂಡ ಕುಮಾರಸ್ವಾಮಿ, ತನಗಿರುವ ಒಕ್ಕಲಿಗ ಜಾತಿಯ ಟ್ರಂಪ್‌ಕಾರ್ಡ್ ಜೊತೆಗೆ ಮುಂದಿನ ಚುನಾವಣೆಯಲ್ಲಿ ಜೆಡಿಎಸ್‌ನಿಂದ ಟಿಕೆಟ್ ನೀಡುವ ಗ್ಯಾರಂಟಿ ಮೇಲೆ ಈ ನಾಲ್ಕು ಮಂದಿಯನ್ನು ಜೆಡಿಎಸ್‌ಗೆ ಸೆಳೆಯಲು ಬಲೆ ಬೀಸಿದ್ದಾರೆ.


ಅಶೋಕ್

ಸಿ.ಟಿ. ರವಿ ಎಂಬ ಚೆಡ್ಡಿ ಚಿಕ್ಕಮಗಳೂರಿನಲ್ಲಿ ಹಿಂದೂ-ಮುಸ್ಲಿಮರ ಶ್ರದ್ಧಾ ಕೇಂದ್ರವಾಗಿದ್ದ ಬಾಬಾಬುಡನ್‌ಗಿರಿಯಲ್ಲಿ ವಿವಾದ ಹುಟ್ಟ ಹಾಕಿ, ಅದರಿಂದುಂಟಾದ ಕೋಮು ಭಾವನೆಯಿಂದಲೇ ಶಾಸಕನಾಗಿ ಆಯ್ಕೆಯಾದವನು, ಶೃಂಗೇರಿಯ ಜೀವರಾಜನದೂ ಇದೇ ಕತೆ.

ಆದರೆ ಈ ಇಬ್ಬರಿಗೂ ಈಗ ಬಾಬಾಬುಡನ್‌ಗಿರಿ ವಿವಾದವೇ ಮಗ್ಗಲ ಮುಳ್ಳಾಗಿ ಬಿಟ್ಟಿದೆ. ಬಾಬಾಬುಡನ್‌ಗಿರಿ ವಿವಾದಕ್ಕೆ ಸಂಬಂಧಿಸಿದಂತೆ ಹೈಕೋರ್ಟ್ ನೀಡಿದ ಆದೇಶದಿಂದ ತತ್ತರಿಸಿ ಹೋಗಿರುವ ಈ ಚೆಡ್ಡಿ ಶೂರರಿಗೆ ಈಗ ಮುಂದಿನ ಚುನಾವಣೆಗೆ ಇಶ್ಯೂಗಳೇ ಇಲ್ಲ. ಹಾಗಾಗಿಯೇ ಜೆಡಿಎಸ್ ಬಸ್ಸು ಏರಲು ತುದಿಗಾಲಲ್ಲೇ ನಿಂತಿದ್ದಾರೆ. ಅದಕ್ಕೆ ಪೂರಕವೆಂಬಂತೆ ಖದೀಮ ಚೆಡ್ಡಿ ಶೂರ ಸಿ.ಟಿ. ರವಿ ಕುಮಾರಣ್ಣ ಕೊಟ್ಟ ಕಾಂಪ್ಲಿಮೆಂಟರಿ ಪಾಸ್ ಪಡೆದು ಅಮೆರಿಕದಲ್ಲಿ ನಡೆಯುತ್ತಿರುವ 'ಅಕ್ಕ' ಸಮ್ಮೇಳನದಲ್ಲಿ ಭಾಗವಹಿಸುತ್ತಿದ್ದಾನೆ.


ಸಿ.ಟಿ.ರವಿ

ಇನ್ನು ಬನ್ನೂರಿನ ಶಾಸಕಿ ಸುನೀತಾ ವೀರಪ್ಪಗೌಡ ಎಂಬ ಹೆಣ್ಣುಮಗಳು ಯಾವ ಪಕ್ಷದಲ್ಲೂ ಶಾಶ್ವತ ನೆಲೆ ಕಂಡುಕೊಳ್ಳುವಳಲ್ಲ, ರಾಜಕಾರಣದ ಆರಂಭದಲ್ಲಿ ಕಾಂಗ್ರೆಸ್‌ನಿಂದ ಮೈಸೂರು ಜಿಲ್ಲಾ ಪಂಚಾಯ್ತಿ ಅಧ್ಯಕ್ಷೆಯಾದ ಈಕೆ, ನಂತರ ಜೆಡಿಎಸ್‌ಗೆ ಪಕ್ಷಾಂತರ ಮಾಡಿದರೂ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್ ಈಕೆಗೆ ಟಿಕೆಟ್ ನಿರಾಕರಿಸಿದಾಗ ಬಿಜೆಪಿಯಿಂದ ಆಯ್ಕೆಯಾಗಿದ್ದರು. ಆದರೆ ಶಾಸಕಿಯಾಗುತ್ತಿದ್ದಂತೆಯೇ ಕುಮಾರಣ್ಣನ ಒಡ್ಡೋಲಗದಲ್ಲಿ ಕಾಣಿಸಿಕೊಂಡ ಈಕೆ ಇಂದು ಬಿಜೆಪಿಯ ವಲಯದಿಂದ ಶಾಶ್ವತವಾಗಿಯೇ ಕಣ್ಮರೆಯಾಗಿದ್ದಾರೆ. ಕಳ್ಳಂಬೆಳ್ಳದ ಶಾಸಕ ಕಿರಣ್ ಕುಮಾರ್ ಈಗಾಗಲೇ ಕುಮಾರಣ್ಣನ ಹಿಂದೆ ಬಿದ್ದಿದ್ದಾನೆ.


ಎಚ್.ಎಸ್.ಎಸ್.ಗೆ ಗಾಳ

ಮೈಸೂರಿನ ಶಂಕರಲಿಂಗೇಗೌಡ ಮೂರು ಬಾರಿ ವಿಧಾನಸಭೆಗೆ ಆಯ್ಕೆಯಾದವರು. ಒಕ್ಕಲಿಗರ ಪ್ರಾಬಲ್ಯವಿರುವ ಮೈಸೂರು, ಮಂಡ್ಯ ಜಿಲ್ಲೆಯಲ್ಲಿ ಬಿಜೆಪಿ ಏನಾದರೂ ತನ್ನ ಸಂಘಟನೆ ಬಲಪಡಿಸುವ ಬಗ್ಗೆ ಆಲೋಚಿಸಿದ್ದರೆ, ಸಮ್ಮಿಶ್ರ ಸರ್ಕಾರದಲ್ಲಿ ಶಂಕರಲಿಂಗೇಗೌಡ ಗ್ಯಾರಂಟಿಯಾಗಿ ಮಂತ್ರಿಯಾಗುತ್ತಿದ್ದರು.

ಆದರೆ ಶಂಕರಲಿಂಗೇಗೌಡ ಸಂಪುಟಕ್ಕೆ ಬರುವುದನ್ನು ಉಪಮುಖ್ಯಮಂತ್ರಿ ಯಡ್ಡಿ ಮೂಲಕ ತಡೆಗಟ್ಟುವಲ್ಲಿ ಯಶಸ್ವಿಯಾದ ಕುಮಾರಸ್ವಾಮಿ ಈಗ ಒಳಗಿಂದೊಳಗೇ ಗೌಡರನ್ನು ಏಕಾಂತದಲ್ಲಿ ಕೂರಿಸಿಕೊಂಡು ಬಿಜೆಪಿಯಲ್ಲಿ ನಮ್ಮ ಜನಾಂಗದಿಂದ ಆಯ್ಕೆಯಾದ ಸೀನಿಯರ್ ನೀವು, ನಿಮಗೆ ಯಡಿಯೂರಪ್ಪ ಕೈಕೊಟ್ಟರು. ಆ ಪಕ್ಷದಲ್ಲಿ ಒಕ್ಕಲಿಗರಿಗೆ ಭವಿಷ್ಯದಲ್ಲಿ ಅದಕ್ಕೆ ಉದಾಹರಣೆ ಎಚ್.ಎನ್. ನಂಜೇಗೌಡ, ಜೀವರಾಜ್ ಆಳ್ವ, ವೆಂಕಟಗಿರಿಗೌಡ ಎಂದು ತಿದಿ ಒತ್ತುತ್ತಿದ್ದಾರಂತೆ.

ಆರೋಗ್ಯ ಮಂತ್ರಿ ಬಿಜೆಪಿಯ ಅಶೋಕ್ ಪ್ರತಿನಿಧಿಸುವ ಉತ್ತರಹಳ್ಳಿ ಕ್ಷೇತ್ರದ ಮೇಲೆ ಕುಮಾರಸ್ವಾಮಿಗೆ ವಿಶೇಷ ಮಮತೆ. ಅದಕ್ಕೆ ಕಾರಣ ಕುಮಾರಣ್ಣನ ಶಿಷ್ಯ ಪಂಟರ್ ಕಬಡ್ಡಿ ಬಾಬು ನಡೆಸಿರುವ ರಿಯಲ್ ಎಸ್ಟೇಟ್ ಧಂದೆ ಎಲ್ಲವೂ ಈ ಕ್ಷೇತ್ರದ ವ್ಯಾಪ್ತಿಯಲ್ಲಿಯೇ. ಜೊತೆಗೆ ಇದು ಒಕ್ಕಲಿಗರ ಪ್ರಾಬಲ್ಯವಿರುವ ಕ್ಷೇತ್ರವು ಹೌದು.

ತನ್ನ ಬೆನ್ನಿಗಿರುವ ಜಾತಿ ಬೆಂಬಲ, ಜೊತೆಗೆ ಕೈಲಿರುವ ರಿಯಲ್ ಎಸ್ಟೇಟ್ ಹಣದ ಥೈಲಿಯಿಂದಲೇ ಸತತ ಮೂರು ಬಾರಿ ಇಲ್ಲಿಂದ ಆಯ್ಕೆಯಾದ ಅಶೋಕ್ ಹಿಂದಿನಿಂದಲೂ ಸಂಸದ ಅನಂತಕುಮಾರ್ ಬಣದಲ್ಲಿ ಗುರುತಿಸಿಕೊಂಡವರು. ಆದರೆ ಸಮ್ಮಿಶ್ರ ಸರ್ಕಾರದ ಸಂಪುಟದಲ್ಲಿ ಮಂತ್ರಿಯಾಗುವ ಕನಸು ಕ್ಷೀಣಿಸತೊಡಗಿದಾಗ, ಏಕಾಏಕಿ ಯಡ್ಡಿ ಬಣದಲ್ಲಿ ಗುರುತಿಸಿಕೊಂಡು ಪೊಗದಸ್ತಾದ ಆರೋಗ್ಯ ಇಲಾಖೆಯನ್ನೇ ಪಡೆದ ಅಶೋಕ್ ಈಗ ಕುಮಾರಸ್ವಾಮಿ ವಲಯದಲ್ಲಿ ಗುರುತಿಸಿಕೊಳ್ಳುತ್ತಿದ್ದಂತೆ ಯಡ್ಡಿಯನ್ನೇ ಕ್ಯಾರೇ ಎನ್ನುತ್ತಿಲ್ಲ....


ಯಡಿಯೂರಪ್ಪ

ಅಶೋಕ್ ಇಂದು ಕುಮಾರಸ್ವಾ[…] ಜೊತೆ ಗುರುತಿಸಿಕೊಳ್ಳಲು ಕಾರಣವ[…] ಇದೆ. ಇವತ್ತು ಉತ್ತರಹಳ್ಳಿ ಕ್ಷೇತ್ರದಾದ್ಯಂತ ಇರುವ ಖರಾಬು ಭೂಮಿ, ಸರ್ಕಾರಿ ಗೋಮಾಳ, ಅ[…] ಭೂಮಿಯನ್ನೆಲ್ಲಾ ಒತ್ತುವರಿ ಮಾಡಿಕೊಂಡಿರುವ ಮಂತ್ರಿ ಅಶೋಕ್‌ಗೆ, ಆ ಭೂಮಿಯೆಲ್ಲಾ ರೆಗ್ಯೂಲರೈಸ್ ಆಗಬೇಕಾದರೆ ಕುಮಾರಣ್ಣನ ಕೃಪೆ ಬೇಕೇ ಬೇಕು. ಜೊತೆಗೆ ಅಶೋಕ್ ಯಾವುದೇ ಪಾರ್ಟಿಯಿಂದ ನಿಂತರೂ ಗೆಲ್ಲಲು ಬೇಕಾದ ಹಣಬಲವೂ ಇದೆ.

ಇನ್ನು ಬಂದರು ಖಾತೆ ಸಚಿವ ನಾಗರಾಜ […]ಯೊಂದಿಗೆ ಗಣಿಗಾರಿಕೆ ವ್ಯವಹಾರದಲ್ಲಿ ಗಳಸ್ಯ-ಕಂ[…] ವಿರುವ ಕುಮಾರಣ್ಣನಿಗೆ ಅದೇಕೋ ತೀರ್ಥಹಳ್ಳಿ[…] ಅರಗಜ್ಞಾನೇಂದ್ರ ಹಾಗೂ ಪುತ್ತೂರಿನ ಶಕುಂತ[…] ಶೆಟ್ಟಿಯನ್ನು ಬುಟ್ಟಿಗೆ ಹಾಕಿಕೊಳ್ಳಲು ಇನ್ನೂ ಸಾ[…]ವಾಗಿಲ್ಲ.

ಬೇರೆಯವರಿಗೂ ಆಮಿಷ...

ಕುಮಾರಸ್ವಾಮಿ ಕೇವಲ ಬಿಜೆಪಿಯ ಒಕ್ಕ[…] ಶಾಸಕರನ್ನು ಮಾತ್ರ ಜೆಡಿಎಸ್‌ನತ್ತ ಸೆಳೆಯ[…] ಯತ್ನಿಸುತ್ತಿಲ್ಲ, ಭಸ್ಮಾಸುರನ ಹಾಗೆ ಇಡೀ ಬಿಜೆಪಿಯ[…] ಆಪೋಶನ ತೆಗೆದುಕೊಳ್ಳಲು ಸಜ್ಜಾಗಿದ್ದಾರೆ.

ಹೊನ್ನಾಳಿಯ ರೇಣುಕಾರಾಧ್ಯ, ಹೊಳೆಹೊನ್ನೂ[…] ಬಸವಣ್ಣಪ್ಪ, ಗುಲ್ಬರ್ಗಾದ ರಾಜೇಂದ್ರ, ವ[…] ಮಾಲೂರಿನ ಕೃಷ್ಣಯ್ಯ ಶೆಟ್ಟಿ, ಎಚ್.ಡಿ. ಬಸವರಾ[…] ನಿರ್ಮಲಕುಮಾರ್ ಸುರಾನ, ಸೊಗಡು ಶಿವಣ್ಣ, ಬ[…] ಪುರದ ಪಟ್ಟಣಶೆಟ್ಟಿ, ಶಿವಾನಂದ ನಾಯ್ಕ, ಮುರುಗೇ[…] ನಿರಾಣಿ, ಎಸ್.ಕೆ. ಪಟ್ಟಣಶೆಟ್ಟಿ, ಧಾರವಾಡದ ಚಿಕ್ಕನಗೌ[…] ಮುಂತಾದವರಿಗೆಲ್ಲ 1 ಕೋಟಿ ರೂಪಾಯಿ ಜೊ[…] ಟಿಕೆಟ್ ಗ್ಯಾರಂಟಿಯ ಆಮಿಷವೊಡ್ಡಿ ಇಡೀ ಬಿಜೆಪಿಯ[…] ಹೈಜಾಕ್ ಮಾಡಲು ಸಿದ್ಧವಾಗಿದ್ದಾರೆ.

ಅಡ್ಡಿಯಾದ ರೆಡ್ಡಿ ಬಾಂಬ್

ಆದರೆ ಒಳಗಿಂದೊಳಗೆ ಕುಮಾರಸ್ವಾಮಿ ನಡೆಸು[…] ಬಿಜೆಪಿಯ ಹೈಜಾಕ್ ಯತ್ನಕ್ಕೆ ಅಡ್ಡಿಯಾಗಿದ್ದು ಜನಾರ್ಧ[…] ರೆಡ್ಡಿ ಸಿಡಿಸಿದ ಗಣಿ ಬಾಂಬ್. ಒಂದು ವೇಳೆ ಜನಾರ್ಧ[…] ರೆಡ್ಡಿ ಗಣಿ ಬಾಂಬ್ ಸ್ಫೋಟಿಸದಿದ್ದರೆ ಕನಿಷ್ಠ 30 ರಿ[…] 32 ಶಾಸಕರು ಬಿಜೆಪಿಯಿಂದ ಸಿಡಿದು ಜೆಡಿಎಸ್ ಪಾಳಯಕ್ಕೆ ಹೋಗುತ್ತಿದ್ದುದು ಸತ್ಯವೆಂದು ಅ[…] ಪಕ್ಷದ ಮುಖಂಡರೇ ಒಪ್ಪಿಕೊಳ್ಳುತ್ತಾರೆ. ಆದರೂ ಕುಮಾರಸ್ವಾಮಿ ಛಲ ಬಿಡದ ತ್ರಿವಿಕ್ರಮನಂತೆ ತಮ್ಮ ಹೈಜಾಕ್ […] ಯತ್ನವನ್ನು ಮುಂದುವರಿಸಿದ್ದಾರೆ[…]


ಸುನೀತಾ ವೀರಪ್ಪಗೌಡ

-ಸ್ವಾಮಿಗೌ[…]

ಬಿಇಓ ಕಳ್ ಕೆಂಪಯ್ಯ ಸಸ್ಪೆಂಡಾದ

ಹಾಲಿ ಕೋ-ಜಾ ಸರ್ಕಾರವೇ ಹಗಲು ದರೋಡೆಯಲ್ಲಿ ನಿರತವಾಗಿದ್ದಾಗಲೂ ಅಧಿಕಾರಿಗಳ ಮಟ್ಟದಲ್ಲಿ ಕೆಲವು ಒಳ್ಳೇ ಕೆಲಸಗಳೂ ಆಗುತ್ತಿವೆ. ಶಿಕ್ಷಣ ಇಲಾಖೆ ಕಮಿಷನರ್ ವಿಜಯ ಭಾಸ್ಕರ್ ಇತ್ತೀಚೆಗೆ ಶಾಲಾ ಶಿಕ್ಷಕರ ಹುದ್ದೆ ನೇಮಕಾತಿಗೆ 50 ಸಾವಿರ ಲಂಚ ಕೇಳಿದ್ದ ಬೆಂಗಳೂರು ಸೌತ್-2 ಶಿಕ್ಷಣಾಧಿಕಾರಿ, ಬಿಳಿದಾಳೆ ಕೆಂಪಯ್ಯನನ್ನು ಸಸ್ಪೆಂಡ್ ಮಾಡಿ ಅಂತಾದ್ದೊಂದು ಉತ್ತಮ ಕೆಲಸ ಮಾಡಿದ್ದಾರೆ.

ಕೆಂಪಯ್ಯ ಸಸ್ಪೆಂಡಾದ ಸುದ್ದಿ ಕೇಳಿದೇಟಿಗೆ ಬೆಂಗಳೂರು ದಕ್ಷಿಣದ 400 ಕ್ಕೂ ಹೆಚ್ಚು ಶಾಲೆಗಳ ಮ್ಯಾನೇಜ್‌ಮೆಂಟಿನವರಿಗೆ, ಸಾವಿರಾರು ಟೀಚರ್‌ಗಳಿಗೆ ಹಾಲು ಕುಡಿದಷ್ಟು ಸಂತೋಷವಾಗಿದೆ. ಎಂಎಲ್‌ಸಿ ಪುಟ್ಟಣ್ಣ ಮಾತ್ರ 'ನಿನ್ನ ಸಸ್ಪೆನ್‌ಷನ್ ಕ್ಯಾನ್ಸಲ್ ಮಾಡಿಸ್ತೀನಿ' ಅಂತಾ ಜೊತೆಗಾಕಿಕೊಂಡು ಓಡಾಡುತ್ತಿರುವುದನ್ನು ಬಿಟ್ಟರೆ ಕೆಂಪಯ್ಯನಿಗೆ ಹೀಗಾಗಬಾರದಿತ್ತು ಅಂದುಕೊಂಡವರು ಇಡೀ ಶಿಕ್ಷಣ ಇಲಾಖೆಯಲ್ಲಿ ಇವತ್ತು ಯಾರೂ ಇಲ್ಲ.



ಆ ರೀತಿ ಇತ್ತು ಶ್ರೀಮಾನ್ ಕೆಂಪಯ್ಯನವರ ಲಂಚದ ದರ್ಬಾರು.

ಕನಕಪುರ ತಾಲ್ಲೂಕಿನ ಬಿಳಿದಾಳೆಯವನಾದ ಕೆಂಪಯ್ಯ ಈ ಮೊದಲು ಐಟಿಐ ಹೈಸ್ಕೂಲಿನಲ್ಲಿ ಟೀಚರ್‍ರಾಗಿದ್ದ. ಅಲ್ಲಿ ಎಸ್‌ಎಸ್‌ಎಲ್‌ಸಿ ಹುಡುಗರ ಮಾಲ್ ಪ್ರಾಕ್ಟೀಸ್ ಹಗರಣದಲ್ಲಿ ಸಿಕ್ಕುಬಿದ್ದು ಸಸ್ಪೆಂಡಾಗಿದ್ದ. ಆಮೇಲೆ ಯಶವಂತಪುರದ ತನ್ನ ಅತ್ತೆ ಮನೆಯ ಹತ್ತಿರ ಚೀಟಿ ದಂಧೆ ನಡೆಸಿ ಸುಮಾರು ಜನರಿಗೆ ನಾಮ ಹಾಕಿ ಅದು ಪೊಲೀಸ್ ಕೇಸಾಗಿ ರಂಪ ಮಾಡಿಕೊಂಡಿದ್ದ. ಕೊನೆಗೆ 1994 ರಲ್ಲಿ ಕೆಪಿಎಸ್‌ಸಿ ಮೂಲಕ ಹೆಡ್‌ಮಾಸ್ಟರ್ ಆಗಿ ಹೊಸಕೋಟೆ, ಶಿವಾಜಿನಗರದ ಸರ್ಕಾರಿ ಟಿಸಿಎಚ್ ಕಾಲೇಜಿನಲ್ಲಿ ಪಾಠ ಮಾಡಿಕೊಂಡು ಶಿಕ್ಷಣ ಇಲಾಖೆಯ ತ್ರೈಮಾಸಿಕ ಪತ್ರಿಕೆಗೆ ಸಂಪಾದಕನೂ ಆದ. ದುಡ್ಡು ಸಂಪಾದನೆ ಮಾಡುವುದೇ ಸಂಪಾದಕನ ಕೆಲಸ ಎಂದು ನಂಬಿದ್ದ ಕೆಂಪಯ್ಯ ಅಲ್ಲಿ ಒಂದಿಷ್ಟು ಹಣ ಕದ್ದು ಅವರಿವರಿಗೆ ಅಮೇಧ್ಯ ತಿನ್ನಿಸಿ ಬಿಇಓ ಆಗಿ ಪ್ರಮೋಷನ್ ಗಿಟ್ಟಿಸಿ ಸೀದಾ ಬೆಂಗಳೂರು ಸೌತ್-2 ಗೆ ಕಾಲಿಟ್ಟ. ತನ್ನ ವ್ಯಾಪ್ತಿಯ ಶಾಲೆಗಳಿಗೆ ವಿಸಿಟ್ ಹಾಕಿ ಆ ಕೊರತೆ ಇದೆ, ಈ ನಿಯಮ ಉಲ್ಲಂಘನೆ ಆಗಿದೆ ಎಂದು ಹೆದರಿಸಿ ಕಾಸು ಕಿತ್ತೂ ಕಿತ್ತು ಜೇಬು ತುಂಬಿಸಿಕೊಳ್ಳುತ್ತಿದ್ದ[…] ಹೊಸ ಸೆಕ್ಷನ್ ಪರ್ಮಿಷನ್‌ಗೆ, ರಿನೀವಲ್‌ಗೆ ಕೊನೆಗೆ ಶಿಕ್ಷಕರ ಗಳಿಕೆ[…] ರಜೆ ಮಂಜೂರಿಗೂ ಪರ್ಸೆಂಟೇಜ್ ವಸೂಲಿ ಮಾಡುತ್ತಾ[…] ನಾಗರಬಾವಿಯ ವಿನಾಯಕ ಲೇಔಟಿನಲ್ಲಿ ಐವತ್ತು ಲಕ್ಷದ ಮನೆ[…] ಕಟ್ಟಿಕೊಂಡ. ಇತ್ತೀಚೆಗೆ ತಾನೆ ಎಂಟು ಲಕ್ಷ ಹಡಬೆ ದುಡ್ಡು ಕೊಟ್ಟು[…] ಫೋರ್ಡ್ ಫಿಯೆಸ್ಟಾ ಕಾರೂ ಕೊಂಡಿದ್ದ. ಅದೇ ಭಂಡ ದುರಾಸೆಗೆ[…] ಬಿದ್ದು ಮೊನ್ನೆ ಚಾಮರಾಜಪೇಟೆಯ ಸೇಂಟ್ ಜೋಸೆಫ್ ಸ್ಕೂಲಿನ[…] ಟೀಚರ್ ಜರೋಮ್ ನೇಮಕಾತಿಗೆ ಐವತ್ತು ಸಾವಿರ ಲಂಚ ಕೇಳಿ[…] ರೆಡ್‌ಹ್ಯಾಂಡಾಗಿ ಸಿಕ್ಕಿಬಿದ್ದು ಸಸ್ಪೆಂಡಾಗಿದ್ದಾನೆ.

ಸಾಹಿತ್ಯದ ತಲೆಬುಡ ಗೊತ್ತಿರದಿದ್ದರೂ ತಾನೊಬ್ಬ ಸಾಹಿತಿಯೆಂದು[…] ಪೋಜ್ ಕೊಡುತ್ತಿದ್ದ ಕೆಂಪಯ್ಯ AK-47 ಸಿನಿಮಾಗೆ ಡೈಲಾಗ್[…] ಬರೆದಿದ್ದ.

ಕಮಿಷನರ್ ವಿಜಯಭಾಸ್ಕರ್ ಕೆಂಪಯ್ಯನ ದುರಾಡಳಿತ, ಲಂಚ[…] ಗುಳಿತನವನ್ನಷ್ಟೇ ಅಲ್ಲ ಅವನ ಅಕ್ರಮ ಆಸ್ತಿ ಬಗ್ಗೆಯೂ ಸಮಗ್ರ[…] ತನಿಖೆ ಮಾಡಿಸಿದರೆ ಒಳ್ಳೆಯದು. ಹಾಗೆ ಮಾಡಿದರೆ ಶಿಕ್ಷಣ[…] ಇಲಾಖೆಯಲ್ಲಿರುವ ಬೇರೆ 'ಕಳ್ ಕೆಂಪಯ್ಯ'ಗಳಿಗೂ ಚೂರಾದರೂ[…] ಭಯ ಇರುತ್ತದೆ.

ಕಾವ್ಯವೆಂದರೆ ಸೌಂದರ್ಯದ ಲಯಬದ್ಧ ಸೃಷ್ಟಿ -ಎಡ್ಗರ್ ಅಲೆನ್ ಪೋ

ದೇವನಹಳ್ಳಿಯ ರೇಪಿಸ್ಟ್ ಗ್ಯಾಂಗ್ ಜೈಲಿಗೆ...

ದೇವನಹಳ್ಳಿಯ ಪೊಲೀಸರು ವಿಕೃತಕಾಮಿ, ನಟೋರಿಯಸ್ ರೇಪಿಸ್ಟ್ ಗ್ಯಾಂಗ್ ವಿಜಯಪುರದ ಮುನಿಶಾಮೇಗೌಡ ಮತ್ತವನ ತಂಡವನ್ನು ಬಂಧಿಸು ತ್ತಿದ್ದಂತೆಯೇ ದೇವನಹಳ್ಳಿ, ವಿಜಯಪುರ ಸುತ್ತಲಿನ ಹಳ್ಳಿಗಳ ಅದೆಷ್ಟೋ ಹೆಣ್ಣುಮಕ್ಕಳು ನೆಮ್ಮದಿಯ ನಿಟ್ಟುಸಿರುಬಿಟ್ಟರೆ.... ಹೊಸಕೋಟೆ, ಚಿಕ್ಕಬಳ್ಳಾಪುರ, ಯಲಹಂಕ ಮುಂತಾದ ಠಾಣೆಗಳ ಪೊಲೀಸರು ತಮ್ಮ ವ್ಯಾಪ್ತಿಯಲ್ಲಿ ಬಿದ್ದಿದ್ದ ಒಂಟಿ ಮಹಿಳೆಯರ ಶವದ ಫೋಟೋ ಹಿಡಿದು ಆರೋಪಿಗಳನ್ನು ಇಂಟ್ರಾಗೇಟ್ ಮಾಡುತ್ತಿದ್ದಾರೆ.

ಆಗಸ್ಟ್ 28ರಂದು ಯುವತಿಯೊಬ್ಬಳ ಕಿಡ್ನ್ಯಾಪ್ ಪ್ರಕರಣದಲ್ಲಿ ಈ ತಂಡವನ್ನು ಬಂಧಿಸಿದಾಗ, ತಾವು ಬಂಧಿಸುತ್ತಿರುವುದು ಸೀರಿಯಲ್ ರೇಪಿಸ್ಟ್ ಅಂಡ್ ಕಿಲ್ಲರ್ಸ್ ಎಂದು ದೇವನಹಳ್ಳಿ ಪೊಲೀಸರಿಗೆ ಗೊತ್ತಿರಲಿಲ್ಲ, ಬಂಧಿತ ಪಾತಕಿ ಮುನಿಶ್ಯಾಮೇಗೌಡ ಮತ್ತವನ ಸಹಚರರಾದ ಮಿತ್ತನಹಳ್ಳಿಯ ಮಧು, ವಿಜಯಪುರದ ರವಿ, ಅಮಾಯಕ ಯುವತಿಯರನ್ನು ವಂಚಿಸಿ ತಾವು ಎಸಗುತ್ತಿದ್ದ ಒಂದೊಂದೇ ಕೃತ್ಯಗಳನ್ನು ಬಾಯಿ ಬಿಡುತ್ತಿದ್ದರೆ... ಪೊಲೀಸರು ಮಾತ್ರವಲ್ಲ, ದೇವನಹಳ್ಳಿಯ ಜನರೇ ಬೆಚ್ಚಿ ಬೀಳುತ್ತಿದ್ದಾರೆ.

ಪೊಲೀಸರಿಂದ ಬಂಧಿತನಾಗಿ, ಸದ್ಯಕ್ಕೆ ಪರಪ್ಪನ ಅಗ್ರಹಾರದಲ್ಲಿ ಮುದ್ದೆ ನುಂಗುತ್ತಿರುವ ಮುನಿಶ್ಯಾಮೇಗೌಡ ನೇನೂ ಸಾಮಾನ್ಯ ಕ್ರಿಮಿನಲ್ ಅಲ್ಲ; ಈತನೊಬ್ಬ ಸೈಕೋಪಾತ್ ಎಂಬುದಕ್ಕೆ ಈತನ ವಿಕೃತಿಗಳೇ ಸಾಕ್ಷಿಯಾಗಿವೆ. ಈತನೊಬ್ಬ ವುಮನೈಸರ್ ಎಂಬುದಕ್ಕೆ ಈತನಿಗಿರುವ ಸಾಲುಗಟ್ಟಲೆ ಹೆಂಡಂದಿರೆ ನಿದರ್ಶನ. ಅಪ್ಪ ಸಂಪಾದಿಸಿದ ಹಣ ಖರ್ಚು ಮಾಡುವುದಕ್ಕೆ ಹುಟ್ಟಿದ ಅಡ್ನಾಡಿ ಮಗ ಎನ್ನುವುದಕ್ಕೆ ಈತನ ತಂದೆ ಮಾಜಿ ಕೌನ್ಸಿಲರ್ ಎಂ.ಎಲ್. ಕೃಷ್ಣಪ್ಪ ಸಂಪಾದಿಸಿಟ್ಟ ಹಡಬೇ ದುಡ್ಡೇ ಸಾಕ್ಷಿ....

ಒಟ್ನಾರೆ, ಗತಿಗೆಟ್ಟ ತಂದೆಗೆ ಹಡಬೆ ದುಡ್ಡು ಹರಿದು ಬಂದಾಗ, ಮತಿಗೆಟ್ಟ ಮಗ ಏನಾಗಬೇಕೋ ಅದೇ ಆಗಿದ್ದಾನೆ ಮುನಿಶ್ಯಾಮೇಗೌಡ....


ಅಪ್ಪ ಖೋಟಾನೋಟಿನ ಖದೀಮ


ಪಾತಕಿ ಮುನಿಶ್ಯಾಮೇಗೌಡನ ತಂದೆ ವಿಜಯಪುರದ ಮಾಜಿ ಕೌನ್ಸಿಲರ್ ಎಂ.ಎಲ್. ಕೃಷ್ಣಪ್ಪನಿಗೂ ಉತ್ತಮ ಹಿನ್ನೆಲೆಯಿಲ್ಲ, ಹತ್ತಿಪ್ಪತ್ತು ವರ್ಷಗಳ ಹಿಂದೆ ವಿಜಯಪುರದ ರೇಷ್ಮೆ ಮಾರ್ಕೆಟ್ಟಿನ ಬಾಗಿಲ ಮುಂದೆ ನಿಂತು, ರೈತರು ತರುತ್ತಿದ್ದ ಆಕಳಿ ಗೂಡಿಗಾಗಿ ಬೆಳಿಗ್ಗಿನಿಂದ ಸಂಜೆವರೆಗೂ ನಿಲ್ಲುತ್ತಿದ್ದ ಕೃಷ್ಣಪ್ಪನದು ಅಂದು ದೈನೇಶಿ ಬದುಕು....

ಅಂತಹ ದೈನೇಶಿ ಬದುಕಿನಿಂದ ಹೊರಬರಲು ಖದೀಮ ಕೃಷ್ಣಪ್ಪ ಕಂಡುಕೊಂಡ ಅಡ್ಡದಾರಿಯೇ ಖೋಟಾನೋಟಿನ ಚಲಾವಣೆ. ಅಂದು ವಿಜಯಪುರದ ಮಾರುಕಟ್ಟೆಗೆ ಗೂಡು ತರುತ್ತಿದ್ದ ರೈತರು ಮನೆಗೆ ಹೋಗಿ ನೋಡಿದರೆ ಅವರ ಜೇಬಿನಲ್ಲಿ ಐವತ್ತರದೋ, ನೂರರದೋ ಖೋಟಾನೋಟುಗಳು ಇರುತ್ತಿದ್ದವು. ಈ ನೋಟುಗಳು ಯಾವ ರೀತಿ ಕೈ ಬದಲಾವಣೆ ಯಾಗುತ್ತವೆ ಎಂಬುದೇ ಮಾರುಕಟ್ಟೆಯ ಅಧಿಕಾರಿಗಳಿಗೆ ತಲೆಬಿಸಿಯಾಗಿತ್ತು.

ಕಡೆಗೆ ವಿಜಯಪುರದ ಪೊಲೀಸರು ಕೊಂಚ ತಲೆಕೆಡಿಸಿಕೊಂಡಾಗ ಬಯಲಿಗೆ ಬಂದ ಹೆಸರೇ ಈ ಕೃಷ್ಣಪ್ಪನದು. ಅಷ್ಟೊತ್ತಿಗಾಗಲೇ ಸಾಕಷ್ಟು ಹಣ ಮಾಡಿಕೊಂಡಿದ್ದ ಖದೀಮ ಕೃಷ್ಣಪ್ಪ ಕೋಲಾರದ ಮೇಮಗಲ್, ಜಂಗಮಕೋಟೆ ಪೊಲೀಸರಿಗೆ ಇದೇ ವ್ಯವಹಾರದಲ್ಲಿ ಸಿಕ್ಕಿಬಿದ್ದು ಸಾಕಷ್ಟು ರುಬ್ಬಿಸಿಕೊಂಡು ಜೈಲು ಸೇರಿದ್ದ








ತನ್ನ ಖೋಟಾನೋಟಿನ ವ್ಯವಹಾರ ಬಯಲಾಗುತ್ತಿದ್ದಂತೆ ಸ್ವಲ್ಪ ದಿವಸ ಊರು ಬಿಟ್ಟಿದ್ದ ಕೃಷ್ಣಪ್ಪ ನಂತರದ ದಿನಗಳಲ್ಲಿ ಕಾಣಿಸಿಕೊಂಡಿದ್ದು ದೇವನಹಳ್ಳಿಯ ಶಾಸಕ ಜಿ. ಚಂದ್ರಪ್ಪನ ಪಾಳಯದಲ್ಲಿ, ಇವರ ಕೃಪೆಯಿಂದಲೇ ವಿಜಯಪುರ ಪುರಸಭೆಗೆ ಜೆಡಿಎಸ್‌ನಿಂದ ಆಯ್ಕೆಯಾದ ಈತ ಮುಂದೆ ಶುರುಮಾಡಿದ್ದು ರಿಯಲ್ ಎಸ್ಟೇಟ್ ದಂಧೆಯನ್ನು.

ಕೃಷ್ಣಪ್ಪ ರಿಯಲ್ ಎಸ್ಟೇಟ್ ದಂಧೆಗೆ ಕೈ ಹಾಕುವ ವೇಳೆಗಾಗಲೇ ದೇವನಹಳ್ಳಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಬಂದಿತ್ತು, ಈ ಕಾರಣಕ್ಕಾಗಿಯೇ ಅಲ್ಲಿನ ಭೂಮಿಗೆ ಚಿನ್ನದ ಬೆಲೆ. ಇಂತಹ ವೇಳೆಯಲ್ಲಿ ಭೂ-ವ್ಯವಹಾರಕ್ಕೆ ನಿಂತ ಕೃಷ್ಣಪ್ಪ ಕೇವಲ ಆರು ತಿಂಗಳಲ್ಲಿಯೇ ಕೋಟಿ-ಕೋಟಿಗಳ ಒಡೆಯನಾಗಿಬಿಟ್ಟ.

ಅಳಿಯನಿಗೂ ಮೋಸ...

ರಿಯಲ್ ಎಸ್ಟೇಟ್ ದಂಧೆಯಲ್ಲಿ ದೇವನಹಳ್ಳಿ ಸುತ್ತಲಿನ ಹತ್ತಾರು ಹಳ್ಳಿಗಳ ಬಡ ರೈತರು, ದಲಿತರ ಬದುಕನ್ನೇ ಮೂರಾಬಟ್ಟೆ ಮಾಡಿದ ಖತರ್‌ನಾಕ್ ಕೃಷ್ಣಪ್ಪ, ತನ್ನ ಹೆಂಡತಿಯ ತಮ್ಮಂದಿರಿಗೆ ಕೊಡಬೇಕಿದ್ದ ಜಮೀನಿನ ಹಣಕ್ಕೆ ತಿರುಪತಿ ನಾಮ ತೀಡಿದ. ಇಷ್ಟಾಗಿದ್ದಿದ್ದರೆ ವಿಜಯಪುರದ ಜನ ಸುಮ್ಮನಿರುತ್ತಿದ್ದರೇನೋ. ಆದರೆ ಪಾಖಂಡಿ ಕೃಷ್ಣಪ್ಪ ತನ್ನ ಒಬ್ಬಳೇ ಮಗಳನ್ನು ಮದುಮೆ ಮಾಡಿಕೊಟ್ಟಿದ್ದ ಅಳಿಯನಿಗೂ ಪೀಣ್ಯದ ದಾಸರಹಳ್ಳಿ ಯಲ್ಲಿ ಎಕರೆಗಟ್ಟಲೆ ಭೂಮಿಯಿತ್ತು, ಆದರೆ ಅಳಿಯ ಮತ್ತವರ ಕುಟುಂಬ ಕೊಲೆ ಕೇಸೊಂದರಲ್ಲಿ ಜೈಲು ಸೇರಿದ್ದೇ ತಡ, ಅಳಿಯನ ಎಲ್ಲಾ ಆಸ್ತಿಯನ್ನು ಹರಾಜು ಹಾಕಿ, ಹಣ ಎಣಿಸಿ ಕೊಂಡು ಮಗಳೊಂದಿಗೆ ಮನೆ ಸೇರಿಕೊಂಡು ಬಿಟ್ಟ. ಸದ್ಯಕ್ಕೆ ಜೈಲಲ್ಲಿ ರುವ ಅಳಿಯ ಕುಳಿತಲ್ಲಿಯೇ ಹಲ್ಲು ಕಡಿಯುತ್ತಿದ್ದಾನೆ.



ವೇಣುಗೋಪಾಲ್

ತಂದೆಗೆ ತಕ್ಕ ಮಗ

ಹೀಗೆ ಅಡ್ಡ ಕಸುಬಿನಲ್ಲಿ ಅಕ್ರಮ ವಾಗಿ, ಕೋಟ್ಯಂತರ ರೂಪಾಯಿ ಕೂಡಿಟ್ಟ ಕೃಷ್ಣಪ್ಪ ತನ್ನ ಮಗನಿಗೆ ಕಿವಿ ಹಿಂಡಿ ಬುದ್ಧಿ ಹೇಳಿದ್ದರೆ ಊರಿನ ಜನ ಶಹಬ್ಬಾಸ್ ಎನ್ನುತ್ತಿದ್ದರೇನೋ. ಹೈಸ್ಕೂಲ್ ಡ್ರಾಪ್ ಔಟ್ ಆಗಿ, ಮುಖದ ಮೇಲೆ ಮೀಸೆ ಮೂಡಿರದಿದ್ದ ಮುನಿಶ್ಯಾಮೇ ಗೌಡ, ಮೊದಲ ಬಾರಿಗೆ ಕಾಲೇಜು ಹುಡುಗಿಯೊಬ್ಬಳನ್ನು ಕೆಣಕಿ ಕಪಾಳ ಮೋಕ್ಷ ಮಾಡಿಸಿಕೊಂಡಾಗ ಈತನೇ ಮಗನ ಬೆನ್ನಿಗೆ ನಿಂತಿದ್ದ.

ಯಾವಾಗ ತನ್ನ ತೆವಲುಗಳಿಗೆ ಅಪ್ಪನ ಬೆಂಬಲ ಸಿಕ್ಕಿತೋ, ಮುನಿಶ್ಯಾಮೇಗೌಡನ ತೋಳಿಗೆ ಭೀಮ ಬಲ ಬಂದಂತಾಯಿತು. ಆ ವೇಳೆಗೆ ಮುನಿಶ್ಯಾಮನ ಪಕ್ಕ ಮಿತ್ತನ ಹಳ್ಳಿಯ ಪಾತಕಿ ಮಧು, ವಿಜಯಪುರ ಎಲ್ಲಮ್ಮನಗುಡಿಯ ರವಿ, ದಾಸ ಅಲಿಯಾಸ್ ಶಿವ ಎಂಬ ಸೈಕೋಪಾತ್‌ಗಳ ದಂಡೇ ಸೇರಿಹೋಗಿತ್ತು.

ಕಾಲೇಜು ಯುವತಿಯರ ಹಿಂದೆ....

ತನ್ನದೇ ಮನಸ್ಸಿನ ಪಾತಕಿಗಳದೊಂದು ತಂಡವನ್ನು ಕಟ್ಟಿಕೊಂಡು ಮುನಿಶ್ಯಾಮೇಗೌಡ ಅಪ್ಪ ಕೊಡಿಸಿದ್ದ ಸ್ಯಾಂಟ್ರೋ ಕಾರಿನಲ್ಲಿ ಹಿಂದೆ ಬಿದ್ದಿದ್ದು, ವಿಜಯಪುರದ ಪದವಿ ಪೂರ್ವ ಕಾಲೇಜಿಗೆ ಬರುತ್ತಿದ್ದ ವಿದ್ಯಾರ್ಥಿನಿಯರ ಬೆನ್ನ ಹಿಂದೆ...

ಮೊದಲೇ ವಿಜಯಪುರದ ಸುತ್ತಮುತ್ತಲಿನ ಹಳ್ಳಿಗಳ ಬಡ ಕುಟುಂಬದಿಂದ ಕಾಲೇಜಿಗೆಂದು ಬರುತ್ತಿದ್ದ ಅಮಾಯಕ ಹೆಣ್ಣು ಮಕ್ಕಳು ಈ ಸೈಕೋಪಾತ್‌ಗಳ ವಂಚನೆಗೆ ಸುಲಭವಾಗಿ ಬಲಿಯಾಗಿ ಹೋಗಿದ್ದಾರೆ. ಮುಗ್ಧ ಯುವತಿಯರನ್ನು ಮದುವೆಯಾಗುವುದಾಗಿ ನಂಬಿಸಿ, ಸ್ನೇಹ ಸಂಪಾದಿಸುತ್ತಿದ್ದ ಈ ನಟೋರಿಯಸ್ ರೇಪಿಸ್ಟ್‌ಗಳು ಅವರನ್ನು ನಂದಿ ಹಿಲ್ಸ್‌ಗೋ, ಮತ್ತೆಲ್ಲಿಗೋ ಕರೆದೊಯ್ದು ಗ್ಯಾಂಗ್‌ರೇಪ್ ಮಾಡಿಬಿಡುತ್ತಿದ್ದರು.

ಈ ಪಾತಕ ಪಡೆ ಎಸಗಿದ ಪೈಶಾಚಿಕ ಕೃತ್ಯಕ್ಕೆ ನೀಡಿದ ಮಾನಸಿಕ ಹಿಂಸೆಗೆ ಸಿಲುಕಿದ ಎಷ್ಟೋ ಯುವತಿಯರು ಮರ್ಯಾದೆಗಂಜಿ ಮೌನವಾಗಿ ಮನೆ ಸೇರಿಕೊಂಡರೆ... ಪ್ರತಿರೋಧ ತೋರಿದವರ ಹೆಣ ಅಲ್ಲೇ ದೇವನಹಳ್ಳಿಯ ಸುತ್ತವಿರುವ ನೀಲಗಿರಿ ತೋಪಿನಲ್ಲಿ, ನಂದಿ ಬೆಟ್ಟದ ಬುಡದಲ್ಲಿ ಅರೆಬೆಂದ ಸ್ಥಿತಿಯಲ್ಲಿ ಬೀಳುತ್ತಿದ್ದವು. ಹೀಗೆ ಅನಾಥವಾಗಿ ಬಿದ್ದ ಹೆಣಗಳನ್ನು ಪೊಲೀಸರು ಇದೊಂದು ಪತ್ತೆಯಾಗದ ಪ್ರಕರಣವೆಂದು ಷರಾ ಬರೆದು ಫೈಲ್ ಎತ್ತಿಟ್ಟುಬಿಡುತ್ತಿದ್ದರು.

ವೀಣಾ ಹಾಗೆ ಮಾಡಲಿಲ್ಲ

ವಿಜಯಪುರದ ಸುತ್ತಲಿನ ಅಮಾಯಕ ಹೆಣ್ಣು ಮಕ್ಕಳ ಪಾಲಿಗೆ ವುಮನ್ ಹಂಟರ್ ಆಗಿದ್ದ ಮುನಿಶ್ಯಾಮೇಗೌಡನ ಕಣ್ಣಿಗೆ 6 ತಿಂಗಳ ಹಿಂದೆ ಬಿದ್ದವಳೇ ಶಿಡ್ಲಘಟ್ಟ ತಾಲ್ಲೂಕಿನ ಮಿತ್ತನಹಳ್ಳಿಯ ಮರಿಯಪ್ಪನ ಮಗಳು ವೀಣಾ ಈಕೆ ವಾರಿಗೆಯಲ್ಲಿ ಮತ್ತೊಬ್ಬ ಪಾತಕಿ ಮಧುವಿಗೆ ಸೋದರಿಯಾಗಬೇಕು. ಮುನಿಶ್ಯಾಮೇಗೌಡ ಯಾವಾಗ ತನ್ನೂರಿನ ಹುಡುಗಿಗೆ ಕಣ್ಣು ಹಾಕಿದನೋ, ಮುಂದಿನ ಕೆಲಸವನ್ನೆಲ್ಲಾ ಮಧುವೇ ಮಾಡಿದ್ದಾನೆ. ವೀಣಾಳಿಗೆ "ಮುನಿಶ್ಯಾಮೇಗೌಡ ನಿನ್ನನ್ನು ಮದುವೆ ಯಾಗುತ್ತಾನಂತೆ" ಎಂದಾಗ, ಆತನ ಮೋಜು- ಮಜಗಳನ್ನು ಕಂಡಿದ್ದ ವೀಣಾ ಸಹಜವಾಗಿಯೇ ಆತನೆಡೆಗೆ ಆಕರ್ಷಿತಳಾಗಿದ್ದಳು. ಆದರೆ ಯಾವಾಗ ಆತನ ಅಸಲಿ ರೂಪ ಗೆಳತಿಯರಿಂದ ಹೊರಬಿತ್ತೋ, ಆತನಿಗೆ ಆಗಲೇ ಎರಡು ಮದುವೆಯಾಗಿರುವ ವಿಷಯ ತಿಳಿಯಿತೋ, ವೀಣಾ ಸೈಕೋಪಾತ್ ಮುನಿಶ್ಯಾಮೇ ಗೌಡನ ಫ್ರೆಂಡ್‌ಶಿಪ್‌ಗೆ ಗುಡ್‌ಬೈ ಹೇಳಿದ್ದಾಳೆ.

ಅಪಹರಿಸಿ ತಾಳಿ ಕಟ್ಟಿದ್ದ...

ತನ್ನನ್ನು ಮದುವೆಯಾಗಲು ವೀಣಾ ನಿರಾಕರಿಸುತ್ತಿದ್ದಂತೆಯೇ ಮುನಿಶ್ಯಾಮನ ಮೃಗೀಯ ಮನಸ್ಸು ಜಾಗ್ರತಗೊಂಡಿದೆ. ಮೊನ್ನೆ ಆಗಸ್ಟ್ 25ರಂದು ಆರೋಗ್ಯ ಸರಿಯಿಲ್ಲವೆಂದು ವಿಜಯಪುರದ ಮಲ್ಲಿಗೆ ನರ್ಸಿಂಗ್ ಹೋಂ ಬಳಿ ನಿಂತಿದ್ದ ವೀಣಾಳನ್ನು ತನ್ನದೇ ಟಾಟಾ ಸುಮೋ (KA 03 P 3455)ದಲ್ಲಿ ಅಪಹರಿಸಿದ್ದಾನೆ. ಆನಂತರ ಬಾಗೇಪಲ್ಲಿ ಬಳಿಯ ಪೆರಿಸಂದ್ರದ ದೇವಸ್ಥಾನದಲ್ಲಿ ಬಲವಂತವಾಗಿ ತಾಳಿಕಟ್ಟಿ ಅಲ್ಲಿಯೇ ಮನೆಯೊಂದರಲ್ಲಿ ಮೂರುದಿನಗಳವರೆಗೆ ವೀಣಾಳನ್ನು ಗೋಳು ಹುಯ್ದುಕೊಂಡಿದ್ದಾನೆ. ಆದರೆ ಆಗಸ್ಟ್ 28ರಂದು ಆಕೆಯನ್ನು ಅದೇ ಟಾಟಾ ಸುಮೋದಲ್ಲಿ ಕರೆದುತಂದು ಮಿತ್ತನಹಳ್ಳಿ ಗೇಟ್ ಬಳಿ ಇಳಿಸಿಹೋಗಿದ್ದಾನೆ.

ಯಾವಾಗ ಮುನಿಶ್ಯಾಮ ಮತ್ತವನ ತಂಡ ಊರ ಬಳಿ ತನ್ನನ್ನು ಇಳಿಸಿ ಹೋಯಿತೋ ಮನೆಗೆ ಹೋಗಿ ತಂದೆ-ತಾಯಿಗೆ ವಿಷಯ ತಿಳಿಸಿದ ವೀಣಾ ನೇರ ವಿಜಯಪುರದ ಸ್ಟೇಷನ್ನಿಗೆ ಬಂದು, ಮುನಿಶ್ಯಾಮ ಮತ್ತವನ ತಂಡದ ವಿರುದ್ಧ ದೂರು ನೀಡಿದ್ದಾಳೆ. ಅಲ್ಲಿ ಸ್ಟೇಷನ್ನಿನಲ್ಲಿ ವೀಣಾ ದೂರು ಕೊಡುತ್ತಿದ್ದರೆ ಮುನಿಶ್ಯಾಮನ ಹಂತಕ ಪಡೆ ಠಾಣೆಯ ಹೊರನಿಂತು ಕೇಕೇ ಹಾಕಿ ಗೇಲಿ ಮಾಡುತ್ತಾ ನಿಂತಿತ್ತಂತೆ.

ಪೊಲೀಸರು ಕಾಯುತ್ತಿದ್ದರು....

ಆದರೆ ದೇವನಹಳ್ಳಿಯ ಇನ್ಸ್‌ಪೆಕ್ಟರ್ ಎಂ. ವೇಣುಗೋಪಾಲ್ ಹಿಂದೆ ವಿಜಯಪುರದಲ್ಲೇ ಸಬ್‌ಇನ್ಸ್‌ಪೆಕ್ಟರ್ ಆಗಿದ್ದವರು. ಜೊತೆಗೆ ಖಡಕ್ ಅಧಿಕಾರಿ ಯಾವಾಗ ವೀಣಾ ಮುನಿಶ್ಯಾಮ ಮತ್ತವನ ತಂಡದ ವಿರುದ್ಧ ದೂರು ಕೊಟ್ಟಳೋ, ಕೇಸನ್ನು ತಾವೇ ಕೈಗೆತ್ತಿಕೊಂಡು ಮುನಿಶ್ಯಾಮೇಗೌಡ, ಮಧು, ರವಿಯರನ್ನು ಎತ್ತಾಕಿಕೊಂಡು ರುಬ್ಬಿದ್ದಾರೆ. ಪೊಲೀಸರು ವರ್ಕ್ ಮಾಡಿಯೇ ತೊಡೆಯಲ್ಲಿ ನೀರಿಳಿಸಿದ ಮುನಿಶ್ಯಾಮ ಒಂದೊಂದಾಗಿ ತಾನು ಮತ್ತು ತನ್ನ ತಂಡ ನಡೆಸಿದ ಸಾಮೂಹಿಕ ಅತ್ಯಾಚಾರಗಳ ವಿವರಗಳನ್ನು ಹೊರಹಾಕಿದ್ದಾನೆ. ಜೊತೆಗೆ 8 ತಿಂಗಳ ಹಿಂದೆ ಬೆಂಗಳೂರಿನ ಸಹಕಾರನಗರದಿಂದ ಲೈವ್‌ಬ್ಯಾಂಡ್ ಯುವತಿಯೊಬ್ಬಳನ್ನು ಕರೆತಂದು ಗ್ಯಾಂಗ್ ರೇಪ್ ಮಾಡಿ, ವಿಜಯಪುರ-ಹಾರೋಹಳ್ಳಿ ರಸ್ತೆಯ ಬುಳ್ಳಿ ನೀಲಗಿರಿ ತೋಪಿನಲ್ಲಿ ಪೆಟ್ರೋಲ್ ಹಾಕಿ ಸುಟ್ಟು ಹಾಕಿಕೊಂದಿದ್ದನ್ನು ಒಪ್ಪಿಕೊಂಡಿದ್ದಾರೆ.

ಮುನಿಶ್ಯಾಮನ ಹೀನ ವೃತ್ತಾಂತ ಹೊರಬೀಳುತ್ತಿದ್ದಂತೆಯೇ ವಿಜಯಪುರದ ಜನ ಠಾಣೆಗೆ ಮುತ್ತಿಗೆ ಹಾಕಿ ಧೀಮಾರಿ ಹಾಕಿದ್ದಾರೆ. ಆತನ ತಂಡವನ್ನು ಕೋಳ ತೊಡಿಸಿ ಊರಲ್ಲೆಲ್ಲಾ ಮೆರವಣಿಗೆ ಮಾಡಿಸು ವಂತೆ ಒತ್ತಾಯಿಸಿದ್ದಾರೆ. ಆ ಮಟ್ಟಗಿತ್ತು ಅಂದು ವಿಜಯಪುರದ ಜನರ ಆಕ್ರೋಶ....

ಮುನಿಶ್ಯಾಮ, ಮಧು, ರವಿಯ ಬಂಧನದಿಂದ ಅಲ್ಲಿನ ಜನ ನಿಟ್ಟುಸಿರು ಬಿಟ್ಟಿದ್ದಾರೆ. ಆದರೆ ತಲೆತಪ್ಪಿಸಿಕೊಂಡಿರುವ ಮತ್ತೋರ್ವ ಪಾತಕಿ ದಾಸ್ ಅಲಿಯಾಸ್ ಶಿವ ಮತ್ತೆಲ್ಲಿ ಪ್ರತ್ಯಕ್ಷನಾಗುತ್ತಾನೋ ಎಂದು ಭಯ ಬೀಳುತ್ತಿದ್ದಾರೆ. ದೇವನಹಳ್ಳಿ ಪೊಲೀಸರು ಇಷ್ಟಕ್ಕೆ ಸುಮ್ಮನಾದರೆ ಪ್ರಯೋಜನವಿಲ್ಲ, ಈಗ ಅವರ ಮುಂದಿರುವವನು ದಾಸ.....

-ಸ್ವಾಮಿಗೌಡ

ಯುವ ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ಕೃಷ್ಣ ಭೈರೇಗೌಡ?

ಕಡೆಗೂ ಕರ್ನಾಟಕ ಪ್ರದೇಶ ಕಾಂಗ್ರೆಸ್ ಮುಖಂಡರಿಗೆ ತಮ್ಮ ಪಕ್ಷದಲ್ಲೇ ಇರುವ ಯುವ ಕಾಂಗ್ರೆಸ್ ಘಟಕದ ಬಗ್ಗೆ ಜ್ಞಾಪಕ ಬಂದಂತಿದೆ. 1988 ರಲ್ಲಿ ಶಾಸಕ ದಿನೇಶ್ ಗುಂಡೂರಾವ್‌ರವರನ್ನು ಯುವ ಕಾಂಗ್ರೆಸ್ ಅಧ್ಯಕ್ಷರನ್ನಾಗಿ ನೇಮಿಸಿ ಆ ವಿಭಾಗವನ್ನು ಮರೆತೇಬಿಟ್ಟಿದ್ದ ವರಿಷ್ಠರು ಈಗ ಇದ್ದಕ್ಕಿದ್ದಂತೆ ಯುವ ಕಾಂಗ್ರೆಸ್ ಕಾಯಕಲ್ಪಕ್ಕೆ ಮುಂದಾಗಿದ್ದು, ಮೇಮಗಲ್ ಶಾಸಕ ಕೃಷ್ಣ ಭೈರೇಗೌಡರಿಗೆ ಅಧ್ಯಕ್ಷ ಪಟ್ಟ ಕಟ್ಟಲು ಹೊರಟಿದ್ದಾರೆ. ಯುವ ಕಾಂಗ್ರೆಸ್ ಎಂದರೆ ಜಿಂದಾಬಾದ್ [illegible] ಆಗಿದೆ. [illegible] ನಾಯಕರು [illegible] ಅವರಿಗೆ ಜಿಂದಾಬಾದ್ ಹಾಕುವುದು, [illegible] ಸಭೆ-ಸಮಾರಂಭಗಳು ನಡೆದಾಗ [illegible] [illegible] ಬಿಟ್ಟರೆ ಸದರಿ ಯುವ ಕಾಂಗ್ರೆಸ್‌ಗೆ [illegible] ಕಾರ್ಯಕ್ರಮ [illegible]

ಈಗ ಶಾಸಕ ಕೃಷ್ಣ ಭೈರೇಗೌಡ ಅಧ್ಯಕ್ಷ ಸ್ಥಾನಕ್ಕೇರುವುದು ಬಹುತೇಕ ಖಚಿತವಾಗಿದೆ. ಅಮೆರಿಕದಲ್ಲಿ ಇಂಜಿನಿಯರ್ ಆಗಿದ್ದ ಕೃಷ್ಣ ಭೈರೇಗೌಡ ತಂದೆ ಭೈರೇಗೌಡರ ನಿಧನದ ನಂತರ ರಾಜಕೀಯಕ್ಕೆ ಅಚಾನಕ್ಕಾಗಿ ಬಂದವರು. ನಂತರ ತಂದೆಯ ತವರು ಪಕ್ಷವಾದ ಜನತಾದಳ ತೊರೆದು ಕಾಂಗ್ರೆಸ್‌ನಿಂದ ಆಯ್ಕೆಯಾಗಿ ಬಂದಾಗ ಕೃಷ್ಣ ಭೈರೇಗೌಡರನ್ನು ಯಾರೂ ಗಂಭೀರವಾಗಿ ಪರಿಗಣಿಸಿರಲಿಲ್ಲ. ಆದರೆ ವಿಧಾನ ಸಭೆಯಲ್ಲಿ ಜೂನಿಯರ್ ಭೈರೇಗೌಡರ ಮಾತು, ಸಜ್ಜನಿಕೆ ಮತ್ತು ಬುದ್ಧಿವಂತಿಕೆ ವರಿಷ್ಠರ ಗಮನಕ್ಕೆ ಬಂದು ಅವರನ್ನು ಯುವ ಕಾಂಗ್ರೆಸ್ ಗದ್ದುಗೆಯ ಸಮೀಪಕ್ಕೆ ತಂದು ನಿಲ್ಲಿಸಿದೆ.

ಆದರೆ ಕಾಂಗ್ರೆಸ್ಸಿನಲ್ಲಿ ಇಂತಹ ಸ್ಥಾನಗಳು ಸುಲಭವಾಗಿ ದೊರೆಯುವುದಿಲ್ಲ, ಹಳೆಹುಲಿಗಳು! ಕಾಲೆಳೆಯಲು [illegible] 'ಕಬಡ್ಡಿ' ಪಟುಗಳು, ಗಾಡ್‌ಫಾದರ್‌ಗಳ [illegible]

ಇಂತಹವರಲ್ಲಿ ಬೊಂಡಾಳ ಜಗನ್ನಾಥ ಶೆಟ್ಟಿ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಮಂಜುನಾಥ ಭಂಡಾರಿಯ ಬಲಗೈ ಬಂಟ. ಶಿವಮೊಗ್ಗದ ಸುಂದರೇಶ್‌ಗೆ ಜಿಲ್ಲಾ ಕಾಂಗ್ರೆಸ್ ಮುಖಂಡರನ್ನು ಹೊರತುಪಡಿಸಿದರೆ ಬೇರ‍್ಯಾರದೂ ಬೆಂಬಲವಿಲ್ಲ, ಧಾರವಾಡದ ಸದಾನಂದ ಡಂಗಣ್ಣನವರ್ ಕಾರಣವಿಲ್ಲದಿದ್ದರೂ ಚಳವಳಿ ಮಾಡಬಲ್ಲಂತಹ 'ಹೋರಾಟಗಾರ.' ಹಿಂಡಸಗೇರಿ ಅಧಿಕಾರದಲ್ಲಿದ್ದರೆ ಅವರ ಹಿಂದಿರುತ್ತಾರೆ. ಸದ್ಯಕ್ಕೆ ಸಚಿವ ಜಬ್ಬಾರ್ ಖಾನ್ ಹೊನ್ನಳ್ಳಿಯ ಹಿಂದೆ ತಿರುಗುತ್ತಿದ್ದಾರೆ. ಹೀಗಾಗಿ ಈ ಊಸರವಳ್ಳಿಯನ್ನು ಯಾರೂ ನಂಬುವುದಿಲ್ಲ,



ಅಧ್ಯಕ್ಷ ಸ್ಥಾನಕ್ಕೆ ನಿಜಕ್ಕೂ ಅರ್ಹತೆ ಇದ್ದವರು ಹಿರಿಯ ಉಪಾಧ್ಯಕ್ಷ ಎಂ.ಬಿ. ಮೋಹನ್ ಕುಮಾರ್, ರಾಜ್ಯ ಉಪಾಧ್ಯಕ್ಷರಾಗಿ, ಹಾಲಿ ನೆಟ್‌ಬಾಲ್ ಫೆಡರೇಷನ್ ಆಫ್ ಕರ್ನಾಟಕದ ಪ್ರಧಾನ ಕಾರ್ಯದರ್ಶಿಯಾಗಿರುವ ಮೋಹನ್ ಕುಮಾರ್, ಜಾತಿಯಲ್ಲೂ ಕೃಷ್ಣಭೈರೇಗೌಡರ, ಒಕ್ಕಲಿಗ ಜಾತಿಗೆ ಸೇರಿದವರು. ಬೆಂಗಳೂರು ನಗರದ ಎಲ್ಲ ಕಾಂಗ್ರೆಸ್ ಶಾಸಕರು ಮೋಹನ್ ಹೆಸರನ್ನೇ ಬೆಂಬಲಿಸಿದ್ದರು. ಆದರೆ ಕೃಷ್ಣ ಭೈರೇಗೌಡರಿಗಿದ್ದ ಇತರ ಹೆಚ್ಚುಗಾರಿಗೆಗಳು ಅವರಿಗೆ ಪ್ರಾಮುಖ್ಯತೆಯನ್ನು ನೀಡಿದವು.

ಕೃಷ್ಣ ಭೈರೇಗೌಡರು ಶಾಸಕರು. ಎಲ್ಲಕ್ಕಿಂತ ಹೆಚ್ಚಾಗಿ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಜನತಾದಳವನ್ನು ತೊರೆದು ಕಾಂಗ್ರೆಸ್ ಸೇರಿದ ರಮೇಶ್‌ಕುಮಾರ್, ಬಸವರಾಜ ರಾಯರೆಡ್ಡಿ, ತಂಪನಗೌಡ ಪಾಟೀಲ್ ಸೇರಿದಂತೆ ಕಾಂಗ್ರೆಸ್ ಸೇರಿದ ಮಾಜಿ ಉಪಮುಖ್ಯಮಂತ್ರಿ ಸಿದ್ದರಾಮಯ್ಯ ಗುಂಪು ಸಹ ಕೃಷ್ಣ ಭೈರೇಗೌಡರ [illegible] ಮೃದುಭಾಷಿ, ವಿದ್ಯಾವಂತ, [illegible] ಲೀಯ ಯುವಕ ಕೃಷ್ಣ ಭೈರೇಗೌಡರ ನಾಯಕತ್ವದಲ್ಲಾದರೂ ಯುವ ಕಾಂಗ್ರೆಸ್ಸಿಗೊಂದು ಗುರಿ, ಧೋರಣೆ, ಕಾರ್ಯಕ್ರಮ ರೂಪಿತ [illegible]


-ಎಂ.ಎಸ್.ಎಸ್.

KSFC

ಉಂಡೆದ್ದು ಹೋದ ನೇತಾಜಿ

ಈ ಪುಣ್ಯಾತ್ಮ ಹುಟ್ಟುವ ಮುನ್ನವೇ ಹೆತ್ತವರಿಗೆ ಅರಿವಾಗಿರಬೇಕು. ನಮಗೆ ಹುಟ್ಟುವ ಮಗ ಅಂತಿಂಥ [illegible] ಮುಂದೆ ದೊಡ್ಡ 'ನೇತಾ' ಆಗುತ್ತಾನೆಂದು. ಆ ದೂರದೃಷ್ಟಿಯಿಂದಲೇ ಈ ಪುಣ್ಯಾತ್ಮನಿಗೆ ನೇತಾಜಿ ಗಣೇಶನ್ ಎಂದು ಹೆಸರಿಟ್ಟರು. ಆದರೆ ದುರಾದೃಷ್ಟ ನೋಡಿ: ಈತ ದೇಶಕ್ಕೆ ನೇತಾ ಅರ್ಥಾತ್ ನಾಯಕ ನಾಗುತ್ತಾನೆಂದು ಇವನ ಅಪ್ಪ-ಅಮ್ಮ ಬಗೆದಿದ್ದರೆ, ಈತ ಭ್ರಷ್ಟರಲ್ಲಿ ಭ್ರಷ್ಟನಾಗಿ, ಲಂಚಕೋರರ 'ನೇತನಾಗಿ' ಸೈತಾನನಂತೆ ಬೆಳೆದುಬಿಟ್ಟ.


ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಲ್ಲಿ (KSFC) ಕಳೆದ ಮೂವತ್ತು ವರ್ಷದಿಂದ ಚಕ್ಕಳಮಕ್ಕಳ ಕಾಲು ಮಡಚಿಕೊಂಡು ಸಿಕ್ಕಿದ್ದೆಲ್ಲವನ್ನು ಬಾಚಿ ತಿಂದು, ಸರ್ಕಾರದ ಈ ಹಣಕಾಸು ಸಂಸ್ಥೆಯನ್ನು ದಿವಾಳಿಯ ಅಂಚಿಗೆ ತಂದು ಆಗಸ್ಟ್ 31ರಂದು ಸಂಸ್ಥೆಯ ಕಾರ್ಯನಿರ್ವಾಹಕ ನಿರ್ದೇಶಕ ಹುದ್ದೆಯಿಂದ ಫಲ-ತಾಂಬೂಲ ಪಡೆದು ಹೊಟ್ಟೆ ನೀವಿಕೊಂಡು ನೆಮ್ಮದಿಯಿಂದ ನಿವೃತ್ತನಾದ ನೇತಾಜಿ ಗಣೇಶನ್ ಎಂಬ ಪ್ರಖ್ಯಾತಿಯ ಸಂಕ್ಷಿಪ್ತ ಪರಿಚಯವಿದು.



ಕೆಎಸ್‌ಎಫ್‌ಸಿಯನ್ನು ಮುಕ್ಕಿದ ನೇತಾಜಿ

ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಬಗ್ಗೆ ಮೊದಲು ಒಂದು ಜೋಕ್ ಚಾಲ್ತಿಯಲ್ಲಿತ್ತು. "ಬಿಸಿಲು ಹೆಚ್ಚಾದಾಗ ಕೊಡೆ ಸಾಲ ಕೊಟ್ಟು, ಮಳೆ ಬಂದಾಗ ಕಿತ್ತುಕೊಳ್ಳುವ ಸಂಸ್ಥೆ" ಎಂದು. ಆದರೆ ಬರಬರುತ್ತ ಇಲ್ಲಿ ಕಿತ್ತುಕೊಳ್ಳುವ ಅಂದರೆ ಸಾಲ ಹಿಂದೆ ಪಡೆಯುವ, ವಸೂಲಿ ಮಾಡುವ ವಿಚಾರವೇ ಬಹುತೇಕ ಅಧಿಕಾರಿಗಳಿಗೆ ಮರೆತುಹೋಯಿತು. ಸರ್ಕಾರದ ಅಂದರೆ ಸಾರ್ವಜನಿಕರ ದುಡ್ಡು ವಸೂಲಾದರೆಷ್ಟು ಬಿಟ್ಟರೆಷ್ಟು? ತಮ್ಮ ಜೇಬು ತುಂಬಿದರಷ್ಟೇ ಸಾಕು ಎಂಬ ಧೋರಣೆಗೆ ಅಧಿಕಾರಿಗಳು ಇಳಿದು ಬಿಟ್ಟರು.

ಅಂಥವರಲ್ಲಿ ಅಗ್ರಗಣ್ಯರೇ ನಮ್ಮ ಕಥಾನಾಯಕ ನೇತಾಜಿ ಗಣೇಶನ್. ಆರಂಭದಲ್ಲಿ ಈತ ದಲಿತ ಪರ ಅಧಿಕಾರಿ, ಸ್ನೇಹಜೀವಿ, ಹಾಸ್ಯ ಪ್ರಜ್ಞೆ ಉಳ್ಳವನು ಎಂದು ಹೆಸರು ಗಳಿಸಿದ್ದ. ಸ್ವತಹ ದಲಿತನಾಗಿದ್ದ ನೇತಾಜಿ ಗಣೇಶನ್‌ಗೆ, ಸಮತಾ ಸೈನಿಕ ದಳದ ಎಂ.ವೆಂಕಟಸ್ವಾಮಿ, ದಲಿತ ಸಂಘರ್ಷ ಸಮಿತಿಯ ಎನ್. ಮೂರ್ತಿ, ಜಿಗಣಿ ಶಂಕರ್‌ರಂತಹ ಮುಖಂಡರೂ ಸೇರಿದಂತೆ ಹಲವಾರು ಜನಪರ ಸಂಘಟನೆಗಳು ಬೆಂಬಲ ವ್ಯಕ್ತಪಡಿಸಿದ್ದರು. ನೇತಾಜಿ ಸಹ ಜನ ಸಾಮಾನ್ಯರಿಗೆ ಸ್ಪಂದಿಸುತ್ತಿದ್ದ. ಆದರೆ ಇದೆಲ್ಲಾ ನಾಟಕ ಎಂದು ಬೆಳಕಿಗೆ ಬಂದಿದ್ದು 1995ರಲ್ಲಿ. ದೇವೇಗೌಡರು ಮುಖ್ಯಮಂತ್ರಿಯಾಗಿದ್ದ ಆ ಸಂದರ್ಭದಲ್ಲಿ ಸಿದ್ಧರಾಮಯ್ಯ ಹಣಕಾಸು ಸಚಿವರಾಗಿದ್ದರು. ಆಗ ಕೆ.ಎಸ್.ಎಫ್.ಸಿ. ವಹಿವಾಟಿನ ಬಗ್ಗೆ ವಿಚಾರಣೆ ನಡೆಸಿದ ವಿಧಾನ ಸಭೆಯ ಸಾರ್ವಜನಿಕ ಉದ್ದಿಮೆಗಳ ಸಮಿತಿ ಸಂಸ್ಥೆಯಿಂದ ಸಾಲ ನೀಡುವ ವಿಚಾರದಲ್ಲಿ ನಡೆದಿರುವ ಭಾರಿ ಅವ್ಯವಹಾರವನ್ನು ಬಹಿರಂಗಪಡಿಸಿ ವರದಿ ನೀಡಿತು. ಈ ವರದಿಯ ಆಧಾರದ ಮೇಲೆ ಅಂದಿನ ಹಣಕಾಸು ಇಲಾಖೆಯ ಕಾರ್ಯದರ್ಶಿ ಹಾಗೂ ಕೆ.ಎಸ್.ಎಫ್.ಸಿ.ಯ ಅಧ್ಯಕ್ಷರಾಗಿದ್ದ ಗುರುಚರಣ್‌ರವರು, ಆಗ ಇನ್ನೂ ಪ್ರಧಾನ ವ್ಯವಸ್ಥಾಪಕನಾಗಿದ್ದ ನೇತಾಜಿ ಗಣೇಶನ್ ಅಮಾನತ್ತಿಗೆ ಶಿಫಾರಸ್ಸು ಮಾಡಿದರು.



ಹಾಲಿ ಎಂಡಿ ಉಮೇಶ್

ಆಗಲೂ ನೇತಾಜಿ ದಲಿತ ಸಂಘಟನೆಗಳ ಮೂಲಕ ಸಚಿವರುಗಳ ಮೇಲೆ ಒತ್ತಡ ತಂದು ಬಚಾವ್ ಆದ. ಗುರುಚರಣ್ ಸಹ ಕೆಲ ಅವಧಿಯ ನಂತರ ವರ್ಗವಾದರು. ಅಲ್ಲಿಗೆ ಈ ಪ್ರಕರಣಕ್ಕೆ ಅಲ್ಪವಿರಾಮ ಬಿದ್ದಿತ್ತು, ಆದರೆ ಮಧ್ಯೆ ಮಧ್ಯೆ ಈ ಪ್ರಕರಣಕ್ಕೆ ಜೀವ ಬರುತ್ತಿತ್ತು. ಹೀಗೆ ನೇತಾಜಿಯ ಪ್ರಕರಣ 10 ಬಾರಿ ಕೆ.ಎಸ್.ಎಫ್.ಸಿ. ಆಡಳಿತ ಮಂಡಳಿಯ ಮುಂದೆ ಚರ್ಚೆಗೆ ಬಂದಿದೆ. ಆದರೆ ಪರಿಣಾಮ-ಫಲಿತಾಂಶ ಶೂನ್ಯ.


ಈ ಹೊತ್ತಿಗಾಗಲೇ ದಲಿತ ಸಂಘಟನೆಗಳು ನೇತಾಜಿಯ ಕಲ್ಯಾಣಗುಣಗಳನ್ನು ತಿಳಿದು ದೂರ ಸರಿಸಿದ್ದವು. ಸಂಸ್ಥೆಯ ಪರಿಶಿಷ್ಟ ಜಾತಿ-ಪರಿಶಿಷ್ಟ ನೌಕರರ ಸಂಘವೇ ಇವನ ವಿರುದ್ಧ ತಿರುಗಿಬಿದ್ದಿತ್ತು. ಆದರೆ ಆರ್ಥಿಕವಾಗಿ ಮತ್ತು ರಾಜಕೀಯವಾಗಿ ನೇತಾಜಿ ಹೇಗೆ ಬೆಳೆದಿದ್ದನೆಂದರೆ ಅವನ ಚರ್ಮ ಉಳಿಸಿಕೊಳ್ಳಲು ಈಗ ಅವನಿಗೆ ಯಾವ ದಲಿತ ಸಂಘಟನೆಯೂ ಬೇಕಿರಲಿಲ್ಲ. ಅವನ ಮಗ್ಗುಲಲ್ಲಿ-ಬಗಲಲ್ಲಿ ಬೋಗಸ್ ಸಾಲ ಪಡೆದು ನಾಮ

ಎಂ.ಎಸ್. ಸತೀಶ್

ತೀಡುವ ಮಾರ್ವಾಡಿ ಸಿಂಧಿಗಳ ದಂಡೇ ತುಂಬಿತ್ತು. ಅದಲ್ಲದೆ ತನ್ನ ಹುಟ್ಟೂರಾದ ತಮಿಳುನಾಡಿನ ತಿರಪತ್ತೂರಿನ ಹಲವಾರು ಬೋಗಸ್ ಉದ್ಯಮಿಗಳು ಇವನ ಸುತ್ತ ನೆರೆದಿದ್ದರು. ಇಂಥ 59 ಬೋಗಸ್ ಕಂಪನಿಗಳಿಗೆ ಸಾಲ ನೀಡಿ ಸಂಸ್ಥೆಗೆ ಕೋಟ್ಯಂತರ ರೂಪಾಯಿ ನಷ್ಟ ಮಾಡಿದ ಅಪಾರ ಕೀರ್ತಿ ಈ ನೇತಾಜಿಯದು (ಬಾಕ್ಸ್ ನೋಡಿ).

ಕೆ.ಎಸ್.ಎಫ್.ಸಿ.ಯ ಪೀಣ್ಯ ಶಾಖೆಯೊಂದರಲ್ಲಿ ನಡೆದಿರುವ ಅವ್ಯವಹಾರವನ್ನು ನೋಡಿ: ಈ ಶಾಖೆಯಿಂದ ಹಲವರ ಹೆಸರಲ್ಲಿ ಖಾಸಗಿ ಬಸ್ಸುಗಳ ಖರೀದಿಗೆ ಸಾಲ ನೀಡಲಾಗಿತ್ತು. ಇಂಥ ಹಲವಾರು ಬಸ್ಸುಗಳು ನಾಪತ್ತೆಯಾಗಿವೆ ಎಂದು ಶಾಖೆಯ ವ್ಯವಸ್ಥಾಪಕರು ನೀಡಿರುವ ವರದಿಗೆ ನೇತಾಜಿ ಅಸ್ತು ಎಂದು ಹೇಳಿ, ಕಡತವನ್ನೇ ನಾಪತ್ತೆಗೊಳಿಸಿದ್ದಾನೆ. ಇದರ ಸಾಲದ ಮೊತ್ತವೇ 20ಕೋಟಿ ರೂಪಾಯಿ ಇದೆ. ಭೋಗಸ್ ಸಾಲ ಕೊಡುವುದಲ್ಲದೆ ಸಾಲ ತೀರಿಸುವುದರಿಂದ ತಪ್ಪಿಸಿಕೊಳ್ಳುವುದು ಹೇಗೆ? ಎಂದು ಸಲಹೆ ಕೊಡುವುದರಲ್ಲೂ ನೇತಾಜಿ ಎಕ್ಸ್‌ಪರ್ಟ್.

ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕಿನಲ್ಲಿ ಅಂದಿನ ಶಾಸಕ ಲಾಳನಕೆರೆ ಶಿವರಾಮೇಗೌಡ ತೆಂಗಿನ ನಾರಿನ ಉತ್ಪನ್ನಗಳ ತಯಾರಿಕಾ ಘಟಕ (ಕಾಯರ್ ಪ್ರಾಡಕ್ಟ್) ಆರಂಭಿಸುವುದಾಗಿ 25 ಲಕ್ಷ ರೂಪಾಯಿ ಕೆ.ಎಸ್.ಎಫ್.ಸಿ. ಯಿಂದ ಸಾಲ ಪಡೆದಿದ್ದ. ಈ ಘಟಕದಲ್ಲಿ ಅಸಲಿ ತುಂಬಿದ್ದು ತುಕ್ಕು ಹಿಡಿದಿದ್ದ ಕಬ್ಬು ಹಿಂಡುವ ಆಲೆಮನೆ ಯಂತ್ರಗಳು, ಇತ್ಯಾದಿ ಸ್ಕ್ರ್ಯಾಪ್ ಐಟಂಗಳು. ಇಂಥ ಘಟಕಕ್ಕೆ ಒಂದು ರಾತ್ರಿ ಏಕಾಏಕಿ ಬೆಂಕಿ ಬಿದ್ದು ಎಲ್ಲವೂ ಬೆಂಕಿ ಪಾಲಾಯ್ತು. ಶಿವರಾಮೇಗೌಡನಿಗೆ ವಿಮೆ ಹಣ ಬಂತು, ಆ ಕಡೆ ಅರ್ಧ ಸಾಲವೂ ಮನ್ನಾ ಆಯ್ತು. ಇಂಥ ಅದ್ಭುತವಾದ ಐಡಿಯಾ ಕೊಟ್ಟ ಮಹಾನುಭಾವ ಈ ನೇತಾಜಿಯಂತೆ.



ಡಿಸೋಜಾನ ಪ್ರತಿಭಟನೆ ನಾಟಕ

ಮತ್ತೊಬ್ಬ ನಟರಿಗೆ ಸೇರಿದ ಜಿಗಣಿಯಲ್ಲಿನ ಕೈಗಾರಿಕೆ 'ಸಿಕ್' ಎಂದು ಘೋಷಿಸಿ ಅದರ ಸಾಲ ಮನ್ನಾ ಮಾಡಿಸಿದ ಕೀರ್ತಿಯೂ ನೇತಾಜಿಗೆ ಸೇರಬೇಕು. ನಟರ ಕೈಗಾರಿಕೆಯೇನೋ ನಿಜಕ್ಕೂ ಸಿಕ್ ಆಗಿತ್ತು. ಆದರೆ ಒಂದು ತಿಂಗಳ ಇನ್‌ಸ್ಟಾಲ್‌ಮೆಂಟ್ ಕಟ್ಟದಿದ್ದಲ್ಲಿ ರಿಕ್ಷಾ ಮಾಲೀಕರನ್ನು ನಕ್ಷತ್ರಿಕರಂತೆ ಕಾಡುವ ಕೆ.ಎಸ್.ಎಫ್.ಸಿ.ಯ ಸೀಜರ್‌ಗಳಿಗೆ ಕೋಟ್ಯಾಧಿಪತಿ ನಟರ ಮೇಲೇಕೆ ಇಂಥ ಕರುಣೆ? ಎಲ್ಲಾ ನೇತಾಜಿಯ ನಾಟಕವಯ್ಯ.

ಭ್ರಷ್ಟತೆಯ ಸಾಕಾರಮೂರ್ತಿ ನೇತಾಜಿ ಈಗ ನಿವೃತ್ತಿಯಾಗಿದೆ. ಅಕ್ರಮ; ಅವ್ಯವಹಾರ ಎಂದು ಪ್ರತಿ ಪಕ್ಷದ ಸೀಟಿನಿಂದ ಸ್ಪ್ರಿಂಗ್‌ನಂತೆ ಜಿಗಿಯುತ್ತಿದ್ದ ಯಡಿಯೂರಪ್ಪನವರ ಕೈಯಲ್ಲೇ ಹಣಕಾಸು ಇಲಾಖೆ ಇದೆ. ನೇತಾಜಿ ಅಂಡಡಿ ಬಚ್ಚಿಟ್ಟುಕೊಂಡಿರುವ ಹಗರಣದ ಕಡತಗಳನ್ನು ಈಗಲಾದರೂ ಹೊರಗೆಳೆದು ತನಿಖೆ ಮಾಡಿಸಿದರೆ ಅವರಿಗೂ, ಅವರ ಖಾತೆಗೂ ಒಂದು ಗೌರವ. ಸಾರ್ವಜನಿಕ ಹಣ ಹೀಗೆ ಹರಿದು ಹೋಗುವುದನ್ನು ತಪ್ಪಿಸಿದ ಕೀರ್ತಿಯೂ ಲಭಿಸುತ್ತದೆ ಅಷ್ಟರವರೆಗೆ ಅವರ ಸರ್ಕಾರವಿದ್ದರೆ.

ಇಷ್ಟೆಲ್ಲಾ ಹೇಳಿದ ಮೇಲೆ ನೇತಾಜಿಯ ಮತ್ತೊಂದು ಚೇಷ್ಟೆಯ ಬಗ್ಗೆ ಹೇಳದಿದ್ದರೆ ವರದಿ ಅಪೂರ್ಣವಾಗುತ್ತದೆ. ನೇತಾಜಿ ಗಣೇಶನ್ ಎಂದರೆ ಸಾಕು ಕೆ.ಎಸ್.ಎಫ್. ಸಿಯ ಹೆಡ್‌ಆಫೀಸಿನ ಮಹಿಳಾ ಉದ್ಯೋಗಿಗಳು ಒಂದೋ ಸಿಡುಕುತ್ತಾರೆ. ಇಲ್ಲವೆ ಮುಸಿಮುಸಿ ನಗುತ್ತಾರೆ. ಕೆಲವೇ ಕೆಲವರು ನಾಚುತ್ತಾರೆ, ಅದೇಕೋ ಗೊತ್ತಿಲ್ಲ, ಬಲ್ಲವರೇ ಬಲ್ಲರು.

	M/s Lan Randa Industries, Ltd.,	31.	M/s. Mittal Steel Ltd.,
	M/s. Unipon Computing Ltd.	32.	M/s. Kamadhenu Oil Extractions (BAS Oil Industries Pvt. Ltd.,)
	M/s. Cauvery Software Engineering System.	33.	M/s. Venkatadri Cotton Mills Pvt. Ltd.,
	M/s European Software Alliance Ltd.	34.	M/s. Oceanic Peninsula Pvt. Ltd.,
	M/s. S[illegible] Software Technology.	35.	M/s. Delbot Systems Pvt. Ltd.,
	M/s. Samart Ashoka Exports Ltd.	36.	M/s. Chitradyrga Sunflower Oil Complex.
	M/s. Indiana Diary Specialities.	37.	M/s. Lakshmi Balaji Padmavathi Ginning.
	M/s. Deccan Granites Ltd.	38.	M/s. Empire Digital Prints.
	M/s. Sundara Industries.	39.	M/s. Sandur Udyog Ltd.,
10.	M/s. Sajawat Industries.	40.	M/s Namasthe Exports Ltd.,
11.	M/s. Sajawat Industries Pvt Ltd.,	41.	M/s Ashok labels, Bangalore
12	M/s. C.R.B. Corporation Ltd.,	42.	M/s. Kiran Nursing Home, Bhadravathi, Shimoga
13.	M/s. Odyssey Video Communication Ltd.,	43	M/s. Lotus Allied, Rajajinagar
14	M/s P R T Exports Ltd.,	44.	M/s. Venkateshwara Silk twisting Factory.
15.	M/s. Anco Communication Ltd.,	45.	M/s. S.B. Ullal Ginning Factory, Haveri
16.	M/s South India Steel Industries Ltd.,	46	M/s. Karnataka Chemsyn Ltd., Bangalore
17	M/s S. Kumar Synfabs Ltd.	47	M/s. P.M. Industries Ltd., Bangalore
18	M/s Jamuna Cast Metals Ltd.,	48	[illegible] Pvt. Ltd., Bidar
19	M/s. Oriental Select Granites Pvt. Ltd.,	49	Boggaram Text Prints Pvt., Ltd., & [illegible] Trading Corporation
20	M/s. Peninsula Milling Company Ltd.,	50	Chennagiri Cements
21	M/s. Kashyap Coated Industries Pvt. Ltd.,	51.	Ashirwad Hotels & Resorts, Murudeshwara,
22	M/s. Shimoga Steels Ltd.	52.	Ravhan Minerals and Chemicals Pvt. Ltd.,
23	M/s. Vaishnavi Engineers & Contractors.		Vasa Cements & Minerals Pvt., Ltd., Chitradurga.
24	M/s A.P. Rocks Pvt Ltd.,		[illegible] Industries, Bannergatta Road
25	M/s. Alpha Precision Components.		Cold Extrusions Pvt. Ltd., Bannergatta Road.
26	M/s. Great Western Industries Ltd.,		[illegible] Group -Rs. 7.5 crores
27	M/s. Balarghat Transport Pvt. Ltd.,		Indian Diery -Rs. 1.5 crores.
28	M/s B. [illegible] Reddy	58	Mec Capacitors Pvt. Ltd., -Rs. 2.5 crores
29	M/s. Master Stripes Pvt. Ltd.,	59	Dandeli Steels 3... 10.5 crores.
30	M/s. Bhandari Udyog Ltd.,		

ಸಾಲ ಪಡೆದಿರುವ ನಕಲಿ ಕಂಪನಿಗಳ ಪಟ್ಟಿ

ಇಲ್ಲಿ ಹೆಣದ ಹೆಸರಲ್ಲೂ ಸಾಲ ಲಭ್ಯ!

ನೇತಾಜಿಯ ಮತ್ತೊಂದು ಸಾಹಸವೆಂದರೆ ಮೃತ ವ್ಯಕ್ತಿಗೆ ಸಾಲ ಮಂಜೂರು ಮಾಡಿರುವುದು. ಕೋಲಾರದ ಟ್ಯೂಬ್‌ವೆಲ್ ಬೋರ್‌ವೆಲ್ ಕಂಪನಿಯ ಮಾಲೀಕ ಆರ್. ಜಾನಕಿರಾಂ ಎಂಬಾತನ ಹೆಸರಿಗೆ ಬೋರ್‌ವೆಲ್ ಕೊರೆಯುವ ಸಾಲ ಮಂಜೂರು ಮಾಡಿದವನು ನೇತಾಜಿ. ಆದರೆ ಫಲಾನುಭವಿ ಜಾನಕೀರಾಂ ಸಾಲ ಪಡೆಯುವ 8 ವರ್ಷದ ಮುನ್ನವೇ ಶಿವನ ಪಾದ ಸೇರಿದ್ದರೆಂದು ಸದನ ಸಮಿತಿ ಪತ್ತೆ ಹಚ್ಚಿ ವರದಿ ನೀಡಿದೆ.


ಅದೇ ರೀತಿ ಕೋಲಾರದ ಬಾಲಾಜಿ ಎಂಟರ್‌ಪ್ರೈಸಸ್, ರಾಘವೇಂದ್ರ ಎಂಟರ್‌ಪ್ರೈಸಸ್ ಮೂಲಕ 100 ಕೊಳವೆ ಬಾವಿಗಳನ್ನು ಕೊರೆಯುವುದಕ್ಕೆ ತಲಾ 38 ಲಕ್ಷ ರೂಪಾಯಿ ಇನ್‌ವಾಯ್ಸ್ ಪಡೆದು ಇದರಲ್ಲಿ ಫಲಾನುಬವಿಗಳಿಗೆ ತಲಾ 18 ಲಕ್ಷ ರೂಪಾಯಿ ನೀಡಿ, ಅನಾಮತ್ತು 2 ಕೋಟಿ ರೂಪಾಯಿ ಸ್ವಾಹ ಮಾಡಿದ ಆರೋಪ ನೇತಾಜಿಯ ಮೇಲಿದೆ. ಈ ಆರೋಪದ ಬಗ್ಗೆ ದಿನಾಂಕ 3 ಮಾರ್ಚ್ 2006 ರಂದು ಕೆ.ಎಸ್.ಎಫ್.ಸಿ. ಆಡಳಿತ ಮಂಡಳಿ ಸಭೆಯೂ ನಡೆದಿದೆ. ಆದರೂ ನೇತಾಜಿ ಕೂದಲೂ ಕೊಂಕದಂತೆ ನಿವೃತ್ತನಾಗಿದ್ದಾನೆಂದರೆ ಸರ್ಕಾರದ ನಾಮರ್ದಾತನದ ಬಗ್ಗೆ ಇದಕ್ಕಿಂತ ಉತ್ತಮ ಉದಾಹರಣೆ ಬೇಕೆ? ಸರ್ಕಾರ ಕೂಡಲೇ ಇವನ ನಿವೃತ್ತಿ ಸೌಲಭ್ಯಗಳಿಗೆ ತಡೆ ನೀಡಿ ಈ ಬಗ್ಗೆ ತನಿಖೆಗೆ ಆದೇಶ ನೀಡುವುದು ಅಗತ್ಯ.

ಬ್ರೆಡ್ ಡಿಸೋಜನ ಹಿಕ್ಮತ್

ನೇತಾಜಿಯ ಈ ಅವ್ಯವಹಾರದ ವಿರುದ್ಧ ಈವರೆಗೆ ಯಾರೂ, ಯಾವ ಸಂಘಟನೆಯೂ ಬಹಿರಂಗವಾಗಿ ಚಕಾರ ಎತ್ತಿರಲಿಲ್ಲ. ಆದರೆ ಇದ್ದಕ್ಕಿದ್ದಂತೆ ಆಗಸ್ಟ್ 29ರ ಬೆಳಗ್ಗೆ ಕೆ.ಎಸ್.ಎಫ್.ಸಿ. ಕೇಂದ್ರ ಕಚೇರಿಯ ಮುಂದೆ "ಕರ್ನಾಟಕ ಪತ್ರಕರ್ತರ ಹೋರಾಟ ಸಮಿತಿ" ಎಂಬ ಹೆಸರಿನಲ್ಲಿ ಬೆರಳೆಣಿಕೆಯಷ್ಟು ಮಂದಿ ಪ್ಲೇಕಾರ್ಡುಗಳನ್ನು ಹಿಡಿದು ನೇತಾಜಿಯ ವಿರುದ್ಧ ಪ್ರತಿಭಟನೆ ಆರಂಭಿಸಿಬಿಟ್ಟರು.



ಬ್ರೆಡ್ ಡಿಸೋಜ



ವೆಂಕಟೇಶ್ ಬೋವಿ

ಇದ್ಯಾವುದಪ್ಪ ಸಮಿತಿ? ಯಾರಪ್ಪ ಇದರ ನಾಯಕರು ಎಂದು ನೋಡಿದರೆ, ಮುಂದಿದ್ದವರು ಹ್ಯಾರಿ ಡಿಸೋಜ ಅಲಿಯಾಸ್ "ಬ್ರೆಡ್ ಡಿಸೋಜ". ಶಾಸಕರ ಭವನದಲ್ಲಿ ಬ್ರೆಡ್, ಬನ್ನು ಮಾರುತ್ತಿದ್ದ ಈತ ಈಗ "ಶಾಸಕರ ವಾರ್ತಾ ಪತ್ರ" ಮತ್ತು "ಕೈಗಾರಿಕಾ ಪತ್ರಿಕೆ" ಎಂಬ ಎರಡು 'ಅಕಾಲಿಕ' ಪತ್ರಿಕೆಗಳ ಸಂಪಾದಕ. ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲಾ ಪತ್ರಕರ್ತರ ಸಂಘದ ಸ್ವಯಂ ಘೋಷಿತ ಅಧ್ಯಕ್ಷ.

1995ರಿಂದ ನೇತಾಜಿಯ ಅವ್ಯವಹಾರ ನಿರಂತರವಾಗಿ ಸಾಗುತ್ತಿದ್ದರೂ ಈ ಬ್ರೆಡ್ ಡಿಸೋಜನಿಗೆ ನೇತಾಜಿ ನಿವೃತ್ತಿಯಾಗುವ ಎರಡು ದಿನ ಮುನ್ನ ಈ ಬಗ್ಗೆ ಮಾಹಿತಿ ದೊರೆಯಿತೆ? ಈ ವಿಚಾರದ ಆಳಕ್ಕೆ ಇಳಿದು ನೋಡಿದರೆ ಇರುವ ವಿಚಾರವೇ ಬೇರೆ. ನೇತಾಜಿಯ ಸಕಲ ಕಳ್ಳ ವ್ಯವಹಾರಗಳ ಬಗ್ಗೆ ಮಾಹಿತಿ, ದಾಖಲೆಗಳನ್ನು ಸಂಗ್ರಹಿಸಿ ಅದನ್ನು ಸಂಬಂಧಪಟ್ಟ ಅಧಿಕಾರಿಗಳು, ಸಚಿವರು ಮತ್ತು ಲೋಕಾಯುಕ್ತರಿಗೆ ನೀಡಿ ಸತತ ಹೋರಾಟ ನಡೆಸುತ್ತಿದ್ದವರು ದಲಿತ ಮುಖಂಡ ವೆಂಕಟೇಶ ಬೋವಿ. ಇದರಿಂದ ಯಾವುದೇ ಪ್ರಯೋಜನವಾಗಿರಲಿಲ್ಲ.


ಇಂಥ ಸಂದರ್ಭದಲ್ಲಿ ಕೆಲವು ತಿಂಗಳ ಹಿಂದೆಯೇ ವೆಂಕಟೇಶ್ ಬೋವಿಯಿಂದ ದಾಖಲೆಗಳನ್ನು ಪಡೆದ ಬ್ರೆಡ್ ಡಿಸೋಜ, ತನ್ನ ಸಮಯಕ್ಕೆ ಕಾಯುತ್ತಿದ್ದನೆಂದು ಕಾಣುತ್ತದೆ. ಆಗಸ್ಟ್ 31ರಂದು ನೇತಾಜಿ ನಿವೃತ್ತನಾಗುವ ಮಾಹಿತಿ ಮೊದಲೇ ತಿಳಿದಿದ್ದ ಬ್ರೆಡ್ ಡಿಸೋಜ, ಆ ಸಮಯದಲ್ಲಿ ನೇತಾಜಿಗೆ ಇರುಸು-ಮುರುಸು ಉಂಟು ಮಾಡಿ ಇಕ್ಕಟ್ಟಿಗೆ ಸಿಲುಕಿಸುವ ಸನ್ನಿವೇಶವನ್ನು ನಿರ್ಮಿಸಿದ್ದಾನೆ. ಆ ಸನ್ನಿವೇಶದ 'ಲಾಭ'ವನ್ನು ಪಡೆದು ಯಥಾಶಕ್ತಿ ವಸೂಲಿ ಮಾಡಿದ್ದಾನೆ.

ಇಲ್ಲವಾದಲ್ಲಿ ಆಗಸ್ಟ್31ರಂದು ನೇತಾಜಿ ತನ್ನ ಅಧಿಕಾರ ಬಿಟ್ಟುಕೊಡುವ ಸಂಧರ್ಭದಲ್ಲಿ "ಧೀಮಂತ ಪತ್ರಕರ್ತ" ಬ್ರೆಡ್ ಡಿಸೋಜ, ಬಿರಿಯಾನಿ ತಿಂದು ಮನೆಯಲ್ಲಿ ಮಲಗಿರುತ್ತಿದ್ದನೆ? ಒಟ್ಟಿನಲ್ಲಿ ಇವನನ್ನು ನಂಬಿ ಬಂದ ವೆಂಕಟೇಶ ಬೋವಿ, ಸಲೀಂಉಲ್ಲಾಖಾನ್, ವೆಂಕಟೇಶ್‌ಗೌಡ ಮತ್ತು ವಿಜಯಕುಮಾರ್ ತರಹದ ಅಮಾಯಕರು ಮೋಸ ಹೋದರು.

ಸಿಕ್ಕಿಬಿದ್ದ ಕಾಂಗ್ರೆಸ್ ಕಳ್ಳ?

ಶಿವಮೊಗ್ಗವನ್ನು ಕಿತ್ತು ತಿನ್ನುತ್ತಿದ್ದ ಪಾತಕಿಗಳು ಒಬ್ಬನಾಗಿಯಾದರೂ ಸಿಕ್ಕಿಬೀಳತೊಡಗಿದ್ದಾರೆ. ಈ ಪಾತಕಿಗಳ ಪೈಕಿ ಇವನಿಬ್ಬರನ್ನು ಪೊಲೀಸರು ಎಂದೂ ಹಿಡಿಯಲಾಗುತ್ತಿರಲಿಲ್ಲ. ಏಕೆಂದರೆ ಒಬ್ಬ ಕಾಂಗ್ರೆ ಕೋಟೆಯೊಳಗಿದ್ದ ಮೊತ್ತೊಬ್ಬನ ಬೆಂಗಾವಲಿಗೆ ಬಂಗಾರಪ್ಪ ಇದ್ದರು.

ಕಾಂಗ್ರೆ ಭದ್ರಕೋಟೆಯೊಳಗಿದ್ದ ಯುವಕ ಎನ್. ರಮೇಶ್‌ನ ಮಂಡನೆಯ ಮುಖ ಮತ್ತು ಕಣ್ಣುಗಳ ರಚನೆಯಿಂದ ಬೊಂಡ ರಮೇಶ್ ಎಂದೇ ಖ್ಯಾತಿ ಪಡೆದವನು. ನೋಡಲು ಈತ ಸುಂದರನಾಗಿದ್ದರೂ ಈತನ ಕೃತ್ಯಗಳು ಮಾತ್ರ ಕರಾಳ. ತಾನು ಕಾಂಗ್ರೆಸ್ ಪಕ್ಷದ ಮಹಾನ್ ನಾಯಕ ಎಂಬಂತೆ ಪೋಸ್ ಕೊಡುತ್ತಿದ್ದ ಇವನ ಅಸಲಿ ವ್ಯಕ್ತಿತ್ವ ಈಗ ಕಳಚಿ ಬಿದ್ದಿದೆ.


ಸುರೇಶ್

ಈತ ತನ್ನ ಜೀವನದಲ್ಲಿ ಯಾವ ಕೆಲಸ ಮಾಡಿರದಿದ್ದರೂ ನಲವತ್ತು ಲಕ್ಷ ರೂಪಾಯಿ ಬೆಲೆಯ ಮನೆ ಕಟ್ಟಿಸಿದ್ದಾನೆಂದರೆ ಈತ ಇನ್ನೆಷ್ಟು ಅಕ್ರಮ ವ್ಯವಹಾರಗಳಲ್ಲಿ ತೊಡಗಿರಬಹುದೆಂದು ನೀವೇ ಊಹಿಸಿ. ಇವನೊಂದಿಗೆ ಇರುವವನು ಎಲ್.ಪಿ.ಸುರೇಶ್ ಎಂಬಾತ. ಈತ ಬಂಗಾರಪ್ಪನವರ ಸಮಾಜವಾದಿ ಪಕ್ಷದ ಸದಸ್ಯ ಮತ್ತು ರಮೇಶನಷ್ಟೇ ನಟೋರಿಯಸ್.

ಈ ಇಬ್ಬರು ಪುಂಡರ ತಂಡದ ಕಾರ್ಯತಂತ್ರ ಇಂತಹದ್ದೆಂದರೆ, ಟೆಂಡರುದಾರರನ್ನು ಬೆದರಿಸಿ ಹಣ ಕೀಳಿಯುವುದು, ಅಥವಾ ತಾವೇ ಟೆಂಡರು ಪಡೆದು ಹಣ ಹೊಡೆಯುವುದು. ಇಂತಹದ್ದೇ ಘನ ಕಾರ್ಯಕ್ಕೆ ಕೈಹಾಕಿ ಸಿಕ್ಕಿಬಿದ್ದಿದ್ದಾರೆ, ಈಗ ಕಂಬ ಏಣಿಸುತ್ತಿದ್ದಾರೆ. ಮೊನ್ನೆ ಶಿವಮೊಗ್ಗೆಯಲ್ಲಿ ಬಿ.ಎಸ್.ಎನ್.ಎಲ್. ಸಂಸ್ಥೆಯವರು ಕೇಬಲ್ ಅಳವಡಿಸಲು ಟೆಂಡರ್ ಕರೆದಿದ್ದರು. ಇದಕ್ಕೊಂದು ರಾಜ್ಯದ ನಾನಾ ಮೂಲೆಗಳಿಂದ ಗುತ್ತಿಗೆದಾರರು ಬಂದಿದ್ದರು. ಇಂತಹ ಯಾವುದೇ ಟೆಂಡರ್ ಸಮಯಕ್ಕೆ ಸಜ್ಜಾಗಿ ಕೂತು, ಸಂಬಂಧಪಟ್ಟವರನ್ನು ಬೆದರಿಸಿ ಹಣ ವಸೂಲಿ ಮಾಡುವ ರಮೇಶನ ಗ್ಯಾಂಗ್ ಈ ಬಾರಿಯೂ ವ್ಯವಸ್ಥಿತ ಸಂಚನ್ನು ರೂಪಿಸಿದ್ದವಾಗಿತ್ತು.


ಅದರಂತೆ ಹಲವು ಟೆಂಡರುದಾರರನ್ನು ಬೆದರಿಸಿ ಹಣ ಕೇಳಿತು. ಹೆದರಿದ ಗುತ್ತಿಗೆದಾರರು ಹಣ ಕೊಡಲು ಒಪ್ಪಿದರು. ಈ ಟೆಂಡರ್ ಸಲ್ಲಿಸುವ ಪ್ರಕ್ರಿಯೆಯಲ್ಲಿ ಕಾಂಗ್ರೆಸ್‌ನ ಅಲ್ಪಸಂಖ್ಯಾತ ನಾಯಕರು ಸಮೀರ್ ಅಹ್ಮದ್ ಮುಂದಾಳತ್ವದಲ್ಲಿ ಸಭೆ ಏರ್ಪಡಿಸಿದ್ದರು. ಈ ಕಾರಣಕ್ಕಾಗಿಯೇ ಬೊಂಡ ರಮೇಶನಿಗೆ ದರೋಡೆ ಕಾರ್ಯದಲ್ಲಿ ಮುಂದಾಳತ್ವ ವಹಿಸಲಾಗಿರಲಿಲ್ಲ.

ಆದರೂ ಮೊಬೈಲ್ ಫೋನುಗಳಿಲ್ಲವೆ? ಆದರಿಂದಲೇ ಸಮೀರ್ ಜೊತೆಗಿದ್ದರೂ ತನ್ನ ತಮ್ಮ ಸೀನನಿಗೆ ಹೇಗೆ ವ್ಯವಹಾರ ಕುದುರಿಸಬೇಕು, ಎಷ್ಟು ಕೇಳಬೇಕು, ಇಡೀ ಟೀಮು ಎಷ್ಟೆಷ್ಟು ಹಂಚಿಕೊಳ್ಳಬೇಕೆಂದು ನಿರ್ದೇಶನ ಕೊಟ್ಟಿದ್ದಾನೆ. ಈ ಹಿಂದೆಯೂ ಇಂತಹದೇ ದಂಧೆಯಿಂದ ಲಕ್ಷಾಂತರ ರೂಪಾಯಿಗಳನ್ನು ವಸೂಲಿ ಮಾಡಿ ಸುಮಾರು ನೂರು ಜನ ಹಂಚಿಕೊಂಡು ತಿಂದ ಇತಿಹಾಸ ಈ ರಮೇಶನ ಗ್ಯಾಂಗಿಗಿದೆಯಾದ್ದರಿಂದ, ಈ ಬಾರಿಯೂ ಚೆನ್ನಾಗಿಂಯೇ ಹಣ ಕೀಳಲು ಅವರೆಲ್ಲ ತಯಾರಾಗಿದ್ದರು. ಪ್ಲಾನ್ ಪ್ರಕಾರ ಟೆಂಡರ್ ನಡೆಯುವ ದಿನ ಬಿ.ಎಸ್.ಎನ್.ಎಲ್. ಕಚೇರಿ ಬಳಿ ಇದ್ದ ಗುಲ್ಬರ್ಗಾದ ಗುತ್ತಿಗೆದಾರ ಖಾಸಿಂ ಸಾಬ್ ಹೊರ ಬಂದ ಕೂಡಲೇ ಆತನನ್ನು ಬಂಧಿಸಿದ ದರೋಡೆಕೋರರು, ಅವರನ್ನು ಕಾರಿನಲ್ಲಿ ಕೂರಿಸಿಕೊಂಡು 40 ಸಾವಿರ ರೂ. ಗಳನ್ನು ಕಿತ್ತುಕೊಂಡರಲ್ಲದೆ, ಆತನ ಟೆಂಡರ್ ಫಾರಂ ಹರಿದು ಬಿಸಾಡಿದ್ದಾರೆ. ಇತ್ತೀಚೆಗೆ ಲವ ಕುಶ ಎಂಬ ರೌಡಿಗಳ ಕೊಲೆ ಹಾಡು ಹಗಲೇ ನಡೆದ ನಂತರ ಶಿವಮೊಗ್ಗೆಯ ರೌಡಿ ನಿಗ್ರಹ ದಳ ಚುರುಕಾಗಿದೆ. ರಮೇಶನ ತಂಡ ವಸೂಲಿ ಮಾಡುತ್ತಿದ್ದದ್ದು ಗೊತ್ತಾಗುತ್ತಿದ್ದಂತೆ ರೌಡಿ ನಿಗ್ರಹ ದಳದ ಇನ್ಸ್‌ಪೆಕ್ಟರ್ ಮಾದಪ್ಪನವರು ಸ್ಥಳಕ್ಕೆ ದಾಳಿಯಿಟ್ಟಿದ್ದಾರೆ. ಆದರೆ ಪೊಲೀಸರನ್ನು ಕಂಡಕೂಡಲೆ ಅಲ್ಲಿದ್ದ ಎಲ್ಲರೂ ಪರಾರಿಯಾಗಿ ಐದಾರು ಜನ ಮಾತ್ರ ಸಿಕ್ಕಿಬಿದ್ದಿದ್ದಾರೆ.

ಶಿವಮೊಗ್ಗ

ಮೊದಲೇ ಸಿಟ್ಟಿನಿಂದ ಕುದಿಯುತ್ತಿದ್ದ ಪೊಲೀಸರು ರಮೇಶನ ಗ್ಯಾಂಗನ್ನು ಅರೆಸ್ಟು ಮಾಡಿ ಅವರನ್ನೆಲ್ಲ ರಿಪೇರಿ ಮಾಡಲು ಶುರುಮಾಡಿದ್ದಾರೆ. ಆಗ ಅವರಲ್ಲೊಬ್ಬ "ನಾನು ಸಮಾಜವಾದಿ ಪಕ್ಷದ ಮುಖಂಡ ಸುರೇಶ್" ಎಂದು ಬಹಳ ಗೌರವದಿಂದ ಹೇಳಿಕೊಂಡಿದ್ದಾನೆ. ಆತ ಹಾಗೆಂದರೂ ಬಿಡದ ಪೊಲೀಸರು ಯಾವ ಸಮಾಜವಾದಿ ಪಕ್ಷವೂ ಬೇಡ, ಬಂಗಾರಪ್ಪನ ಸಹವಾಸವೂ ಬೇಡ ಎನ್ನುವಂತೆ ಅವನನ್ನು ಫಿಟ್ ಮಾಡಿದ್ದಾರೆ.

ಈ ಗುಂಪಿನಲ್ಲೇ ನಮ್ಮ ರಾಜ್ಯದ ಗೌರವಾನ್ವಿತ ನಾಯಕರಾದ ಡಿ.ಕೆ. ಶಿವಕುಮಾರ್ ಅಭಿಮಾನಿ ಸಂಘದ ಅಧ್ಯಕ್ಷನೂ ಇದ್ದ. ಹಾಗಾಗಿ ಪೊಲೀಸರು ಇನ್ನಷ್ಟು ಹುಮ್ಮಸ್ಸಿನಿಂದ ಚಚ್ಚಿದ್ದಾರೆ. ಪೊಲೀಸರ ವರ್ಕು ತಡೆಯಲಾರದೇ ಕೊನೆಗೆ ಅವರೆಲ್ಲರು "ನಮ್ಮ ನಾಯಕ ಬೊಂಡ ರಮೇಶ" ಎಂದು ಬಾಯಿಬಿಟ್ಟಿದ್ದಾರೆ. ಕೂಡಲೇ ಪೊಲೀಸರು ರಮೇಶನ ಮನೆಯ ಮೇಲೆ ದಾಳಿ ಮಾಡಿದ್ದಾರೆ. ಆದರೆ ರಮೇಶನ ಜೊತೆ ಚನ್ನಪ್ಪ ಮತ್ತು ಕೆಲವು ಅಪರಾಧಿಗಳು ಪರಾರಿಯಾಗಿದ್ದಾರೆ.


ಬೊಂಡ ರಮೇಶ್

ಆದರೆ ಶಿವಮೊಗ್ಗದ ಈ ಪಾತಕಿಗಳಿಗಾದ ಶಾಸ್ತಿ ಕೇಳಿದ ಜನ ಖುಷಿಯಾಗಿದ್ದಾರೆ. ಹಿಂದೊಮ್ಮೆ ಇದೇ ಗ್ಯಾಂಗಿನ ಒಂದಿಬ್ಬರನ್ನು ಪೊಲೀಸರು ಹೊಡೆದು ಸಾಯಿಸಿದಾಗ ಇಡೀ ಶಿವಮೊಗ್ಗ ಹರ್ಷದಿಂದ ಕುಣಿದಾಡಿತ್ತು. ಈಗಲೂ ಜನ ಅಂದಿನಷ್ಟೇ ಖುಷಿಯಾಗಿದ್ದಾರೆಂದರೆ, ಈ ಗ್ಯಾಂಗಿನ ಉಪಟಳ ಎಷ್ಟಿರಬಹುದು ಎಂದು ನೀವೇ ಊಹಿಸಿ. ಈ ಗ್ಯಾಂಗಿನ ಎಲ್ಲರೂ ಲಕ್ಷ ಲಕ್ಷ ರೂ.ಗಳ ಮನೆ ಕಟ್ಟಿಸಿದ್ದಾರೆ. ಆದರೆ ಆ ಅರಮನೆಗಳಲ್ಲಿ ಒಂದು ಗಂಟೆಯೂ ಇರದೆ ದಿನವಿಡಿ ಎಲ್ಲೆಲ್ಲೋ ಗುಂಪು ಗೂಡಿ ದರೋಡೆ ಮತ್ತು ಅಮಾಯಕ ಹೆಣ್ಣುಮಕ್ಕಳನ್ನು ಕೆಡಿಸುವ ಬಗ್ಗೆ ಕಾರ್ಯಾಚರಣೆಯನ್ನು ರೂಪಿಸುತ್ತಿರುತ್ತಾರೆ. ಇಂತಹ ಗ್ಯಾಂಗಿನ ನಾಯಕ ಸ್ಥಳೀಯ ಕಾಂಗ್ರೆಸ್ ಮುಖಂಡ. ಈ ಕಾರಣಕ್ಕೆ ಮಾನವಂತ ಕಾಂಗ್ರೆಸ್ಸಿಗರೆಲ್ಲಾ ಪಾರ್ಟಿ ಬಿಟ್ಟು ಮನೆ ಸೇರುತ್ತಿದ್ದಾರೆ. ಇದ್ಯಾವುದನ್ನು ತಿಳಿಯದ ಕಾಗೋಡು ತಿಮ್ಮಪ್ಪ ಬೊಂಡ ರಮೇಶನನ್ನೇ ಮುಂದೆ ಇಟ್ಟುಕೊಂಡು ಓಡಾಡುತ್ತಿದ್ದಾರೆ. ಚುನಾವಣೆಗೆ ನಿಂತರೆ ಇಷ್ಟೂರು ಓಟನ್ನೂ ಪಡೆಯಲಾಗದ ಬೊಂಡ ರಮೇಶನನ್ನು ಕಾಂಗ್ರೆಸ್ ಪಾರ್ಟಿ ಸಿಟಿಬಿ ಚೇರ್ಮನ್ ಮಾಡಿತ್ತು ಎಂದರೆ ಆ ಪಾರ್ಟಿಯ ಗತಿಗೆಟ್ಟ ಸ್ಥಿತಿ ಇನ್ನೆಂತಹದ್ದಾಗಿರಬೇಡ?

ಹೋಗಲಿ, ಸ್ಥಾನಮಾನ ಸಿಕ್ಕಿದ ನಂತರವಾದರೂ ರಮೇಶ ಸರಿಹೋದನೇ? ಇಲ್ಲ, ಬದಲಾಗಿ ಹೌಸಿಂಗ್ ಬೋರ್ಡಿನ ಅಧಿಕಾರಿಗಳಿಗೆ ಧಮಕಿ ಹಾಕಿ ನೂರು ಚೀಲ ಸಿಮೆಂಟ್ ಕೇಳಿದ್ದ, ಅವರು ಕೊಡಲು ಸಾಧ್ಯವಿಲ್ಲವೆಂದು ತಿರಸ್ಕರಿಸಿದಾಗ, ತನ್ನ ಪಟಾಲಂ ಕರೆದುಕೊಂಡು ಹೋಗಿ ಹೌಸಿಂಗ್ ಬೋರ್ಡು ಎದುರು ಯಾವುದೋ ಕಾರಣಗಳನ್ನು ತೆಗೆದು ಪ್ರತಿಭಟನೆ ಮಾಡಿಸಿದ್ದ. ನಂತರ ಶಿವಪ್ಪನಾಯಕ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಕಾಲೇಜ್ (SIMS)ಕಟ್ಟಲು ಹಾಕಿದ್ದ ಕಬ್ಬಿಣ, ಮರಳು, ಜಲ್ಲಿ ರಾಶಿಯನ್ನು ಯಾವ ಅಳುಕೂ ಇಲ್ಲದೆ ಸಾಗಿಸಿದ್ದ. ಇದೆಲ್ಲದರ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿರುವ ಪೊಲೀಸರು ಬೊಂಡ ರಮೇಶನನ್ನು ಅರೆಸ್ಟ್ ಮಾಡಿ ಒಳಗಾಕಲು ಕಾಯಾಗುತ್ತಾ ಪ್ರಯತ್ನಿಸುತ್ತಿದ್ದಾರೆ. ಆದರೆ ಎಲ್ಲೋ ಅಡಗಿರುವ ರಮೇಶ ಪೊಲೀಸರಿಗೂ ಲಂಚದ ಆಮಿಷ ತೋರಿಸುತ್ತಿದ್ದಾನೆ. ಜೊತೆಗೆ ಕೆಲ ಪತ್ರಕರ್ತರಿಗೂ "ನನ್ನ ಸುದ್ದಿ ಬರದಂತೆ ಏನಾದರೂ ಮಾಡಿ. ನೀವು ಕೇಳಿದಷ್ಟು ಹಣ ಕೊಡಲು ಸಿದ್ಧ" ಎಂದು ಆಶ್ವಾಸನೆ ಕೊಡುತ್ತಿದ್ದಾನೆ. ಇಂತಹ ಅಮೇಧ್ಯ ತಿಂದ ಹಲವರು, "ರಮೇಶ ಒಳ್ಳೆ ಹುಡುಗ, ಅಲ್ಪಸಂಖ್ಯಾತರ ಆಶಾಜ್ಯೋತಿ" ಎಂದು ಅವನನ್ನು ಬಿಂಬಿಸಲು ಸಜ್ಜಾಗಿದ್ದಾರೆ. ಆದರೆ ಮೊದಲ ಬಾರಿಗೆ ಪೊಲೀಸರು ಯಾರ ಫೋನ್ ಕರೆಗೂ, ಯಾವ ಪ್ರಭಾವಕ್ಕೂ ಬಗ್ಗುತ್ತಿಲ್ಲ. ಈಗಾಗಲೇ ಬಂಗಾರಪ್ಪನ ಪಾರ್ಟಿಯವರು ಎಚ್ಚೆತ್ತುಕೊಂಡು ಎಲ್.ಪಿ. ಸುರೇಶ್‌ನನ್ನು ತೆಗೆದು ಹಾಕಿದ್ದಾರೆ. ಈಗ ಕಾಂಗ್ರೆಸ್ ಕೂಡ ತನ್ನ ಮಾನ ಉಳಿಸಿಕೊಳ್ಳಲಾದರೂ ಬೊಂಡ ರಮೇಶನನ್ನು ಪಕ್ಷದಿಂದ ಉಚ್ಚಾಟಿಸಬೇಕಿದೆ. -ವರದಿಗಾರ

ಕರ್ನಾಟಕ ವಿ.ವಿ.: ಸೆಕ್ಸ್ ಸ್ಕ್ಯಾಂಡಲ್ ರೀಲು
ಲಿಂಗಾಯತರ ಡ್ರಾಮಾ ರಿಯಲ್ಲು!

'ಧಾರವಾಡ ವಿ.ವಿ.ಯಲ್ಲಿ ಸೆಕ್ಸ್ ಸ್ಕಾಂಡಲ್'... ಕಳೆದ ವಾರದ ದಿನಪತ್ರಿಕೆಗಳಲ್ಲಿ ಹೀಗೊಂದು ಸುದ್ದಿ ಪ್ರಕಟಗೊಂಡಾಗ ಜನ ಅದನ್ನು ನಂಬಿದರು. ಕಾರಣ ವಿಷ್ಟೇ: ವರ್ಷದ ಹಿಂದಷ್ಟೇ ಪ್ರೊಫೆಸರ್ ನರೇಗಲ್‌ನ ಲೈಂಗಿಕ ಕಿರುಕುಳದ 'ರೋಚಕ' ಕತೆಗಳನ್ನು ಕೇಳಿದ್ದರು ಜನ.

ಆದರೆ ಈ ಸಲದ ಕತೆಯೇ ಬೇರೆ ಇದೆ. ಒಬ್ಬ ದಲಿತ ಉಪನ್ಯಾಸಕರನ್ನು ಬಲಿ ಹಾಕುವ ಯೋಜನೆ ರೂಪಿಸಿದ ಲಿಂಗಾಯತರ ಲಾಬಿ, ಆ ದಾರಿಯಲ್ಲಿ ಒಬ್ಬ ಪ್ರತಿಭಾವಂತೆಯ ಮಾನ ಹರಾಜು ಹಾಕಲು ಮುಂದಾಗಿದೆ.

ಖಾಜಾಪೀರ್ ಟು ಬ್ಯಾಕ್‌ಲಾಗ್ ವಿ.ವಿ. ಬ್ಯಾಕ್‌ವಾರ್ಡ್


ಅಶ್ವಿನಿ ದಂಡಪ್ಪನವರ್ ಅಲ್ಲಿ ಹೈದರಾಬಾದ್‌ನಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗೆ ಕೋಚಿಂಗ್ ಪಡೆಯುತ್ತಿದ್ದಾರೆ. ಇಲ್ಲಿ ಧಾರವಾಡದ ಕ್ಯಾಂಪಸ್ ತುಂಬಾ ಅವರ ಹೆಸರು ಓಡಾಡುತ್ತಿದೆ.

ಮಾನವಶಾಸ್ತ್ರ ವಿಭಾಗದ ಡಾ. ಬಸವನಗೌಡ ತಮ್ಮ ಬಳಿ ಪಿ.ಎಚ್.ಡಿ. ಮಾಡಲು ಬಂದ ಅಶ್ವಿನಿ ದಂಡಪ್ಪನವರ್‌ಗೆ ಲೈಂಗಿಕ ಕಿರುಕುಳ ನೀಡಿದರು ಎಂಬುದು ಆರೋಪ. ಈ ಆರೋಪ ಮಾಡುತ್ತಿರುವವರು ಯಾರು? ರಾಜ್ಯಪಾಲರಿಗೆ ಅಶ್ವಿನಿಯ 'ಗೆಳತಿ' ಈ ರೀತಿ ದೂರು ಕೊಡುತ್ತಾಳೆ. ರಾಜ್ಯಪಾಲರು ವಿ.ವಿ.ಗೆ ತನಿಖೆ ಮಾಡಲು ಹೇಳುತ್ತಾರೆ. ಅಂತದೇನೂ ನಡೆದೇ ಇಲ್ಲ ಎಂದು ವಿ.ವಿ. ಹೇಳುತ್ತದೆ. ಮತ್ತಾರೋ ರಾಜ್ಯಪಾಲರಿಗೆ ಒತ್ತಡ ತರುತ್ತಾರೆ. ಆಗ ಮತ್ತೊಮ್ಮೆ ರಾಜ್ಯಪಾಲರು ವಿ.ವಿ.ಗೆ ಪತ್ರ ಕಳಿಸುತ್ತಾರೆ. ಆಗಲೇ ಅದು ದಿನಪತ್ರಿಕೆಗಳಲ್ಲಿ ಸುದ್ದಿಯಾಗುತ್ತದೆ. 31.8.2006 ರಂದು ಪ್ರಭಾರಿ ಕುಲಪತಿ ಡಾ. ಮುರುಗೆಪ್ಪನ ನೇತೃತ್ವದಲ್ಲಿ ತುರ್ತು ಸಿಂಡಿಕೇಟ್ ಮೀಟಿಂಗ್ ನಡೆದು ಸತ್ಯಶೋಧನಾ ಸಮಿತಿ ರಚಿಸಲಾಗುತ್ತದೆ.

'ಲಂಕೇಶ್' ಕ.ವಿ.ವಿ. ಕ್ಯಾಂಪಸ್‌ನಲ್ಲಿ ಹಲವಾರು ಜನರನ್ನು ಭೇಟಿಯಾಗಿ ಈ ಪ್ರಕರಣದ ಅಸಲಿ ಮುಖವನ್ನು ಬಯಲಿಗೆಳೆಯುತ್ತಿದೆ. ಡಾ. ಬಸವನಗೌಡ, ಅಶ್ವಿನಿ ಇಬ್ಬರನ್ನೂ ಮಾತನಾಡಿಸಿ ಸತ್ಯವನ್ನು ನಿಮ್ಮ ಮುಂದಿಡುತ್ತಿದ್ದೇವೆ.


ಹಿಂದಿನ ವಿಸಿ ಖಾಜಾಪೀರ್

2004-05 ನೇ ಸಾಲಿನಲ್ಲಿ ಎಂ.ಎಸ್ಸಿ (ಮಾನವಶಾಸ್ತ್ರ) ಯಲ್ಲಿ ಚಿನ್ನದ ಪದಕ ಗಿಟ್ಟಿಸಿದ ಅಶ್ವಿನಿ ದಂಡಪ್ಪನವರ್ 2005 ರ ಆಗಸ್ಟ್‌ನಲ್ಲಿ ಪಿ.ಎಚ್.ಡಿ. ಮಾಡಲೆಂದು ಪ್ರೊಫೆಸರ್ ಡಾ. ಬಸವನಗೌಡರ ಬಳಿ ಫಾರ್ಮಲ್ ಆಗಿ ಹೆಸರು ನೋಂದಾಯಿಸಿದರು. ಆಮೇಲೆ ಅಶ್ವಿನಿ ಪಿ.ಎಚ್.ಡಿ.ಗೆ ಅರ್ಜಿ ಹಾಕಲೇ ಇಲ್ಲ. ಐಎಎಸ್ ಅಥವಾ ಕೆಎಎಸ್ ಮಾಡುವ ಗುರಿ ಇಟ್ಟುಕೊಂಡು ಹೈದರಾಬಾದ್‌ನಲ್ಲಿ ಕೋಚಿಂಗ್ ಪಡೆಯತೊಡಗಿದರು. ಆದರೆ ಇಲ್ಲಿ ಜೂನ್‌ನಲ್ಲಿ ಹುಟ್ಟಿದ ಈ 'ಸೆಕ್ಸ್ ಹಗರಣ' ಎಂಬ ಡ್ರಾಮಾದಲ್ಲಿ ಅಶ್ವಿನಿಯವರನ್ನೇ ಪ್ರಮುಖ ಪಾತ್ರಧಾರಿಯನ್ನಾಗಿ ಬಿಂಬಿಸಿಬಿಟ್ಟಿದ್ದರು.


ಯುನಿವರ್ಸಿಟಿಯ ಜಾತಿ ಪಾಲಿಟಿಕ್ಸ್‌ಗೆ ಅಶ್ವಿನಿಯ ವರನ್ನು ಬಲಿ ಹಾಕುವ ಹುನ್ನಾರ ನಡೆದಿದೆ. ದಲಿತ ಜನಾಂಗದ ಡಾ. ಬಸವನಗೌಡ ಯುನಿವರ್ಸಿಟಿಯ SC/ST ನೌಕರರ ಸಂಘದ ಉಪಾಧ್ಯಕ್ಷರಾಗಿ ದಲಿತ ಪರ ಹೋರಾಟಗಳನ್ನು ಮಾಡುತ್ತಾ, ಲಿಂಗಾಯತ ಲಾಬಿಯ ಕೆಂಗಣ್ಣಿಗೆ ಗುರಿಯಾಗಿದ್ದರು.

ಈ ವರ್ಷದ ಆರಂಭದಿಂದಲೂ ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬುವಂತೆ ಆಗ್ರಹಿಸತೊಡಗಿದ್ದರು. ಆಗ ವಿ.ಸಿ.ಯಾಗಿದ್ದ ಖಾಜಾಪೀರ್ ಬ್ಯಾಕ್‌ಲಾಗ್ ಹುದ್ದೆ ತುಂಬಲೇ ಇಲ್ಲ. ನಂತರ ತಾತ್ಕಾಲಿಕ ಪ್ರಭಾರಿ ವಿ.ಸಿ. ಯಾಗಿದ್ದ ಪ್ರೊ. ಐತಾಳ್ ಬ್ಯಾಕ್‌ಲಾಗ್ ಹುದ್ದೆಗಳು ಖಾಲಿ ಇಲ್ಲವೇ ಇಲ್ಲ ಎಂದು ರೀಲು ಸುತ್ತಿ ಹೋದ. ಈಗ ಪ್ರಭಾರಿ ವಿ.ಸಿ. ಆಗಿರುವ ಮುರುಗೆಪ್ಪನಿಗೂ ಬ್ಯಾಕ್‌ಲಾಗ್ ಹುದ್ದೆ ತುಂಬುವ ಮನಸ್ಸಿಲ್ಲ. ಕ.ವಿ.ವಿ. ಎಂದರೆ ಲಿಂಗಾಯತರ ಹುತ್ತ ಎಂಬುದು ಎಲ್ಲರಿಗೂ ಗೊತ್ತೇ ಇರುವ ವಿಷಯ. ಇಂತಹ ಕಡೆ ಡಾ. ಬಸವನಗೌಡರಂತಹ ಯುವ ದಲಿತ ಪ್ರತಿಭಾವಂತರು ನ್ಯಾಯಕ್ಕಾಗಿ ಆಗ್ರಹಿಸಿದರೆ ಲಿಂಗವಂತರು ಸುಮ್ಮನಿದ್ದಾರೆಯೇ? ಪ್ರಭಾರಿ ವಿ.ಸಿ. ಆಗಿದ್ದ ಪ್ರೊ. ಐತಾಳ್‌ರು ಹಿರೇಮಠ ಎಂಬ ನಾನ್ ಟೀಚಿಂಗ್ ಜಂಗಮನ ಮೂಲಕ ಬ್ಯಾಕ್‌ಲಾಗ್ ಹುದ್ದೆ ತುಂಬುವುದರ ವಿರುದ್ಧ ಪಿತೂರಿ ನಡೆಸಿದ್ದರು. ಕೊನೆಗಿದು ಕೋರ್ಟ್ ಮೆಟ್ಟಿಲು ಏರಿದ್ದೂ ಆಯ್ತು.

ಅಂದಹಾಗೆ ಅಶ್ವಿನಿ ಪಿ.ಜಿ. ಓದುತ್ತಿರುವಾಗ ಮಾನವಶಾಸ್ತ್ರ ವಿಭಾಗದಲ್ಲಿ ಐದೇ ವಿದ್ಯಾರ್ಥಿಗಳಿದ್ದರು. ಅವರಲ್ಲಿ ಅಶ್ವಿನಿ ಬಿಟ್ಟರೆ ಉಳಿದವರೆಲ್ಲ ಹುಡುಗರೇ! ಹಾಗಾದರೆ ಅಶ್ವಿನಿಗೆ ಅನ್ಯಾಯವಾಯ್ತು ಎಂದು ರಾಜ್ಯಪಾಲರಿಗೆ ದೂರು ಸಲ್ಲಿಸುವ ಈ ನಿಗೂಢ 'ಗೆಳತಿ' ಯಾರು? ಆ ದೂರಿನಲ್ಲಿ ಆಕೆಯ ಹೆಸರಿಲ್ಲ, ಸಹಿಯೂ ಇಲ್ಲ.


ಈ ಕುತಂತ್ರದ ಹಿಂದೆ ದಲಿತರನ್ನು ತುಳಿಯುವ ಲಿಂಗಾಯತ ಲಾಬಿ ಇದೆ. ವಿವಿಯ ಶಿಕ್ಷಕರ ಸಂಘದ ಸೆಕ್ರೆಟರಿ ಆಗಿರುವ ಡಾ.ಬಿ.ಡಿ. ಕುಂಬಾರ್, ಅಧ್ಯಕ್ಷರಾಗಿರುವ ಡಾ. ಬಿ.ಎಸ್. ಹಳ್ಳಾಳರ 'ಕಾಣದ ಕೈಗಳು' ಇಲ್ಲಿ ಕೆಲಸ ಮಾಡಿವೆ. ಪಿಎಚ್‌ಡಿಗೆ ಸೇರಿಕೊಳ್ಳದೇ ದೂರದ ಹೈದರಾಬಾದ್‌ನಲ್ಲಿದ್ದ ಅಶ್ವಿನಿ ಹೆಸರನ್ನು ಎಳೆತಂದು, ಡಾ. ಬಸವನಗೌಡರನ್ನು ತುಳಿಯುವ ಕುತಂತ್ರ ಮಾಡಲಾಗಿದೆ.

ಲಿಂಗಾಯತರ ದರ್ಬಾರಿನಲ್ಲಿ ನಾಶವಾಗುತ್ತಿರುವ ಕ.ವಿ.ವಿ.ಯನ್ನು ಸರಿದಾರಿಗೆ ತರುವ ಕೆಲಸವನ್ನು ಎಲ್ಲ ಜಾತಿಗಳ ಪ್ರೊಫೆಸರ್, ವಿದ್ಯಾರ್ಥಿಗಳು ಕೈಗೊಳ್ಳಬೇಕಾಗಿದೆ. ಇಲ್ಲವಾದರೆ ಡಾ. ಬಸವನಗೌಡರಂತಹ ದಲಿತ ಪ್ರೊಫೆಸರುಗಳು, ಅಶ್ವಿನಿಯಂತಹ ವಿದ್ಯಾರ್ಥಿನಿಯರು ಸುಳ್ಳು ಆರೋಪಗಳಿಗೆ ಬಲಿಯಾಗಬೇಕಾಗುತ್ತದೆ. -ವರದಿಗಾರ

ಅಶ್ವಿನಿ, ಬಸವನಗೌಡ ಹೇಳಿದ್ದು

"ಥೂ, ಇವ್ರ ಪಾಲಿಟಿಕ್ಸ್‌ಗೆ ನನ್ನಾಕ್ ಬಲಿ ಮಾಡ್ತಾರೋ ಗೊತ್ತಿಲ್ಲ..." ಎಂದೇ ಮಾತು ಆರಂಭಿಸುವ ಅಶ್ವಿನಿಯವರು "ನಾನು ಪ್ರೊಫೆಸರ್ ಡಾ. ಬಸವನಗೌಡರ ಬಳಿ ಪಿಎಚ್‌ಡಿ ಮಾಡಬೇಕೆಂದುಕೊಂಡಿದ್ದೆ. ಆದರೆ ಐಎಎಸ್-ಕೆಎಎಸ್‌ಗಳತ್ತ ಗುರಿ ಇಟ್ಟು ಹೈದರಾಬಾದ್‌ನಲ್ಲಿ ಕೋಚಿಂಗ್ ಪಡೆಯತೊಡಗಿದೆ. ನಮ್ಮ ಬ್ಯಾಚ್‌ನಲ್ಲಿ ನನ್ನನ್ನು ಬಿಟ್ಟರೆ, ಹುಡುಗಿಯರೇ ಇರಲಿಲ್ಲ, ಅದ್ಯಾವ 'ಗೆಳತಿ' ನನ್ನ ಪರ ದೂರು ನೀಡಿದಳು? ಡಾ. ಬಸವನಗೌಡ ಯುವ ಪ್ರತಿಭಾವಂತ ಪ್ರೊಫೆಸರ್... ಅವರು ಒಳ್ಳೆಯ ನಡತೆಯವರು..." ಎಂದು ಹೇಳುತ್ತಾರೆ.

ಡಾ. ಬಸವನಗೌಡರು "ಇದು ದಲಿತರನ್ನು ತುಳಿಯಲು ನಡೆಸಿರುವ ಕುತಂತ್ರ. ಸತ್ಯಶೋಧನೆ ನಡೆಯಲಿ... ಎಲ್ಲ ಸತ್ಯ ಗೊತ್ತಾಗುತ್ತದೆ... ವಿ.ವಿ.ಯು ಜಾತಿ [illegible]" ಎಂದು ತಮ್ಮ ಅಭಿಪ್ರಾಯ ತಿಳಿಸಿದರು.



ಮದುವೆಗಳು ಸ್ವರ್ಗದಲ್ಲಿ...?

"ನಾನು ಮದುವೆ ಮಾಡಿಕೊಂಡು ಹೆಂಡತಿಯನ್ನು ಮನೆ ತುಂಬಿಸಿಕೊಂಡಾಗ ಒಂದು ದಮ್ಮಡಿಯನ್ನಾದರೂ ಮುಟ್ಟಿದ್ದುಂಟಾ? ನಮಗೆ ಹನ್ನೊಂದು ಜನ ಮಕ್ಕಳು. ದುಡ್ಡು ಕೊಟ್ಟು ಅಳಿಯಂದಿರನ್ನು ಖರೀದಿಸ ಹತ್ತಿದರೆ ಗತಿ ಏನು? ಕೈಗೆ ಸಿಗೋದು ಚಿಪ್ಪು ಅಷ್ಟೇ. ಜೋಳಿಗೆ ನೇತಾಕಿಕೊಂಡು ಭಿಕ್ಷೆ ಬೇಡಬೇಕಾದೀತೋ ಏನೋ!"

ಏನೇ ಆಗಲಿ, ತಮ್ಮ ಮಗಳಿಗೆ ದುಡ್ಡು ಕೊಟ್ಟು ಗಂಡನನ್ನು ಕೊಂಡು ತರುವುದಿಲ್ಲ ಎಂದು ಮಾಧವಿಯ ಅಪ್ಪ ಅಮ್ಮ ಶಪಥ ಮಾಡಿದ್ದರು. "ನಾನು ಮದುವೆ ಮಾಡಿಕೊಂಡು ಹೆಂಡತಿಯನ್ನು ಮನೆ ತುಂಬಿಸಿಕೊಂಡಾಗ ಒಂದು ದಮ್ಮಡಿಯನ್ನಾದರೂ ಮುಟ್ಟಿದ್ದುಂಟಾ? ನಮಗೆ ಹನ್ನೊಂದು ಜನ ಮಕ್ಕಳು. ದುಡ್ಡು ಕೊಟ್ಟು ಅಳಿಯಂದಿರನ್ನು ಖರೀದಿಸ ಹತ್ತಿದರೆ ಗತಿ ಏನು? ಕೈಗೆ ಸಿಗೋದು ಚಿಪ್ಪು ಅಷ್ಟೇ. ಜೋಳಿಗೆ ನೇತಾಕಿಕೊಂಡು ಭಿಕ್ಷೆ ಬೇಡಬೇಕಾದೀತೋ ಏನೋ!" ಅಪ್ಪ ಖಂಡತುಂಡವಾಗಿ ಹೇಳಿದ್ದರು.

"ಕಾಲ ಬದಲಾಯಿಸಿದೆ ಅನ್ನೋದೂ ಸರೀನೆ. ಆದ್ರೂ ದುಡ್ಡಿನ ಮುಖ ನೋಡೋ ಅಳಿಯ ಬೇಡಾಪ್ಪ. ಹದಿನೈದು ತುಂಬೋಕೂ ಮುಂಚೇನೆ ನನ್ನ ಮದುವೆ ಘೂಘಟ್ ಅಂತ ಆಗಿಹೋಯ್ತಲ್ಲ! ದುಡ್ಡು ದುಡ್ಡು ಅನ್ನೋ ಅಳಿಯ ಮಗಳನ್ನ ಮಾರಿ ಹಾಕಲ್ಲ ಅಂತ ಏನು ಗ್ಯಾರಂಟಿ? ಏನೂ ಬೇಡಾಪ್ಪ, ನನ್ನ ಮಗಳು ನಮ್ಮನೆಯಲ್ಲೇ ಇರಲಿ ಬೇಕಾದರೆ. ಕಂಕಣ ಬಲ ಕೂಡಿ ಬಂದ್ರೆ ಗಂಡುಗಳು ರೊಯ್ಯನೆ ತಾವಾಗೇ ಬರ್ತಾವೆ." ಅಮ್ಮ ಸಹ ದನಿಗೂಡಿಸಿದ್ದಳು.

ಏನೋ ಎಂತೋ, ಕಂಕಣ ಬಲ ಕೂಡಲೂ ಇಲ್ಲ, ಗಂಡುಗಳು ರೊಯ್ಯನೆ ಬರಲೂ ಇಲ್ಲ, ವರುಷಗಳೇ ಕಳೆದವು. ಅಪ್ಪ ಅಮ್ಮನ ತಳಮಳ ಏರುತ್ತಿರುವಂತೆಯೇ ಹೆಣ್ಣು ಮಕ್ಕಳ ವಯಸ್ಸೂ ಏರುತ್ತಾ ಹೋಯಿತು. ಆ ಮನೆಯಲ್ಲಿ ಈಗ ಹದಿನೈದು ದಾಟಿದ ನಾಲ್ಕು ಮಂದಿ ಹೆಣ್ಣು ಮಕ್ಕಳಿದ್ದರು.

ಚಟಗುಟ್ಟುವ ಪ್ರಾಯದ ಹೆಣ್ಣುಮಕ್ಕಳು ಮದುವೆಯಾಗದೇ ಮನೆಯಲ್ಲಿದ್ದರೆ ಆ ಮನೆಯೂ ಚಟಗುಟ್ಟಿ ಸುಟ್ಟು ಹೋಗುವುದು ಖಂಡಿತಾ ಎಂದು ಸುತ್ತಮುತ್ತಲಿನ ಮುದುಕಿಯರು ಗೊಣಗುತ್ತಿದ್ದರು. ಸುಟ್ಟು ಹೋಗುವುದು ಮನೆಯಲ್ಲ, ಅಪ್ಪ ಅಮ್ಮನ ಮನಸ್ಸು ಎಂದು ಮಾಧವಿಯ ಅಪ್ಪ ಅಮ್ಮನಿಗೆ ಅನುಭವದಿಂದ ಅರಿವಾಗಿತ್ತು.

ಹಾಗಾಗಿ ವರದಕ್ಷಿಣೆ ಕೊಡಲಾರೆ ಎಂಬ ಛಲ 'ಮೊತ್ತ ಜಾಸ್ತಿಯಿಲ್ಲ ಅಂದರೆ ಕೊಡಬಹುದಲ್ಲ?' ಎಂಬ ರಿಯಾಯಿತಿಗೆ ದಾರಿ ಮಾಡಿತ್ತು. ಆದರೆ ಅವರು ಕೇಳಿದ ಎರಡು ಸಾವಿರ ಮತ್ತು ಇವರು ಕೊಡುತ್ತೇವೆಂದ ಇನ್ನೂರರ ತಿಕ್ಕಾಟದ ಮಧ್ಯೆ ಹಲವು ಸಂಬಂಧಗಳು ಗಾಳಿಯಲ್ಲಿ ತೂರಿ ಹೋಗಿದ್ದವು.

ಅಂತೂ ಮಾಧವಿಗೆ ಇಪ್ಪತ್ತೂರರ ಪ್ರಾಯವಾಗುವ ಹೊತ್ತಿಗೆ ದಕ್ಷಿಣೆಯ ಮೊತ್ತ ಐನೂರಕ್ಕೆ ಬಂದು ಕೂತಿತ್ತು, ದಳ್ಳಾಳಿಗೆ ಐವತ್ತರ ಬಾಬತ್ತು ಬೇರೆ. ಅಂತೂ ಇಂತೂ ಸಂತೆ ವ್ಯವಹಾರ ಮುಗಿದಿತ್ತು.

ಈ ವ್ಯವಹಾರ ಮುಗಿದ ಮೇಲೆಯೇ ಹುಡುಗನ ಕಡೆಯವರು ಹುಡುಗಿಯನ್ನು ನೋಡಲು ಒಪ್ಪಿದ್ದು. ಅವರನ್ನು ಮೆಚ್ಚಿಸಲು ಎಂಥಾ ಊಟ! ನನ್ನ ಹೊಟ್ಟೆಪಾಡಿನ ಪ್ರಶ್ನೆಯನ್ನು ಹೇಗಾದರೂ ಶಾಶ್ವತವಾಗಿ ಬಗೆಹರಿಸು ದೇವರೇ ಎಂದು ಮನಸಾರೆ ಪ್ರಾರ್ಥಿಸುತ್ತಾ ಅಪ್ಪನ ಆಣತಿಯಂತೆ ಮಾಧವಿಯೇ ಎಲ್ಲವನ್ನೂ ಸಾಂಗವಾಗಿ ಬಡಿಸಿದಳು. ಹುಡುಗಿ ಅವರೆಲ್ಲರಿಗೆ ಇಷ್ಟವಾದಳಂತೆ! ಅದಾದ ನಂತರ ಅಪ್ಪ ಹುಡುಗನ ಮನೆಗೆ ಗಂಡು 'ನೋಡಲು' ಹೋದರು. ಕೊನೆಗೂ ಎಲ್ಲರಿಗೂ ಎಲ್ಲವೂ ಒಪ್ಪಿಗೆಯಾಗಿ ಮದುವೆ ಕುದುರಿತ್ತು.


ಹಿರಿಯ ಮಗಳ ಮದುವೆ! ಮನೆಯಲ್ಲಿನ ಮೊದಲ ಮದುವೆ! ಶಕ್ತಿ ಮೀರಿ ಹುದಿ ಹಾರಿಸಿಯೇ ಬಿಟ್ಟರು ಪಾಪ. ಮೂರು ತರದ ಪಾಯಸವೇನು? ತೆಂಗಿನ ಹಾಲು ಬೆಲ್ಲದಲ್ಲಿ ಅದ್ದಿ ತೆಗೆದ ಸಿಹಿ ಖಾದ್ಯಗಳೇನು? ಸಾಲಂಕೃತ ಮದುವೆ ಚಪ್ಪರವೇನು? ಆ ಹಳ್ಳಿಯಲ್ಲಿ ಹಿಂದೆಂದೂ ಇಂಥಾ ಮದುವೆ ನಡೆದಿರಲಿಲ್ಲ ಎಂದು ಊರಿನವರೇ ಮಾತಾಡಿಕೊಂಡರು. ಮದುವಣಿಗನ ಸ್ನೇಹಿತರು ನವ ದಂಪತಿಗಳಿಗೆ ಶುಭವನ್ನು ಕೋರುತ್ತಾ ಮಂಗಳಪಾತ್ರಂ ಹಾಡನ್ನು ಸುಶ್ರಾವ್ಯವಾಗಿ ಹಾಡಿದರು. "ಮದುವೆಗಳು ನಿಶ್ಚಯಿಸಲ್ಪಡುವುದು ಸ್ವರ್ಗದಲ್ಲೀ....." ಎಂದು ಪ್ರಾರಂಭವಾದ ಹಾಡಿನಲ್ಲಿ 'ಪ್ರೇಮಾಮೃತಾ....' 'ಪಾರಿಜಾತಾ....' 'ಕಲ್ಪವೃಕ್ಷಾ...' ಇತ್ಯಾದಿ ಇತ್ಯಾದಿ ಮೃದು ಮಧುರ ಪದಗಳು ಒಂದರ ಹಿಂದೊಂದು ಉರುಳಿದವು. ನವ ವಧೂವರರು ಪ್ರಣಯ ಪಕ್ಷಿಗಳೆಂದೂ, ವಿವಾಹ ವೆಂಬ ಲತಾಕುಂಜದೆಡೆ ನಲಿಯುತ್ತಾ ಸಾಗುತ್ತಿರುವ ಈ ಸಗ್ಗಪಕ್ಷಿಗಳಿಗೆ ಶುಭವಾಗಲೆಂದೂ ಸಾಂಗವಾಗಿ ಹಾಡಿ ಹರಸಲಾಯಿತು. ವ್ಯವಹಾರ ಕುದುರಿಸಿ ಮದುವೆ ನಡೆಸಿದ ಮಾಧವಿಯ ಅಪ್ಪ ಅಮ್ಮ ನಿರಾಳವಾಗಿ ಉಸಿರು ಬಿಟ್ಟರು.

ಆ ರಾತ್ರಿ, ಗಂಡನ ಮನೆಯಲ್ಲಿ ಮಂಗಳಪಾತ್ರಂನ ಸುವರ್ಣಾಕ್ಷರಗಳು ಮಂದ ಬೆಳಕಿನಲ್ಲಿ ಗೋಡೆಯ ಮೇಲೆ ರಾರಾಜಿಸುತ್ತಿರುವಾಗ ಮಾಧವಿ ಮದುವೆಯ ಚಪ್ಪರದ ಸ್ವರ್ಗದಿಂದ ಇಳಿದು ಭೂಮಿಯ ಮೇಲಿನ ಪುಸ್ತದ ಕೋಣೆಯನ್ನು ಹೊಕ್ಕಳು. ಅಷ್ಟಕ್ಕೇ ಮುಗಿಯುತ್ತದೆಯೆ? ಸ್ವರ್ಗದಿಂದ ಭೂಮಿಗೆ ಧೊಪ್ ಅಂತ ಇಳಿದ ಮೇಲೆ ಭೂಮಿಯಿಂದ ಪಾತಾಳಕ್ಕೂ ಹೋಗಲೇ ಬೇಕಲ್ಲವೇ? ಮಾಧವಿಗೆ ಈ ಪಾತಾಳದ ಪರಿಚಯವಾಗಿದ್ದು ಅತ್ತೆಯ ಮೂಲಕ. ಗಂಡ, ಮಗನನ್ನು ಮುಷ್ಟಿಯಲ್ಲಿಟ್ಟುಕೊಂಡು ಮೆರೆಯುತ್ತಿದ್ದ ಅತ್ತೆಗೆ ಈ ಜುಜುಬಿ ಹೊಸ ಸೊಸೆ ಯಾವ ಲೆಕ್ಕ?

ಒಂದು ರೀತಿಯಲ್ಲಿ ಅತ್ತೆಯ ಈ ಆಟಾಟೋಪಕ್ಕೂ ಕಾರಣವಿಲ್ಲದಿಲ್ಲ ಅಂತಲೇ ಹೇಳಬೇಕು. ಮದುವೆಯಾದ ಮೂರನೆಯ ದಿನ ಮಗಳು ವೈವಾಹಿಕ ಬದುಕಿನ ಸಂತೋಷ ಸಾಗರದಲ್ಲಿ ಈಜಾಡುತ್ತಿರುವುದನ್ನು ತಂದೆ ಖುದ್ದಾಗಿ ನೋಡಿ ಆನಂದಿಸಲು ಬಂದಿಳಿದರು. ಮರೆಯಲ್ಲಿ ನಿಂತು ಸಂಭಾಷಣೆಯನ್ನು ಕದ್ದು ಆಲಿಸುತ್ತಿದ್ದ ಅತ್ತೆಗೆ ಅಪ್ಪ ವಿಶೇಷ ಒಡವೆಗಳನ್ನು ಕಳಚಿ ಕೊಡೆಂದು ಮಗಳಿಗೆ ಹೇಳುತ್ತಿದ್ದದ್ದು ಕಿವಿಗೆ ಬಿತ್ತು. ಥಟ್ಟನೆ ಮರೆಯಿಂದೀಚೆಗೆ ಅವತರಿಸಿದ ಅತ್ತೆ 'ಬರೀ ಒಡವೆ ಏನು, ಜೊತೆಗೆ ಮಗಳನ್ನೂ ಕರೆದೊಯ್ಯಬಹುದಲ್ಲ' ಎಂದು ಹೇಳಿದ್ದು ಕೇಳಿ ಅಪ್ಪ ಬೆಚ್ಚಿ ಬಿದ್ದು, ಮೌನವಾದರು. ಒಡವೆ ಹೊತ್ತು ಸಾಲಂಕೃತಳಾಗಿ ಶೋಭಿಸುವ ಆಸೆ ಇದ್ದ ಮಾಧವಿ ಸಹ ಘಟ್ ಫಿಟ್ ಅನ್ನಲಿಲ್ಲ.

ಪಾಪ ಮುದುಕನ ಸ್ಥಿತಿ ಯಾರಿಗೂ ಬೇಡ. ಹರಸಾಹಸ ಮಾಡಿ ಧಾರೆಯೆರೆದು ಕೈ ತೊಳೆದುಕೊಂಡಿದ್ದ ಹೊರೆಯನ್ನು ಮತ್ತೆ ಹೊರುವುದು ಹೇಗೆ? ಹಾಗಂತ ಆಚೀಚೆ ಮನೆಯವರಿಂದ ಎರವಲು ಪಡೆದಿದ್ದ ಒಡವೆಗಳನ್ನು ಹಿಂತಿರುಗಿಸದಿದ್ದರೆ ಹೇಗೆ?

ಮನೆಗೆ ಹಿಂತಿರುಗಿದ ಮುದುಕ ಹೆಂಡತಿಯ ಹತ್ತಿರ ಎಲ್ಲವನ್ನೂ ಉಸುರಿ ಸ್ವಲ್ಪ ಮಟ್ಟಿಗೆ ನಿಸೂರಾದ. ಒಂದು ಹೆಣ್ಣು ತಲೆಗೆ ಇನ್ನೊಂದು ಹೆಣ್ಣು ತಲೆಯೇ ಸಾಟಿ, ಅಲ್ಲವೇ?



ಸ್ವಲ್ಪ ದಿನ ಕಳೆದ ನಂತರ ಮಾಧವಿಯ ಅಪ್ಪ ಅಮ್ಮ ಬಂದಿಳಿದರು. ಅತ್ತೆಯ ಎದುರಿಗೇ ತಾಯಿ ಮಗಳ ಮೇಲಿದ್ದ ಹಳೆಯ ಒಡವೆಗಳನ್ನು ಕಳಚಿ ಹೊಳೆಯುವ ಹೊಸ ಒಡವೆಗಳನ್ನು ಹಾಕಿದಳು.

ಯಾವ್ಯಾವುದೋ ದೇವರಿಗೆ ತೀರಿಸಬೇಕಾದ ಹರಕೆಗಳನ್ನು ನೆನಪಿಸಿಕೊಳ್ಳುತ್ತಿದ್ದ ತಾಯಿ ಕಾಲಿಗೆರಗಿದ ಮಗಳಿಗೆ ಹರಸಿ ಮೆಲ್ಲನೆ ಪಿಸುಗುಟ್ಟಿದಳು. "ದೇವರ ದಯೆಯಿಂದ ನಿನಗೊಂದು ಮಗುವಾಗಿಬಿಟ್ಟರೆ! ಸೊಸೆ ಮೇಲೆ ಕೊಸಕೊಸ ಅಂದ್ರೂ ಮೊಮ್ಮಗುವಿನ ಮೇಲೆ ಪ್ರೀತಿ ಇದ್ದೇ ಇರುತ್ತಲ್ಲ? ಆಗ ನಿನ್ನ ಹೊರಕ್ಕೆ ಹಾಕೋದಿಕ್ಕೆ ಆಗೋದಿಲ್ಲ ಬಿಡು."

ಮದುವೆಯೆಂಬ ಬಂಧವೆಂದರೆ ಇದೇ ಏನೋ! ತಂದೆ ತಾಯಂದಿರ ಬಲವಾದ ಕೈಗಳು ಬೆಸೆಯಲಾರದ್ದನ್ನು ಮಗುವಿನ ಪುಟ್ಟ ಕೈಗಳು ಬಿಗಿದುಬಿಡುತ್ತವೆ!

ಸ್ವಲ್ಪ ದಿನದ ಮೇಲೆ ಹೊಸ ಗಂಡಹೆಂಡತಿಯರು ಸಾಂಪ್ರದಾಯಿಕ ಭೇಟಿಗಾಗಿ ಮಾಧವಿಯ ತೌರುಮನೆಗೆ ಹೋದರು. ತಂಗಿಯರ ಒತ್ತಾಯಕ್ಕೆ ಸೋತ ಮಾಧವಿ ರಾತ್ರಿ ಅಲ್ಲೇ ಉಳಿಯುವುದೆಂದೂ, ಗಂಡ ಮಾರನೆಯ ದಿನ ಬಂದು ಕರೆದೊಯ್ಯುವುದೆಂದೂ ನಿಶ್ಚಯವಾಯಿತು.

ಮಾರನೆಯ ದಿನವಲ್ಲ, ಹತ್ತು ದಿನವಾದರೂ ಗಂಡನೂ ಇಲ್ಲ, ಅವನ ಮನೆಯವರೂ ಇಲ್ಲ. ಅದೂ ಇದೂ ನೆವದ ಮೇಲೆ ಗಂಡ ಬರುವುದು ಮುಂದಕ್ಕೆ ಹೋಗುತ್ತಲೇ ಇತ್ತು. ಎರಡು ತಿಂಗಳು ಉರುಳಿದವು. ಹೆಣ್ಣು ಹೆತ್ತವರು ತಲೆಯ ಮೇಲೆ ಕೈ ಹೊತ್ತು ಕುಳಿತರು.

ಕ್ರಮೇಣ ಅಲ್ಲಿಲ್ಲಿಂದ ಕಾರಣ ತಿಳಿದುಬಂತು. ಹೆಣ್ಣು ನೋಡಲು ಹೋದಾಗ ತೋರಿಸಿದ್ದು ಬೇರೆ ಯಾರೋ ಚೆಂದದ ಹುಡುಗಿಯನ್ನಂತೆ. ಮಾಧವಿಯನ್ನಲ್ಲವಂತೆ. ಇದೆಂತ ಆಪಾದನೆ? ಬಲವಾಗಿ ಅಲ್ಲಗೆಳೆದ ಈ ಕಡೆಯವರು ಪ್ರತಿಯಾಗಿ ಇನ್ನೊಂದು ಬಾಣವನ್ನು ಬಿಟ್ಟರು. ಇದೆಲ್ಲ ಇನ್ನಷ್ಟು ಹಣ ಕೀಳಲು ಮಾಧವಿಯ ಅತ್ತೆ ಮಾಡುತ್ತಿರುವ ಹಿಕ್ಮತ್ ಅಂತೆ.

ಬಾಣ ಪ್ರತಿಬಾಣಗಳ ಜಟಾಪಟಿಯಲ್ಲಿ ಪರಿಸ್ಥಿತಿ ಗಂಭೀರವಾಯಿತು. ಆಚೀಚೆ ಮನೆಯ ಮರ್ಯಾದಸ್ಥರು ತಲೆ ಹಾಕಿ ಇತ್ಯರ್ಥ ಮಾಡುವ ನಿರ್ಧಾರಕ್ಕೆ ಬಂದರು. ಎರಡೂ ಕಡೆಯವರನ್ನು ಕಲೆ ಹಾಕಿ ಮುಖಾಬಿಲೆ ಮಾಡಿಸುವುದು ಹಾಗ ಮಾಧವಿಯನ್ನೇ ನೇರವಾಗಿ ವಿಚಾರಣೆಗೆ ಒಳಪಡಿ ವುದು ಅಂತಾಯ್ತು, ಅದಕ್ಕಾಗಿಯೇ ಒಂದು ದಿನವ ಸಹ ಗೊತ್ತು ಮಾಡಲಾಯಿತು.

ಮಗಳನ್ನು ವಿಚಾರಣೆಗೆ ಕಳುಹಿಸಿದ ತಾಯಿ ಕಂಡ ಕಂಡ ದೇವರಿಗೆಲ್ಲಾ ಹರಕೆ ಹೊತ್ತಳು. ಏನಾಗುತ್ತೋ ಎಂತಾಗುತ್ತೋ ಎಂದು ಮನೆಯವರೆಲ್ಲರೂ ವ್ಯಾಕು ರಾದರು. ಮುಟ್ಟಿಲ್ಲದ, ಮೂಸಿಲ್ಲದ ಹೂವೊಂದ ಒಳ್ಳೆಯ ಗಂಡನನ್ನೂ, ಮನೆಯನ್ನೂ ಹೊಂದಿಸುವುದ ಇಷ್ಟು ಕಷ್ಟವಾದರೆ ಮಂಜು ಹನಿ ಬಿದ್ದ ಹೂವು ಗತಿ ಇನ್ನು ಹೇಗೋ! ಮಾಧವಿಯ ತಾಂ "ನಾವೇನಾದರೂ ಗೆದ್ದೆವೋ, ಮಾಧವಿಗೆ ಹಾಕಿರೋ ಗಿಲೀಟಿನ ಒಡವೆಯ ಚಿಂತೆ ಕಳೆಯಿತು ಅಂತ ಲೆಕ್ಕ. ಆ ಮುದಿ ನರಿಯಂತ ಅತ್ತೆನೇ ಸಾಚಾ ಒಡವೆಗ ಕಿತ್ತುಕೊಂಡು ಗಿಲೀಟಿನದು ಹಾಕಿದ್ದಾಳೆ ಅದ ಹಬ್ಬಿಸಬಹುದು. ಜನ ನಂಬೇ ನಂಬ್ತಾರೆ" ಎಂದ ಒಳಕೋಣೆಯಲ್ಲಿ ಪಿಸುಗುಟ್ಟಿದಳು.

ಮನೆಯ ಜಗುಲಿಯಲ್ಲಿ ಮಾಧವಿಯ ಅ ಮಾವನನ್ನು ಬಿಟ್ಟರೆ ಈ ಕಡೆಯವರ ಐದು ಮಂ ಆ ಕಡೆಯವರ ಹತ್ತು ಮಂದಿ ವರ್ತುಲಾಕಾರದ ಕುಳಿತಿದ್ದರು. ಮುಖ್ಯಸ್ಥನೆನ್ನಿಸಿಕೊಂಡವ ಹೆಣ್ಣು ನೋಡಲ ಬಂದ ದಿನ ಆ ಕಡೆಯವರು ಎಷ್ಟು ಜನವಿದ್ದ ಎಂದು ಮಾಧವಿಯನ್ನು ಕೇಳಿದ.

"ಮೂರು."

ಯಾರ್‍ಯಾರು ಎಂದು ತೋರಿಸಬಲ್ಲಳಾ?

ಸುತ್ತ ನೆರೆದಿದ್ದವರ ಮುಖಗಳೆಲ್ಲವನ್ನೂ ಒಮ್ಮೆ ಮಾಧವಿ ದಿಟ್ಟಿಸಿ ನೋಡಿದಳು. ಒಬ್ಬರೇನೋ ಗಂಡ ತಂದೆ. ಇನ್ನಿಬ್ಬರನ್ನು ಆವತ್ತು ಮಾತ್ರ ನೋಡಿದ ಮದುವೆಯಲ್ಲೂ ಕಣ್ಣಿಗೆ ಬಿದ್ದಿರಲಿಲ್ಲ, ಆದರೂ ಹುಡು ಚಾಣಾಕ್ಷೆ. ಫಕ್ಕನೆ ಗುರುತಿಸಿದಳು.

ಸಾಕಲ್ಲ? ಇನ್ನೂ ಏನು ಪುರಾವೆ ಬೇಕು? ಯಾರೋ ದನಿಯೆತ್ತಿದರು.

ಛೆ! ಛೆ! ಅದು ಹೇಗಾಗುತ್ತೆ? ಮುಂದುವರೆಸಿ ಉಳಿದ ಧ್ವನಿಗಳು ಸದ್ದು ಮಾಡಿದವು. ವಿಚಾರ ಮುಂದುವರೆಯಿತು.

ಆವತ್ತು ಬಂದವರಲ್ಲಿ ಹುಡುಗಿ ಏನಾದರ ವಿಶೇಷವನ್ನು ಗಮನಿಸಿದಳೆ? ಈ ಕಡೆಯ ಮ ಒಬ್ಬರಿಂದ ಇದಕ್ಕೆ ಬಲವಾದ ತಕರಾರು ಬಂತ ಬದುಕಿನ ಅಂಥಾ ಗಳಿಗೆಯಲ್ಲಿ ಹುಡುಗಿಯೊಬ್ಬ ಪರೀಕ್ಷೆಗೆ ಕೂತ ವಿದ್ಯಾರ್ಥಿನಿಗಿಂತ ಹೆಚ್ಚಿನ ಗೊಂದಲ ಸ್ಥಿತಿಯಲ್ಲಿರುವುದಿಲ್ಲವೆ? ಈ ವಿವರಗಳನ್ನೆಲ್ಲ ತಲೆಯ ಹಿಡಿದಿಟ್ಟುಕೊಳ್ಳುವುದು ಹೇಗೆ ಸಾಧ್ಯ? ಛೆ, ಇದು ಒಂದು ಪ್ರಶ್ನೆಯೇ? ಆದರೇನು? ಈ ಧ್ವನಿಯನ್ನು ಕಡೆಯವರು ಯಾರೂ ಎತ್ತಿ ಹಿಡಿಯದಿದ್ದರಿಂದ ಅದ ಅಲ್ಲಿಯೇ ಬಿದ್ದು ಹೋಯಿತು. ಆ ತರಹದ ಒತ್ತಾಸೆ ಅಗತ್ಯ ಮಾಧವಿಗೆ ಇರಲೂ ಇಲ್ಲ.

ಅದೇ ಆ ಮೂಲೇಲಿ ಕಪ್ಪು ಬಿಳುಪು ಅಂಚ ಶಾಲನ್ನು ಹೊದ್ದು, ವೀಳ್ಯ ಜಗಿಯುತ್ತಾ ಬಾಯಿ ಮೂಲೆಯಿಂದ ರಸ ಸುರಿಸುತ್ತಾ ಕೂತಿದ್ದಾರಲ್ಲ, ವೃದ್ಧರು ಆ ದಿನ ಚನ್ನದ ಅಂಚಿನ ಶಾಲನ್ನು ಹೊದ್ದಿದ್ದರಂ ಹೌದ್ ಹೌದು! ಸುತ್ತ ಮುತ್ತ ನೋಡಿ ಬೀಗ ಮುದುಕಪ್ಪ ಹೂಂಗುಟ್ಟಿದರು. (ತನ್ನ ಹೆಂಡತಿಯ ಶಾಲಲ್ಲವೇ ಅದು? ಯಾರದೋ ನೆಂಟರ ಬಾಣಂತ ಮಾಡಿದ್ದಕ್ಕೆ ಸಿಕ್ಕ ಉಡುಗೊರೆ. ಒಂದು ದಿನದ ಮಟ್ಟಿ ಕೊಟ್ಟಿರು ಮಾರಾಯ್ತಿ ಅಂತ ಕೇಳಿ ಹಾಕಿಕೊಂಡ ಬರುವ ಹೊತ್ತಿಗೆ ರಾಮಾ, ರಾಮಾ, ಆ ಕಷ್ಟ ತನಗ ಗೊತ್ತು!) ಶಾಲಿನ ಮಡಿಕೆಗಳ ನಡುವೆ ಅವರ ಕತ್ತ ಇದ್ದ ಊತವೂ ತನಗೆ ಕಂಡಿತ್ತು ಎಂದು ಮಾಧ ಹೇಳಿದಾಗ ಬೀಗಿ ಅರಳಿದ್ದ ಮುದುಕರ ಮು ಪೆಚ್ಚಾಗಿದ್ದು ನೋಡಿ ಮಾಧವಿ ಹೇಳಿದ್ದು ಸುಳ್ಳ ಎಂದು ಎಲ್ಲರಿಗೆ ಗೊತ್ತಾಯಿತು.

ಮಾಧವಿಯ ಉತ್ತರ ಕೇಳಿದ್ದೇ ಸುತ್ತ ಇದ್ದವರೆ ಬೆಚ್ಚಿ ಬಿದ್ದರು. ಎಂಥಾ ನೆನಪಿನ ಶಕ್ತಿ! ಏನು ಚುರು ದೃಷ್ಟಿ!

ತನ್ನ ಬಗ್ಗೆ ಏನೂ ಹೇಳದ ಈ ಹುಡುಗಿ ತನ್ನನ್ನ ಮೂಲೆಗೆ ಒತ್ತರಿಸುತ್ತಿದ್ದಾಳೆಯೆ? ಇನ್ನೊಬ್ಬ ಮುದುಕರು "ನನ್ನ ಬಗ್ಗೆ ಏನೂ ಗಮನಿಸಲಿಲ್ಲವೇ ತಾಯಿ?" ಎಂದ ಕೇಳಿದರು. ಯಾಕಿಲ್ಲ? "ನೀವು ಆ ದಿನ ಕನ್ನಡ ಹಾಕಿದ್ದಿರಿ..." ಮಾಧವಿ ಅದರ ವಿವರಗಳೆಲ್ಲವನು ಕೊಟ್ಟಾಗ ಯಾಕಾದರೂ ಪ್ರಶ್ನೆ ಕೇಳಿ ಅವಲಕ್ಷ ಎನ್ನಿಸಿಕೊಂಡೆನೋ ಎನ್ನುವಂತಾಗಿತ್ತು ಮುದುಕರ ಸಾರಾಂಶ ಇಷ್ಟು: ಕನ್ನಡಕದ ಫ್ರೇಮಿನ ಕಡ್ಡಿಯ ಒಂದು ದಾರದ ಮೂಲಕ ಕಿವಿಯ ಭಾಗಕ್ಕೆ ಸೇರ ಕಟ್ಟಿ, ಕೂದಲಿಂದ ಮರೆ ಮಾಡಿದ್ದರಂತೆ. ಸುಲಭವಾ

ಾಣದ ಅದು ಮಾಧವಿ ಬಡಿಸಲೆಂದು ಬಗ್ಗಿದ್ದಾಗ ಟ್ಟೆಗೆ ಬಿದ್ದಿತ್ತಂತೆ. ಮೊದಲನೆಯ ವೃದ್ಧರ ಗಂಟಲಿನ ೂತದ ಬಗ್ಗೆ ಈ ಕದೆಯುವರೂ ಅಷ್ಟು ಉತ್ಸಾಹ ತೋರಿಸಿರಲಿಲ್ಲ. ಈ ವೃದ್ಧರ ವಿಷಯದಲ್ಲಿ ಮಾತ್ರ ಮಸ್ತ ಹದಿನೈದು ಜನವೂ ಅವರ ಕನ್ನಡಕವನ್ನು ರ್ಟಿನ ಜೇಬಿನಿಂದ ಹೊರಗೆ ತೆಗೆಯಿಸಿ, ಹಾಕಿಸಿ ನೋಡಿ ಮಾಧವಿ ಹೇಳಿದ್ದು ಸುಳ್ಳಲ್ಲ ಎಂದು ಖಚಿತಪಡಿಸಿಕೊಂಡಿತು.

ವಿಚಾರಣೆ ಮುಗಿಯುವ ಹೊತ್ತಿಗೆ ಶಾಲಿನ ವೃದ್ಧರು "ಊಟದ ಸಮಯದಲ್ಲಿ ಏನಾದರೂ ವಿಶೇಷ ನಡೆಯಿತೆ?" ಎಂದು ಕೇಳಿದರು. ಹೌದಲ್ಲ? ತಾನು ಆ ಮೂವರಿಗೂ ಮೊಟ್ಟೆಯ ಖಾದ್ಯವೊಂದನ್ನು ಬಡಿಸಿ ಕೊನೆಗೆ ಈ ಪ್ರಶ್ನೆ ಕೇಳಿದ ಶಾಲಿನ ವೃದ್ಧರು ಅಪ್ಪಟ ಸಸ್ಯಾಹಾರಿ ಅಂತ ಗೊತ್ತಾಗಿ ಇನ್ನೊಂದು ಬಾಳೆಎಲೆಯನ್ನು ಹಾಸಬೇಕಾಯಿತಲ್ಲವೆ? ಕಿಂಚಿತ್ತೂ ವಿವರಗಳನ್ನು ತಪ್ಪದೇ ಮಾಧವಿ ಹೇಳಿದಾಗ ಪ್ರಶ್ನೆ ಕೇಳಿದವರು ತೆಪ್ಪಗೆ ಕುಳಿತರು.

ಇಷ್ಟಾಗುವ ಹೊತ್ತಿಗೆ ಕನ್ನಡಕ ವೃದ್ಧರತ್ತ ಇನ್ಯಾರೋ ಒಬ್ಬರು ಮೊಣಕೈಯಿಂದ ಮೆಲ್ಲಗೆ ತಿವಿದು ಕೇಳಿದರು, "ಇವರ ಬಗ್ಗೆ ಏನೂ ಜ್ಞಾಪಕ ಇಲ್ಲವೇ, ತಾಯಿ?" ಇದು ಬೇಕೆಂತಲೇ ಕೇಳಿದ ಪ್ರಶ್ನೆ ಎಂದು ಅವಳಿಗೆ ಅರಿವಾಯಿತು. ಕನ್ನಡಕದ ವೃದ್ಧರತ್ತ ಮತ್ತೊಮ್ಮೆ ಕಣ್ಣು ಹಾಯಿಸಿದಳು.

ಅವಳ ನೋಟದಲ್ಲಿ ಭಯವಿರಲಿಲ್ಲ, ಮರುಕವಿತ್ತು. ಅವಳ ಬಾಯಿಂದ ಈಗೇನು ಬರುವುದೋ ಎಂದು ಪಾಪ ವೃದ್ಧರು ಉಸಿರು ಬಿಗಿ ಹಿಡಿದು ಕೂತರು.

ಅವಳಿಗೆ ಚೆನ್ನಾಗಿಯೇ ನೆನಪಿತ್ತು. ಬಡಿಸುವವಳಿಂದ ಹೆಚ್ಚಿನ ಅನ್ನದ ಪಾಲನ್ನು ಬೇಡುವಂತೆ ಅವರ ಕಣ್ಣುಗಳು ಅವಳ ಕಣ್ಣುಗಳನ್ನು ಸಂಧಿಸಿದ್ದವು. ಎಲೆಗೆ ಜಾಸ್ತಿ ಬಿದ್ದ ಮೇಲೆ ಹುಡುಗಿಯ ದೊಡ್ಡ ಕೈಯ ಫಲವಾಗಿ ಅಯ್ಯೋ ಹೆಚ್ಚಾಗಿ ಬಿತ್ತೇ ಎನ್ನುವಂತೆ ನಟಿಸಿದ್ದರು. ಹೀಗೆ ಬಡಿಸಿದರೆ ಹುಡುಗನ ಕಡೆಯವರು ದುಂದುಗಾತಿ ಎಂದುಕೊಳ್ಳುವುದಿಲ್ಲವೇ, ಇದಕ್ಕಾಗಿಯೇ ಮದುವೆ ತಪ್ಪಿ ಹೋದರೆ ಏನು ಗತಿ ಎಂದು ತಂದೆ ಕೋಪಿಸಿಕೊಂಡಿದ್ದರು. ಇಲ್ಲ, ನಾನು ಮುಗ್ಧಳೆಂದು ಸಾಧಿಸಲು ಅದನ್ನೆಲ್ಲ ಹೇಳಿ ಈ ಮನುಷ್ಯನ ಮರ್ಯಾದೆಗೆ ನಾನೇಕೆ ಕುಂದು ತರಬೇಕು? ಅವತ್ತಿಗೂ, ಇವತ್ತಿಗೂ ಮಾಧವಿಯ ಕಣ್ಣುಗಳಲ್ಲಿದ್ದದ್ದು ಮರ್ಯಾದೆಗೆ ಕುಂದು ತಂದುಕೊಳ್ಳದೇ ತನ್ನ ಹೊಟ್ಟೆಬಾಕತನವನ್ನು ತೃಪ್ತಿಪಡಿಸಿಕೊಳ್ಳಲೆತ್ನಿಸಿದ ಈ ಮನುಷ್ಯನ ಬಗ್ಗೆ ಅಪಾರ ಮರುಕ ಮಾತ್ರ. ತಾನೂ ತನ್ನ ಪಾತ್ರವನ್ನು ಅಲ್ಲಿ ಅಭಿನಯಿಸುತ್ತಿದ್ದದ್ದು ತನ್ನ ಹೊಟ್ಟೆ ಪಾಡಿಗೇ ಅಲ್ಲವೇ?

ಏನಾಯಿತೋ ಏನೋ! ಅವಳ ಕಣ್ಣುಗಳಲ್ಲಿದ್ದ ಅನುಕಂಪ ವೃದ್ಧರ ಎದೆಯಲ್ಲಿ ವಾತ್ಸಲ್ಯದ ಎಳೆಯನ್ನೇ ಉಕ್ಕಿಸಿತು. ಗಂಡಿನ ತಂದೆಯತ್ತ ತಿರುಗಿ ಗದರಿಸಿಯೇ ಬಿಟ್ಟರು. "ಈ ಮರ್ಯಾದಸ್ಥ ಹುಡುಗಿಗೆ ಈ ತರಹ ಅವಮಾನ ಮಾಡುವ ಬದಲು ಇನ್ನೊಂದು ಬಾಯಿಗೆ ತುತ್ತು ಹಾಕುವ ಶಕ್ತಿಯಿಲ್ಲ ಅಂತ ಯಾಕೆ ನೀವು ಧೈರ್ಯವಾಗಿ ಒಪ್ಪಿಕೊಳ್ಳಬಾರದು? ಆ ಹುಡುಗಿಯಲ್ಲಿ ಮೋಸ, ತಟವಟ ಏನೂ ಇಲ್ಲ ಅಂತ ಇನ್ನೂ ಅರ್ಥ ಆಗ್ಲಿಲ್ವೇ? ಮಾನ, ಮರ್ಯಾದೆಗೆ ಅಂಜುವವರಾದರೆ ಈ ಕ್ಷಣವೇ ಆ ಹುಡುಗಿಯನ್ನು ಮನೆಗೆ ಹಿಂತಿರುಗಿ ಕರೆಸಿಕೊಳ್ಳಿ."

ಫಟಫಟನೆ ಹೇಳಿದ ವೃದ್ಧರು ಎಲ್ಲರ ಮುಖವನ್ನೊಮ್ಮೆ ನೋಡಿದರು. ಎಲ್ಲರ ಕಣ್ಣಲ್ಲೂ ಒಪ್ಪಿಗೆಯನ್ನು ಗುರುತಿಸಿದ್ದೇ ಮಾಧವಿಯ ತಂದೆಯ ಕಡೆಗೆ ತಿರುಗಿ "ಈ ತರಹ ಒಬ್ಬ ಹುಡುಗಿಯನ್ನು ಪ್ರಶ್ನಿಸಲು ಬಂದದ್ದೇ ನನಗೆ ಹೀನಾಯ ಅಂತ ಅರಿವಾಗಿದೆ, ಇವರೇ. ಈ ತರಹದ ನೆನಪಿನ ಶಕ್ತಿ ಬುದ್ಧಿವಂತಿಕೆ ಇರುವ ಹುಡುಗಿಯನ್ನು ನಾನು ನೋಡಿದ್ದೇ ಇಲ್ಲ, ತಪ್ಪು ಮಾಡಿಬಿಟ್ಟೆ. ನೀವು ಅವಳನ್ನ ಏನಾದರೂ ಓದಿಸಿದ್ದಿದ್ದರೆ!! ಈ ತರಹದ ಪ್ರಸಂಗಕ್ಕೆ ಅವಳನ್ನು ಒಡ್ಡುವ ಪರಿಸ್ಥಿತಿಯೇ ಬರುತ್ತಿರಲಿಲ್ಲ, ಬಿಡಿ" ಅಂದರು.

ಅಬ್ಬಾ! ಸಧ್ಯ, ನನ್ನ ಅಗ್ನಿ ಪರೀಕ್ಷೆ ಮುಗಿಯಿತು ಎಂದು ನಿಟ್ಟುಸಿರು ಬಿಟ್ಟು ಗಂಡನ ಕೋಣೆಗೆ ಕಾಲಿಟ್ಟ ಮಾಧವಿಯನ್ನು ಗೋಡೆಗೆ ನೇತು ಹಾಕಿದ್ದ ಮಂಗಳಕಾತ್ರಂನ "ಮದುವೆಗಳು ಸ್ವರ್ಗದಲ್ಲಿ ನಿಶ್ಚಯಿಸಲ್ಪಡುತ್ತವೆ" ಎಂಬ ಮುದ್ದಾದ ಅಕ್ಷರಗಳು ಕಣ್ಣಿಗೆ ಹೊಳೆದು ಸ್ವಾಗತಿಸಿದವು.

ಕನ್ನಡಕ್ಕೆ :
ಸುಕನ್ಯಾ ಕನಾರಳ್ಳಿ

ತನನಂ ತನನಂ



ತೇಲಿ ಬಂದ ದಾರಿ 6

ಕವಿತಾ ಲಂಕೇಶ್

ಸಿನಿಮಾ ಮೇಕಿಂಗ್ ಅಂದ್ರೆ ಪಾರ್ಟಿ ಮಾಡಿದ ತರಹ ಅಲ್ಲ, ವಿಸ್ಕಿ ಕುಡಿಯುತ್ತ ಡಿಸ್ಕಷನ್‌ಗೆ ಕೂರ್‍ವುದು ಹರಟೆ ಹೊಡೆದಂತಷ್ಟೇ. ನಮ್ಮ ಬಹುತೇಕ ನಿರ್ದೇಶಕರ 'ಲೀವಿ' ನೋಡಬೇಕು ನೀವು. ದೊಡ್ಡ ಹೋಟೆಲಿನಲ್ಲೋ, ಕ್ಲಬ್‌ನಲ್ಲೋ ಅವರಿಗೆ 'ರೂಮು' ಹಾಕಿಸಿಕೊಡಬೇಕಂತೆ. ತೀರ್ಥ, ತುಂಡುಗಳ ವ್ಯವಸ್ಥೆ ಮಾಡಬೇಕಂತೆ! ಇದು ಅಶಿಸ್ತಿನ ಪರಮಾವಧಿ ಅನ್ನಿಸಲ್ವೆ?

ನನಗಂತೂ ಚಿತ್ರಕ್ಕೆ ಸಂಬಂಧಿಸಿದ ಪ್ರತಿ ಕಾರ್ಯವೂ ಅಚ್ಚುಕಟ್ಟಾಗಿರಬೇಕು. ನಾನು ರೂಮೂ ಹಾಕ್ಲಿಲ್ಲ, ಪಾರ್ಟಿನೂ ಮಾಡ್ಲಿಲ್ಲ. ಗಾಂಧಿಬಜಾರಿನ ನನ್ನ ಆಫೀಸಲ್ಲೇ ಎಲ್ಲಾ ಚರ್ಚೆ, ಬರವಣಿಗೆ ನಡೆಯಿತು. ಅಷ್ಟೇಕೆ ಕಲ್ಯಾಣ್ ಸಹ ಇಲ್ಲೇ ಕುಳಿತು ಹಾಡು ರಚಿಸಿದ್ದು, ಟ್ಯೂನ್ ಹಾಕಿದ್ದು. ಉಳಿದಂತೆ ನಾನು ಆಫೀಸ್, ಮನೆಗಳಲ್ಲೇ ಸ್ಕ್ರಿಪ್ಟ್ ವರ್ಕ್ ಮಾಡಿದ್ದು.

ಶಿಸ್ತಿನಿಂದ ಕೆಲಸ ಮಾಡುವವರಿಗೆ ಈ ಗಾಂಧಿ ನಗರದಲ್ಲಿ ಆರಂಭದಲ್ಲೊಂದಿಷ್ಟು ಕಷ್ಟವಾಗಬಹುದು. ಆದರೆ ಯಶಸ್ಸು ಖಚಿತ. ಮೊದಲು ಜಾಹೀರಾತು ನಿರ್ಮಿಸುತ್ತಿದ್ದ ಸತ್ಯಜಿತ್ ರೇ ಸಿನಿಮಾ ನಿರ್ಮಾಣದಲ್ಲಿ ಶಿಸ್ತು, ಸಮಯಪಾಲನೆ ಪಾಲಿಸುತ್ತಲೇ ಮೇಲೆ ಬಂದರಲ್ಲವೆ? ನನ್ನ ಅಪ್ಪನ ಶಿಸ್ತಿನ ಕುರಿತು ನಿಮಗೆ ಗೊತ್ತೇ ಇದೆ. ಬರೆಯುವುದರಲ್ಲಿ ಅಥವಾ ಇನ್ಯಾವುದೇ ಕಾರ್ಯಕ್ರಮ ನಡೆಸುವುದರಲ್ಲಿ ಅವರಿಗೆ ಶಿಸ್ತು, ಸಮಯಪ್ರಜ್ಞೆ ಮುಖ್ಯವಾಗಿರುತ್ತಿತ್ತು.

ಅಪ್ಪ, ತೇಜಸ್ವಿ, ಮಾಲ್ಗುಡಿ ಡೇಸ್ ಸುತ್ತ

ಕಾರ್ನಾಡ್ ಜೊತೆ ಕುತೂಹಲದ ಪಯಣದಲ್ಲಿ.....



ನಮ್ಮ ಗಿರೀಶ್ ಕಾರ್ನಾಡ್‌ರದ್ದು ಅಷ್ಟೇ. ಕಾರ್ನಾಡ್‌ರಂತಹವರ ಜೊತೆ ಕೆಲಸ ಮಾಡುವುದೇ ಒಂದು ವಿಶಿಷ್ಟ ಅನುಭವ. ಚಿಕ್ಕಮಗಳೂರಿನಿಂದ 30 ಕಿ.ಮೀ. ದೂರದಲ್ಲಿರುವ ಆವತಿ ಎಂಬ ಹಳ್ಳಿಯಲ್ಲಿನ ನಟೇಶ್, ಅಂಜನಾ ಅವರ ಮನೆಯಲ್ಲಿ ಶೂಟಿಂಗ್ ಮಾಡಿದೆವು. ಪ್ರತಿದಿನ ನಾವು ಚಿಕ್ಕಮಗಳೂರಿನಿಂದ ಒಂದು ತಾಸು ಪ್ರಯಾಣ ಮಾಡಿ ಆವತಿ ತಲುಪುತ್ತಿದ್ದೆವು. ನಾನು ಕಾರ್ನಾಡ್‌ರ ಜೊತೆ ಪ್ರಯಾಣ ಮಾಡುತ್ತಿದ್ದೆ. ಅವರೊಂದಿಗೆ ಮಾತಾಡುತ್ತಿದ್ದರೆ ಎಷ್ಟೊಂದು ವಿಷಯಗಳು ಗೊತ್ತಾಗುತ್ತವೆ ಗೊತ್ತಾ? ಅಪ್ಪ, ತೇಜಸ್ವಿಯರೊಂದಿಗೆ ಅವರ ಒಡನಾಟ, ಚರ್ಚೆಗಳು, ಸಾಹಿತ್ಯ ನಾಟಕ.... ಜೊತೆಗೆ ಶಂಕರ್‌ನಾಗ್ ಜೊತೆ ಕಾರ್ನಾಡರು ಮಾಲ್ಗುಡಿ ಡೇಸ್ ಮಾಡಿದ್ದು, ಮಾಲ್ಗುಡಿ ಡೇಸ್ ಧಾರಾವಾಹಿ ಮಾಡುವಾಗಿನ ನನ್ನ ಅನುಭವಗಳು... ಇವೆಲ್ಲ ಚರ್ಚೆಯಲ್ಲಿ ಹಾದು ಹೋಗುತ್ತಿದ್ದವು. ಗಂಭೀರ ವಿಷಯಗಳ ಮಧ್ಯೆ ಅಲ್ಲಿ ಹಾಸ್ಯ, ವಿಡಂಬನೆ ಎಲ್ಲ ಇರುತ್ತಿತ್ತು. ಕಾರ್ನಾಡ್‌ರಿಂದ ನಾನು ಎಷ್ಟೊ ಹೊಸ ವಿಷಯಗಳನ್ನು ಅರ್ಥ ಮಾಡಿಕೊಂಡೆ. ಸಾಹಿತ್ಯ, ಸಿನಿಮಾ, ನಾಟಕ ಹೀಗೆ ಬಹುಕ್ಷೇತ್ರಗಳಲ್ಲಿ ತಮ್ಮ ಛಾಪು ಮೂಡಿಸಿರುವ ಬಹುಮುಖ ಪ್ರತಿಭೆ ಕಾರ್ನಾಡ್ ನನ್ನ ಚಿತ್ರದಲ್ಲಿ ನಟಿಸಿರುವುದು ನನಗೆ ಹೆಮ್ಮೆಯ ವಿಷಯ.

ಸಂಭಾಷಣೆಯನ್ನು ಮುಂಚಿತವಾಗಿ ಓದಿಕೊಳ್ಳುತ್ತಿದ್ದ ಕಾರ್ನಾಡ್ ಸಲೀಸಾಗಿ ಅಭಿನಯಿಸಿಬಿಡುತ್ತಿದ್ದರು. ಅನಂತ್ ನಾಗ್ ಸಹ ಹೀಗೇ. ಕಾರ್ನಾಡ್ ತಂಗಿಯಾಗಿ ಪುಟ್ಟ ಪಾತ್ರದಲ್ಲಿ ಲಕ್ಷ್ಮಿ ಚಂದ್ರಶೇಖರ್ ಅಭಿನಯಿಸಿದ್ದಾರೆ. ಅವರು ಮತ್ತು ನನ್ನ ಮಧ್ಯೆ ಸೀರೆಯ ಕಿತಾಪತಿ ನಡೆದೇ ಇರುತ್ತೆ. ಅವರೇ ತಂದಿದ್ದ ಸೀರೆ ಶೂಟಿಂಗ್ ವೇಳೆ ಎಲ್ಲೋ ಮಿಸ್ ಆಗಿತ್ತು, ನಾವು ಬೇರೆ ಸೀರೆ ಕೊಟ್ಟೆವು. ಆದರೆ ಅದು ತುಂಬಾ ರಿಚ್ ಇದ್ದುದರಿಂದ ಲಕ್ಷ್ಮಿ ಅವರಿಗೆ ಕಂಫರ್ಟ್ ಎನಿಸಲೇ ಇಲ್ಲ, ಅದರಿಂದ ಸಹಜ ಅಭಿನಯವೂ ಬರಲೇ ಇಲ್ಲ, ಸ್ವಲ್ಪ ಹೊತ್ತಿನ ನಂತರ ಅವರೇ ತಂದಿದ್ದ ಆ ಸೀರೆ ಸಿಕ್ಕಿತು. ಸೀರೆ ತೊಟ್ಟಾಗ ಲಕ್ಷ್ಮಿ ಎಷ್ಟು ನ್ಯಾಚುರಲ್ ಆಗಿ ಅಭಿನಯಿಸಿದರು ಗೊತ್ತೆ? ಕಂಫರ್ಟ್ ಡ್ರೆಸ್‌ನಲ್ಲಿದ್ದರೆ ಬೇರೆಲ್ಲ ಕೆಲಸಗಳೂ ಸಲೀಸಾಗಿ ನೆರವೇರುತ್ತವೆ.

ನಾನು ಮಾಲ್ಗುಡಿ ಡೇಸ್ ಧಾರಾವಾಹಿ ಮಾಡುವಾಗಲೂ ಲಕ್ಷ್ಮಿ ಮತ್ತು ನನ್ನ ಮಧ್ಯೆ ಸೀರೆ. ಕಿರಿಕಿರಿ ಮಾಡಿತ್ತು. ಆ ಸೀರಿಯಲ್‌ನಲ್ಲಿ ಲಕ್ಷ್ಮಿಯವರು ಐಯ್ಯಂಗಾರಿ ಬ್ರಾಹ್ಮಣರ ಶೈಲಿಯಲ್ಲಿ ಸೀರೆ ತೊಡಬೇಕಿತ್ತು. ಕಚ್ಚೆ ಹಾಕಿ ಬಂಧನಕ್ಕೊಳಪಡಿಸಿದಂತೆ ಕಾಣುತ್ತಿತ್ತು. **Nature's call** (ನಿಸರ್ಗದ ಕರೆ)ಗೆ 'ಉತ್ತರಿಸಲು' ಹೋಗುವಾಗ ಅವರ ಕಷ್ಟ ನೋಡಬೇಕಿತ್ತು, ಪಾಪ! ಒಂದು ಸಾರಿ ಕಾಲ್‌ಗೆ 'ಉತ್ತರಿಸಿ' ಸೀರೆಯನ್ನು ಶಾಲಿನಂತೆ ತೊಟ್ಟು ಹೊರಬಂದರು. ನಮಗೋ ನಗುವೋ ನಗು.... ಮತ್ತೆ ಅವರಿಗೆ ಐಯ್ಯಂಗಾರಿ ಶೈಲಿಯಲ್ಲಿ ಸೀರೆ ತೊಡಿಸಿದೆವು. ನನ್ನ ಮುಂದಿನ ಚಿತ್ರದಲ್ಲಿ ಲಕ್ಷ್ಮಿ ಅವರಿಗೆ ಚೂಡಿದಾರ್ ಇರುವ ಪಾತ್ರ ನೀಡುವುದೇ ಒಳಿತೆನೋ....

ರಂಗಭೂಮಿ ಹಿನ್ನೆಲೆಯ ಕಾರ್ನಾಡ್, ಲಕ್ಷ್ಮಿ ಚಂದ್ರಶೇಖರ್ ಇಬ್ಬರದು ಒಂದೇ **School of thought.** ಶಿಸ್ತು, ಸಹಜ ಅಭಿನಯ, ಶ್ರದ್ಧೆ ಸಮಯಪ್ರಜ್ಞೆ ಇಬ್ಬರಲ್ಲೂ ಎದ್ದು ಕಾಣುವ ಲಕ್ಷಣಗಳು. ಚಿತ್ರದ ಒಂದು ದೃಶ್ಯದಲ್ಲಿ ಲಕ್ಷ್ಮಿ ಚಂದ್ರಶೇಖರ್ ಅಣ್ಣ ಕಾರ್ನಾಡರಿಗೆ ವಿದಾಯ ಹೇಳಿ ಊರಿಗೆ ಹೋಗುತ್ತಾರೆ. ನಾನು ಶೂಟ್ ಮಾಡಲು ರೆಡಿ ಆಗಿದ್ದೆ. ಆದರೆ ಅಲ್ಲಿ ಕಾರ್ನಾಡ್, ಲಕ್ಷ್ಮಿ ಚಂದ್ರಶೇಖರ್ ಗಹನವಾದ ಚರ್ಚೆಯಲ್ಲಿ ತೊಡಗಿದ್ದರು. ಅವರೇನು ಚರ್ಚಿಸುತ್ತಿದ್ದರು ಗೊತ್ತಾ? ತಾನು ಕೈಮುಟ್ಟಿ ವಿದಾಯ ಹೇಳಬೇಕೆ ಬೇಡವೆ ಎಂಬುದು ಲಕ್ಷ್ಮಿಯವರ ಪ್ರಶ್ನೆ. ಅಂದರೆ ಸಂಪ್ರದಾಯಸ್ಥ ಕುಟುಂಬದ ಪಾತ್ರವಾಗಿ ಹಾಗೆ ಮಾಡಬಹುದೆ ಎಂದು ಕಾರ್ನಾಡ್‌ರೊಂದಿಗೆ ಚರ್ಚಿಸುತ್ತಿದ್ದರು. ರಂಗಭೂಮಿ ಹಿನ್ನೆಲೆಯ ಈ ಇಬ್ಬರು ಸಣ್ಣಸಣ್ಣ ಸಂಗತಿಗಳನ್ನು ತುಂಬಾ ಶ್ರದ್ಧೆಯಿಂದ, ವಿವೇಚನೆಯಿಂದ ಚರ್ಚಿಸಿ, ಪರಿಪೂರ್ಣ ಅಭಿನಯ ನೀಡುತ್ತಾರೆ.

ಭಾರತಿಯವರಂತೂ ಪಕ್ಕಾ ಪ್ರೊಫೆಷನಲ್. ಹಿಂದಿನ ದಿನವೇ ಎಲ್ಲ ವಿವರ ಪಡೆದು ಮರುದಿನ ಶೂಟಿಂಗ್‌ಗೆ ರೆಡಿಯಾಗಿರೋರು... ಒಂದೇ ಟೇಕ್‌ಗೆ ಓಕೆ.... ಪರಿಪಕ್ವ ಅಭಿನಯ.... ಅಳುವ ಸೀನ್‌ಗಳಲ್ಲಿ ಅವರು ನ್ಯಾಚುರಲ್ ಆಗಿ ಅತ್ತೇ ಬಿಡುತ್ತಾರೆ. ಅಷ್ಟೊಂದು ಭಾವುಕರು ಅವರು. 'ಪ್ರೀತಿ ಪ್ರೇಮ ಪ್ರಣಯ'ದಲ್ಲಿ ಅವರ ಕಣ್ಣಂಚಲ್ಲಿ ನೀರು ಬರುವ ಸೀನ್... ನಾನು ಲಾಂಗ್ ಶಾಟ್‌ನಿಂದ ಆರಂಭಿಸಿ ಕ್ಲೋಸ್ ಶಾಟ್‌ಗೆ ಬರುತ್ತಿದ್ದಂತೆ ಅವರ ಕಣ್ಣಂಚಲ್ಲಿ ನೀರು! ಆ ಸಹಜ ಅಭಿನಯಕ್ಕೆ ಮಾರುಹೋದ ನನಗೆ ಸಡನ್ ಆಗಿ ಶೂಟ್ ಮಾಡಲಾಗಲಿಲ್ಲ. 'ತನನಂ ತನನಂ'ನಲ್ಲಿ ಕೆಲವು ಸೀನ್‌ಗಳಲ್ಲಿ ಭಾರತಿಯವರಿಗೆ ಡೈಲಾಗ್‌ಗಳಿಲ್ಲ, ಸುಮ್ಮನೆ ನಿಲ್ಲುವ ದೃಶ್ಯಗಳವು. ಅಂತಹ ಸೀನ್ ಇದ್ದಾಗ 'ಬಂಗಾಳಿ ಸಿನಿಮಾ ಸೀನಾ?' (ಅಂದರೆ ಆರ್ಟ್ ಫಿಲ್ಮ್ ಆಕ್ಟಿಂಗ್) ಎಂದು ತಮಾಷೆ ಮಾಡುತ್ತಿದ್ದರು.

ಒಂದು ವಿಷಯ ನೆನಪಿಡಿ: ಪಾತ್ರಕ್ಕೆ ಡೈಲಾಗ್ ಇರಲಿ ಬಿಡಲಿ, ಆ ಪಾತ್ರ ಮುಖ್ಯವಾಗಿರಲಿ, ಬಿಡಲಿ; ಸ್ಕ್ರೀನ್ ಪ್ರೆಸೆನ್ಸ್, ಪ್ರೇಕ್ಷಕರನ್ನು ಸೆಳೆಯುವ ಭಾವಶಕ್ತಿ ಇದ್ದರೆ ಖಂಡಿತಾ ಅಂತಹ ಪಾತ್ರಧಾರಿ ಕ್ಲಿಕ್ ಆಗುತ್ತಾನೆ/ಳೆ. ಅಪ್ಪ ಒಮ್ಮೆ ಹೇಳಿದ್ದರು: "ಹಲವಾರು ಜನ ವೇದಿಕೆ ಮೇಲೆ ನೃತ್ಯಿಸುತ್ತಿರುವ ದೃಶ್ಯದಲ್ಲಿ ಎಲ್ಲೋ ಮೂಲೆಯಲ್ಲಿ ಕುಳಿತು ಶೂ ಪಾಲಿಶ್ ಮಾಡುತ್ತಿರುವ ಪುಟ್ಟ ಹುಡುಗ ತನ್ನ ಪ್ರೆಸೆನ್ಸ್, ಭಾವಪೂರ್ಣ ಅಭಿನಯದಿಂದ ಪ್ರೇಕ್ಷಕರನ್ನು ಸೆಳೆದು ಹೀರೋ ಆಗಿಬಿಡಬಲ್ಲ....." ನಾನು ಇದನ್ನೇ ಹೇಳುವುದು. ಫ್ಯಾಮಿಲಿ ಸೀನ್ ಇರುವಾಗ ಅಲ್ಲಿ ಕುಟುಂಬದ ಎಲ್ಲ ಸದಸ್ಯರು ಇದ್ದರೆ ಆ ಫೀಲ್ ಬರುತ್ತಲ್ಲವಾ? ಈ ಚಿತ್ರದಲ್ಲಿನ ಒಂದು ಹಾಡಿಗೆ ಭಾರತಿ ಬಿಟ್ಟರೆ ಬೇರಾರೂ ಹೊಂದುವುದೇ ಇಲ್ಲ ಎಂದು ಮೊದಲೇ ನಿರ್ಧರಿಸಿ ಅವರನ್ನು ಆರಿಸಿದ್ದೆ. ನಾನು ನಟನಾಗಣವನ್ನು ಆಯ್ಕೆ ಮಾಡಿದ್ದು ನೋಡಿಯೇ ನಿರ್ಮಾಪಕ ಸುರೇಶ್ ಖುಷಿಗೊಂಡು ಚಿತ್ರ ನಿರ್ಮಾಣಕ್ಕೆ ಮುಂದಾಗಿದ್ದು.

ನಾನು, ಗಿರೀಶ್ ಕಾರ್ನಾಡ್, ಭಾರತಿ ಎಲ್ಲ ಸೇರಿ ಹರಟುತ್ತಿದ್ದಾಗ ಒಂದು ಕುತೂಹಲದ ಸಂಗತಿ ತಿಳಿಯಿತು. ವಿಷ್ಣುವರ್ಧನ್ ನಟಿಸಿದ ಮೊದಲ ಚಿತ್ರ ಯಾವುದು? ನೀವೆಲ್ಲ ಹೇಳೋದು 'ನಾಗರಹಾವು' ಅಂತಾನೇ ಅಲ್ವಾ? ನೊ.... ನೊ.... ಅದು ಕಾರ್ನಾಡ್ ನಿರ್ದೇಶನದ 'ವಂಶವೃಕ್ಷ....'

'ವಂಶವೃಕ್ಷ'ದ ನಟನಾಗಣದ ಆಯ್ಕೆಗೆ ಹಲವಾರು ಜನ ಹಾಜರಿದ್ದರಂತೆ. ಆ ಗದ್ದಲದಲ್ಲಿ ವಿಷ್ಣುವರ್ಧನ್ ಸಹ ಇದ್ದರು. ಅಲ್ಲಿದ್ದ ಒಬ್ಬರು ವಿಷ್ಣು ಜೊತೆ ಮಾತಿಗಿಳಿದರು. ಚಿತ್ರದಲ್ಲಿ ತಮಗೆ ನಟಿಸುವ ಆಸೆಯೇ ಎಂದು ಕೇಳಿದರು. ವಿಷ್ಣು ತಾವು ಬ್ಯುಸಿ ಎಂದು ತೋರಿಸಲು "ನನಗೆ ಒಳ್ಳೆ ಆಫರ್ ಬರ್‍ತಿದೆ. ಹಿಂದಿಯಿಂದಲೂ ಆಫರ್ ಇವೆ... ಸದ್ಯಕ್ಕೆ ನಾನು ಬ್ಯುಸಿ" ಎಂದರಂತೆ. "ಹಾಗಾದ್ರೆ ನೀವು ನಮ್ಮ ಚಿತ್ರದಲ್ಲಿ ನಟಿಸೋದಿಲ್ಲ ಬಿಡಿ" ಎಂದರು ಆ ವ್ಯಕ್ತಿ... ಆಗ ಸಡನ್ನಾಗಿ ವಿಷ್ಣು "ತಾವ್ಯಾರು ಗೊತ್ತಾಗ್ಲಿಲ್ಲ" ಎಂದರಂತೆ. "ನಾನು ಕಾರ್ನಾಡ್" ಎಂದು ಆ ವ್ಯಕ್ತಿ ಹೇಳುತ್ತಿದ್ದಂತೆ "ಸಾರ್, ನೀವು ಯಾವ ಪಾತ್ರ ಕೊಟ್ಟರೂ ಮಾಡಲು ನಾನು ರೆಡಿ" ಎಂದು ಖುಷಿಗೊಂಡರಂತೆ. ಈ ಸಂಗತಿ ಕೇಳಿ ನಾವೆಲ್ಲ ನಕ್ಕೆವು. ನೋಡಿ ಅಂದು ಚಾನ್ಸ್ ಕೇಳಿದ್ದ ವಿಷ್ಣು ಇಂದು ದೊಡ್ಡ ಸ್ಟಾರ್. ಅಂದಿನಿಂದ ಇಲ್ಲಿವರೆಗಿನ ಅವರ ಸಿನಿಪಯಣ ಅದ್ಭುತವಾದದ್ದು. ಮುಂದಿನ ವಾರ 'ತನನಂ ತನನಂ'ನ ಪಯಣವನ್ನು ಮುಂದುವರಿಸೋಣವಾ?

ನಿರೂಪಣೆ: ಪಿ.ಕೆ. ಮಲ್ಲನಗೌಡರ್

ಹೃದಯ ಕಪ್ಪಾದಷ್ಟೂ ಬಟ್ಟೆ ಬಿಳಿ ಆಗುತ್ತೆ!

ಅಣಕ

ಶ್ವೇತ ವಸ್ತ್ರ!

ಇದನ್ನು ಕೇಳಿದ ತಕ್ಷಣ ಕೆಲವು ಹೆಂಗಸರು ಅನಿವಾರ್ಯವಾಗಿ ಅನುಭವಿಸಲೇಬೇಕಾದ 'ಬಿಳಿ ಬಟ್ಟೆ'ಯ ನೋವು ನೆನಪಾಗಬಹುದು. ಯುದ್ಧ ಸಮಯದಲ್ಲಿ ಶಾಂತಿ ಸಂಕೇತವಾಗಿ ಹಾರಿಸುವ ಬಿಳಿಯ ಬಾವುಟವೂ ಕೆಲವರಿಗೆ ಜ್ಞಾಪಕಕ್ಕೆ ಬರಬಹುದು. ಸಿನಿಮಾಗಳಲ್ಲಿ ತೋರಿಸುವ ವಿಧವೆಯ ದೃಶ್ಯವೂ ಕಣ್ಣಮುಂದೆ ಬರಬಹುದು. ನಾನು ಹೇಳಬೇಕೆಂದು ಹೊರಟಿರುವುದು ಶಾಂತಿಯ ಸಂಕೇತವಾದ ಬಾವುಟ ಕುರಿತೂ ಅಲ್ಲ, ನೋವಿನ ಬಿಳಿ ಬಟ್ಟೆಯ ಬಗ್ಗೆಯೂ ಅಲ್ಲ, ಕಾಲುಕೆರೆದು ಜಗಳ ಹುಟ್ಟು ಹಾಕುವ ರಾಜಕಾರಣಿಗಳ ಮೈಮೇಲೆ ವಿಜೃಂಭಿಸುವ ಶ್ವೇತವಸ್ತ್ರದ ಮಾತು.

ರಾಜಕಾರಣಿಗಳು ಯಾಕೆ ಬಿಳಿ ಬಣ್ಣವನ್ನೇ ತಮ್ಮ ಸಮವಸ್ತ್ರಕ್ಕೆ ಆಯ್ಕೆ ಮಾಡಿಕೊಂಡರು ಎಂಬುದನ್ನು ಕೆದಕಲಾಗಿ... ಇದು ರೋಮ್‌ನ ಕೊಡುಗೆ ಅಂತೆ. ಅಲ್ಲಿನ ರಾಜಕಾರಣಿಗಳು ಚುನಾವಣೆ ಸಮಯದಲ್ಲಿ ತಾವು ತೊಟ್ಟಿರುವ ಬಿಳಿ ಬಣ್ಣದಂತೆ ಶುಭ್ರರೂ, ಸತ್ಯ ಸಂಧರೂ ಆಗಿದ್ದೇವೆ ಎಂದು ತಿಳಿಸಲು ಹೀಗೆ ಮಾಡುತ್ತಿದ್ದರಂತೆ. ರೋಮನ್ ಭಾಷೆಯಲ್ಲಿ ಇವರನ್ನ 'ಕ್ಯಾಂಡಿಡೇಟಸ್' ಅನ್ನುತ್ತಿದ್ದರಂತೆ. ಅಂದರೆ ಬಿಳಿಯ ಬಟ್ಟೆ ತೊಟ್ಟವನು ಅಂತ. ಅದು ಇಂಗ್ಲಿಷಿನಲ್ಲಿ ಕ್ಯಾಂಡಿಡೇಟ್ ಆಯಿತಂತೆ. ಅಲ್ಲ, ಇಂತಹ ಶುಭ್ರ ಚಾರಿತ್ರ್ಯದವರು ಧರಿಸಬೇಕಾದ ವಸ್ತ್ರವನ್ನು ನಮ್ಮ ಪವಿತ್ರ ಭಾರತದ ರಾಜಕಾರಣಿಗಳು ಆಯ್ಕೆ ಮಾಡಿಕೊಂಡದ್ದು ಸೋಜಿಗದ ಸಂಗತಿಯೇ ಸರಿ. ರಾಜಕಾರಣಿಗಳ ಹೃದಯ ಹೆಚ್ಚು ಕಪ್ಪಾದಷ್ಟೂ ಅವರು ಧರಿಸುವ ಬಟ್ಟೆ ಹೆಚ್ಚುಹೆಚ್ಚು ಬಿಳಿಯಾಗುತ್ತಾ ಹೋಗುತ್ತದೆ ಎಂದು ಯಾರೋ ಹೇಳಿದ ಮಾತು ನೆನಪಾಗುತ್ತದೆ. ಅಂದರೆ ಬಿಳಿಬಟ್ಟೆ ಕಪ್ಪು ಹೃದಯದ ಸಂಕೇತ!

ಈ ಶ್ವೇತ ವಸ್ತ್ರಧಾರಿಗಳು ಸದನದ ಬಾವಿಗೆ ಇಳಿದು ಕಿರುಚಾಡುತ್ತಾ, ಚೀರಾಡುತ್ತಾ ಕೈಕೈ ಮಿಲಾಯಿಸುವುದನ್ನು ನೋಡುವುದೇ ಒಂದು ರೀತಿಯ ಖುಷಿ. ಅಂತಹ ಮೈನವಿರೇಳಿಸುವ ಹೊಡೆದಾಟದ ದೃಶ್ಯಗಳನ್ನು ಹೊಡಿಗಮ ಹೊಡಿಮಗ ಅನ್ನುವ ಬೇಜಾನ್ ಮಚ್ಚು ಲಾಂಗುಗಳನ್ನು ಬಳಸುವ ಸಿನಿಮಾಗಳಲ್ಲೂ ನೋಡಲಾಗುವುದಿಲ್ಲ ಬಿಡಿ. ಇನ್ನು ಅವರು ಬಳಸುವ ಭಾಷೆ.... ಛೀ ತಗೀರಿ... ಏನು ಮಜಾವಾಗಿರುತ್ತೆ, ಎಂತಹ ಕಚಗುಳಿ ಕೊಡುತ್ತೆ ಏನು ಕಥೆ. ಇವನ್ನೆಲ್ಲ ಸಿನಿಮಾಗಳಲ್ಲಿ ಕೇಳುವುದಕ್ಕಾಗಲ್ಲ, ಅಶ್ಲೀಲ ಅಂತ ಸೆನ್ಸಾರ್ ಬೋರ್ಡಿನವರು ಕತ್ತು ಹಾಕುತ್ತಾರೆ. 'ಟಾಕಿ' ಆಗಿದ್ದ ಸಿನಿಮಾ ಇದ್ದಕ್ಕಿದಂತೆ 'ಮೂಕಿ' ಆಗಿಬಿಡುತ್ತೆ. ಆದರೆ ಇಲ್ಲಿ ಹಾಗೆ ಆಗಲು ಅವಕಾಶ ಇಲ್ಲ, ಟಿವಿಗಳ ನೇರ ಪ್ರಸಾರದಲ್ಲಿ ಸೆನ್ಸಾರ್ ಆಗಲೇಬೇಕಾಗಿದ್ದ ಹಲವು ಪದಪುಂಜಗಳನ್ನು ಕೇಳಿ ಪುಳಕಿತರಾಗಬಹುದು. ಆಮೇಲೆ ಅವುಗಳನ್ನು ಅಸಂವಿಧಾನಾತ್ಮಕ ಅಂತ ಕಡತಗಳಿಂದ ಕಿತ್ತು ಹಾಕಬಹುದೇನೋ, ಊರ ಕೊಳ್ಳೆ ಹೊಡೆದ ಮೇಲೆ ದಿಡ್ಡಿ ಬಾಗಿಲು ಹಾಕಿದರಂತೆ. ಅದು ಅಲಾಯಿದ ಮಾತು. ಅವುಗಳನ್ನು ಕೇಳುವ ಸುಯೋಗ ದೊರಕಿಸಿದ ಪ್ರತಿನಿಧಿಗಳನ್ನು ಎಷ್ಟು ಕೊಂಡಾಡಿದರೂ ಸಾಲದು.

ತಮ್ಮಲ್ಲಿ ಹುದುಗಿರುವ ಅದ್ಭುತ ಕಲಾ ಪ್ರದರ್ಶನಕ್ಕೆ ಸನ್ಮಾನ್ಯ ಸದಸ್ಯರು ಪಡುವ ಶ್ರಮ ಹೇಳತೀರದು. ಬಾವಿಗೆ ಬೀಳಲು ಅನುಕೂಲವಾದ ಯಾವುದಾದರೂ ಒಂದು ಹೊಸ ಸಮಸ್ಯೆಯನ್ನು ಸಂಶೋಧಿಸಿ ಸದನದಲ್ಲಿ ಪ್ರತಿನಿತ್ಯ ಪ್ರದರ್ಶಿಸುತ್ತಿರುವುದು ಸಮಾಧಾನದ ಸಂಗತಿ. ಅರುಚಿ ಅರುಚಿ ಅವರ ಗಂಟಲುಗಳಿಗೆ ಅದೆಷ್ಟು ತ್ರಾಸ ಆಗುತ್ತದೆಯೋ ಏನೋ. ಇಂತಹ ಗೌರವಾನ್ವಿತ ಸದಸ್ಯರುಗಳಿಗೆ ಪ್ರತ್ಯೇಕವಾಗಿ ಇಎನ್‌ಟಿ ಸರ್ಜನ್ ಒದಗಿಸುವ ಕುರಿತು ಚಿಂತಿಸುವುದು ಒಳಿತು ಎಂಬುದು ನಮ್ಮ ನಮ್ರ ಸೂಚನೆ.



ಇದು ಹಾಗಿರಲಿ. ಪಂಡಿತ ಪಾಮರರಾದಿಯಾಗಿ ಎಲ್ಲ ಮತ ಬಾಂದವರಿಗೂ ಇಂತಹ ರೋಮಾಂಚಕ ನಾಟಕ ಪ್ರದರ್ಶನದಲ್ಲಿ ಪಾತ್ರ ವಹಿಸುವ ಪಕ್ಷ ಯಾವುದು? ಯಾರ ಪಾಲು ಎಷ್ಟು? ಯಾರು ನಟ ಶ್ರೇಷ್ಠರು? ಇವುಗಳನ್ನು ತಿಳಿಯಲು ಅವರು ಧರಿಸಿರುವ ವಸ್ತ್ರಗಳು ಅಡ್ಡಬರುತ್ತವೆ. ಯಾಕೆಂದರೆ ಅವರೆಲ್ಲ ಶ್ವೇತವಸ್ತ್ರಧಾರಿಗಳು. ಪಕ್ಷದ ಸಂಕೇತದ ಅಂಗವಸ್ತ್ರ ಟೋಪಿ ಇಂತಹವುಗಳನ್ನು ಕೆಲವರು ಮೊದಲಿಗೆ ಧರಿಸಿರುತ್ತಾರಾದರೂ ಗುಂಪಿನ ಗಲಭೆಯ ನಡುವೆ ಅವೆಲ್ಲೋ ಮಾಯ ಆಗಿರುತ್ತವೆ. ಪಕ್ಷದ ಅಸ್ತಿತ್ವ, ಘನತೆ, ಗಂಭೀರತೆಯ ಪ್ರಶ್ನೆ ಇದು ಆಗಿರುವುದರಿಂದ ರಾಜಕಾರಣಿಗಳ ಸಮವಸ್ತ್ರವಾದ ಬಿಳಿಯ ಬಟ್ಟೆಗಳ ಬದಲು ಒಂದೊಂದು ಪಕ್ಷವೂ ವಿವಿದ ಬಣ್ಣದ ಸಮವಸ್ತ್ರ ಧರಿಸಿದರೆ ಬೀದಿಗಿಳಿದು ಕಲಾಪ್ರದರ್ಶನ ನೀಡುವ ಪಕ್ಷದವರನ್ನು ಗುರುತಿಸಲು ಸಹಾಯವಾಗುತ್ತದಲ್ಲದೆ ಸದನಗಳೂ ವರ್ಣರಂಜಿತ ಆಗಿರುತ್ತದೆ ಎಂಬುದು ನಮ್ಮ ನಂಬಿಕೆ.

ರೋಮಾಂಚಕ ದೃಶ್ಯ!

ಟಿವಿ ಚಾನೆಲ್‌ಗಳು ನೂರೆಂಟು ಆಗಿವೆ.

ಪೈಪೋಟಿ ಮಿತಿ ಮೀರಿದೆ.

ರೋಮಾಂಚಕಾರಿ ದೃಶ್ಯಗಳನ್ನು ಸೆರೆಹಿಡಿಯಲು ಸಿಬ್ಬಂದಿಯ ಮೇಲೆ ಒತ್ತಡ, ವೀಕ್ಷಕ ಮಹಾಶಯರನ್ನು ಸೆಳೆಯಬೇಕಲ್ಲ ಅದಕ್ಕೆ.

ಇದಕ್ಕಾಗಿ ಅವರು ಹೂಡುವ ತಂತ್ರಗಳು ನಿತ್ಯನೂತನ. ಅದರ ಒಂದು ಮಾದರಿ ಇಲ್ಲಿದೆ.

ಆಗಸ್ಟ್ ಹದಿನೈದರಂದು ಪಾಟ್ನಾದಲ್ಲಿ ಒಬ್ಬನ ಪ್ರತಿಭಟನೆ. ಸರ್ಕಾರಿ ನಿಯಂತ್ರಣದ ಸುಧಾ ಡೈರಿಯಿಂದ ಬಾಕಿ ಹಣ ಬಂದಿಲ್ಲ ಎಂಬುದು ಅವನ ದೂರು.

ಕೇವಲ ಮಾತಿನ ಪ್ರತಿಭಟನೆ ಸಾಕೆ? ಬೆರಸಬೇಡವೆ ಅದಕ್ಕೆ ಉಪ್ಪು ಖಾರ? ಮಾರ್ಗ ತಿಳಿಯಿತು ಒಬ್ಬ ಮೇಧಾವಿ ಕ್ಯಾಮೆರಾ ಮೆನ್‌ಗೆ. ಆತ ಅಗ್ನಿಗೆ ಆತ್ಮಾಹುತಿ ಆದರೆ! ಎಷ್ಟೊಂದು ಸೊಗಸು! ಎಂತಹ ರೋಮಾಂಚನಕಾರಿ ದೃಶ್ಯ!

ಹೀಗೆ ಹೊಳೆದಿದ್ದೇ ತಡ. ಆ ವ್ಯಕ್ತಿಯ ಅಂಗವಸ್ತ್ರ ತೆಗೆದುಕೊಂಡ. ಸಮೀಪದಲ್ಲೇ ಇದ್ದ ಪೆಟ್ರೋಲ್ ಬಂಕ್‌ನಿಂದ ಡೀಸೆಲ್ ಖರೀದಿಸಿದ. ಅಂಗವಸ್ತ್ರವನ್ನು ಅದರಲ್ಲಿ ಅದ್ದಿದ. ಡೀಸೆಲ್ ಸ್ನಾನದ ಅಂಗವಸ್ತ್ರವನ್ನು ವ್ಯಕ್ತಿಯ ಹೆಗಲ ಮೇಲೆ ಹಾಕಿದ. ಆತ ಪ್ರತಿಭಟಿಸಿದರೂ, 'ಒಂದೇ ಒಂದು ಶಾಟ್ ತೊಗೊತೀನಿ. ಆಮೇಲೆ ನಾನೇ ತೆಗೆದು ಹಾಕ್ತೀನಿ' ಅಂತ ನಂಬಿಸಿದ. ಬೆಂಕಿ ಕಡ್ಡಿ ಗೀರಿ ಅಂಗವಸ್ತ್ರಕ್ಕೆ ಹಿಡಿದ.

ಎಂತಹ ಸಂಭ್ರಮ ಸಡಗರ ಮೂಡಿತು ಅಂತೀರಿ ಟಿವಿಯವರ ಮುಖದ ಮೇಲೇ, ಒಂದು, ಎರಡು, ಮೂರು... ಹೀಗೆ ನಾನಾ ಆಂಗಲ್‌ಗಳಿಂದ ಚಿತ್ರೀಕರಿಸಿದರು. ಬೆಂಕಿ ಇಡೀ ದೇಹವನ್ನೇ ಆಕ್ರಮಿಸಿತು. ಅವನ ಆಕ್ರಂದನ ಮುಗಿಲು ಮುಟ್ಟಿತು.

ರೋಮಾಂಚಕ ಚಿತ್ರೀಕರಣ ಮುಗಿಯಿತು!

ಆತ ಅಗ್ನಿಗೆ ಆಹುತಿಯಾಗಿದ್ದ

ಅವನ ಚಿಕ್ಕಮಗ ಇದಕ್ಕೆಲ್ಲ ಮೂಕ ಪ್ರೇಕ್ಷಕನಾಗಿ

ಇಂತಹ ಯಶಸ್ವೀ ನೈಜ ಚಿತ್ರಣ ತೆಗೆದುದಕ್ಕೆ

ಟಿವಿ ಛಾಯಾಗ್ರಾಹಕನಿಗೆ ಯಾವುದಾದರೂ ಪ್ರ... ದೊರಕಬಹುದು!

ಕ್ವಾರ್ಟರ್ ಸ್ಪ್ರೇ

ಇತ್ತೀಚೆಗೆ ಜನರಲ್ಲಿ ಆರೋಗ್ಯ ಕುರಿತ ಕಾ... ಹೆಚ್ಚಾಗಿದೆ.

ಈಗಿನ ಬೇಡಿಕೆ: ನೈಸರ್ಗಿಕ ಕೃ... ಉತ್ಪಾದಿತ ವಸ್ತುಗಳು. ಬೆಲೆ ಹೆಚ್ಚಾದರ... ನೀಡಲು ಅವರು ಸಿದ್ಧ.

ಆದರೆ ಏನು ವಿಚಿತ್ರ ಅಂತೀರಿ, ಆ... ಪ್ರದೇಶದ ಅದಿಲಾಬಾದ್‌ನ ಕೃಷಿ ಉತ್ಪನ್ನಗಳ... ಈ ಗಿರಾಕಿಗಳಂತೆ.

ಯಾಕೆ ಹೀಗೆ? ಅಲ್ಲೂ ನೈಸರ್ಗಿ... ಕೃಷಿ ಮಾಡುತ್ತಾರೆಯೇ? ಅದರ ಹೆಸರನ್ನೇ ಕೇಳಿಲ್ಲವಂ... ಅಲ್ಲಿ ಕೀಟನಾಶಕವಾಗಿ ಮದ್ಯ ಬಳಸುತ್ತಾರಂತೆ! ಇಂತ... ಪದಾರ್ಥಗಳನ್ನೇ ಬಳಸಿದರೆ ಅಮಾಲು ದುಮಾ... ಆಗಬಹುದು, ನೆರೆ ಹೊರೆಯವರಿಂದ 'ಕುಡು... ಪ್ರಶಸ್ತಿ'ಯಿಂದಲೂ ಮುಕ್ತರಾಗಬಹುದು ಎಂಬುದು ಅ... ಆಲೋಚನೆಯಂತೆ.

ಇನ್ನು ಕೆಲವರು ಇನ್ನೂ ಮುಂದುವರೆದಿರುವರ... ಹೌದು ಕೀಟನಾಶವಾಗಿ ಅದನ್ನು ಬಳಸಿದ್ದಾರೆ. ಅದ... ದ್ರವಗೊಬ್ಬರವಾಗಿ ಬಳಸಲು ಹಲವರ ಒತ್ತಾಯವಂ...

ಮದ್ಯ ವ್ಯಾಪಾರಿಗಳಿಗೆ ಇನ್ನೊಂದು ಆದಾಯ... ಮೂಲ ಸಿಕ್ಕಿದ ಹಾಗಾಯಿತು.

ಪವಾಡ ಪುರುಷರು!

ಸರ್ವಾಂತರ್ಯಾಮಿ ಅಂದರೆ ಈ ಪುಡಿ ಭಗವ... ಮಾತ್ರ ಅಲ್ಲ, ಕೆಲವು ತಜ್ಞ ವೈದ್ಯರೂ ಆಧುನಿ... ಭಗವಂತರೇ!

ಇದು ಹೇಗೆ ಬಯಲಾಯಿತು ಅಂದರೆ....

ಹಣ ಮಾಡೋಕೆ ಅಂತ ಎಲ್ಲೆಲ್ಲೂ ಮೆಡಿಕ... ಕಾಲೇಜು ಎಂಬೋ ಹಣದ ಗಿಡವನ್ನು ಕೇಳಿದೋರಿಗೆ... ಮಂಜೂರು ಮಾಡ್ತಿದ್ದರಲ್ಲ... ಅಲ್ಲಿ ಇಂತಿಷ್ಟು ತಜ್ಞ... ಇರಬೇಕು ಅನ್ನೋದನ್ನ ಕಡ್ಡಾಯ ಮಾಡಿದರು. ಪಾ... ಕಾಲೇಜು ಉಳಿಯಲಿ, ಭಾವೀ ವೈದ್ಯರಿಗೆ ತೊಂದ... ಯಾಗದಿರಲಿ ಅನ್ನೋ ಘನವಾದ ಉದ್ದೇಶದಿಂದ ಆಡಳ... ವರ್ಗದವರು ತಜ್ಞರ ಹೆಸರನ್ನು ಕಾಲೇಜಿನ... ನಮೂದಿಸುತ್ತಿದ್ದರು, ಅವರ ಹೆಸರಿನಲ್ಲಿ ಯಾರೋ ಪು... ಮೇಷ್ಟರು ಪಾಠ ಮಾಡುತ್ತಿದ್ದರು. ತಜ್ಞರಿಗೆ ತಿಂಗ... ತಿಂಗಳಿಗೆ ಮಾಮೂಲಿನೇನೋ ಕೊಡುತ್ತಿದ್ದರ... ಭಾರತೀಯ ವೈದ್ಯಕೀಯ ಮಂಡಳಿಗೆ ತನಿಖೆಗೆ ಬಂದಾ... ಬೆಕ್ಕು ಹೊರಬತ್ತಂತೆ. ಒಬ್ಬೊಬ್ಬ ತಜ್ಞನೂ ಹಲವಾ... ಕಾಲೇಜುಗಳ ಅಧ್ಯಾಪಕರ ಪಟ್ಟಿಯಲ್ಲಿ ರಾರಾಜಿ... ತ್ತಿದ್ದಾರಂತೆ!

-ಎಚ್.ಎಲ್. ಕೇಶವಮೂರ್ತಿ

ಕೋಣನ ಮುಂದೆ ಕಿನ್ನರಿ ಬಾರಿಸುತ್ತಿದ್ದೀರಲ್ಲ


ನಮ್ಮ ರಾಜ್ಯದ ಇತ್ತೀಚಿನ ರಾಜಕೀಯ ಬೆಳವಣಿಗೆಗಳನ್ನು ಗಮನಿಸಿದಾಗ ನಿರಾಸೆಯಾಗುವುದು. ಕಾರಣ ಜನಗಳಿಗೆ ಉತ್ತಮ ಆಯ್ಕೆಗಳೇ ಇಲ್ಲದಿರುವುದು. ಭರವಸೆ ಇಟ್ಟು ಆರಿಸಿದ ರಾಜಕಾರಣಿಗಳು ಮತದಾರರಿಗೆ ದ್ರೋಹ ಬಗೆದು ಹಣ, ಅಧಿಕಾರಗಳ ದುರ್ಬಳಕೆಯಲ್ಲಿ ಮುಳುಗುವುದನ್ನು ಕಂಡರೆ ಬೇಸರವೆನಿಸುತ್ತದೆ. ಹಣದಿಂದ ಅಧಿಕಾರ, ಅಧಿಕಾರದಿಂದ ಹಣ ಮಾಡುವ ರಾಜಕೀಯ ಬಿಟ್ಟರೆ ಈ ಮೂರ್ಖರಿಗೆ ಬೇರೇನೂ ಗೊತ್ತಿಲ್ಲವೇನೋ. ಜನರನ್ನು ಸರಿ ದಾರಿಯಲ್ಲಿ ಮುನ್ನಡೆಸಬೇಕಾದ ಬಹುತೇಕ ಪತ್ರಿಕೆಗಳು ಒಂದಲ್ಲ ಒಂದು ರಾಜಕೀಯ ಪಕ್ಷಗಳ ಕೈಗೊಂಬೆಯಂತೆ ವರ್ತಿಸುತ್ತಿರುವ ಇಂತಹ ಸನ್ನಿವೇಶದಲ್ಲಿ ನಿಜವಾದ ವಿರೋಧ ಪಕ್ಷವಾಗಿ ಕಾರ್ಯ ನಿರ್ವಹಿಸುತ್ತಿರುವ 'ಲಂಕೇಶ್'ಗೆ ಅಭಿನಂದನೆಗಳು. ಭರವಸೆ ಮೂಡಿಸಿರುವ ಸಿದ್ಧರಾಮಯ್ಯನವರು ಮತ್ತೊಬ್ಬ ವ್ಯಕ್ತಿ ರಾಜಕಾರಣಿಯಾಗದೆ 'ಮುತ್ಸದ್ದಿ'ಯಾಗಲಿ. ಸ್ವಾಭಿಮಾನಿ ಸಮೃದ್ಧ ಕರ್ನಾಟಕ ಕಟ್ಟುವಲ್ಲಿ 'ಲಂಕೇಶ್' ಮುಂದಾಳತ್ವ ವಹಿಸಲಿ ಎಂದು ಹಾರೈಸುತ್ತಾ...

-ಎನ್. ಗಣೇಶ್.ಹಿರಿಯೂರು

ವಿಖ್ಯಾತ ಶಹನಾಯಿ ಸಂಗೀತಗಾರ ಬಿಸ್ಮಿಲ್ಲಾ ಖಾನ್‌ರವರಿಗೆ ನಮ್ಮ ಶ್ರದ್ಧಾಂಜಲಿ. ನೂರಾರು ಅಷ್ಟನ್ನ ಚಿತ್ತಕ್ಕೆ ನೀಡಿದ ಸಂಗೀತ ಸಪ್ನದಲ್ಲಿ ಇನ್ನೂ ಅಚ್ಚಾಗಿ ಉಳಿದಿದೆ. ಮತ್ತೆ ಇಂತವರು ನಮ್ಮ ದೇಶದಲ್ಲಿ ಜನಿಸುವಂತಾಗಲಿ.

ನಿಮ್ಮ ಸೆಪ್ಟೆಂಬರ್ 6, 2006 ರ ಸಂಚಿಕೆಯ ಸಂಪಾದಕೀಯ 'ರೆಡ್ಡಿಯ ಸೀಡಿಯನ್ನು ಮೀರಿದ ಹಗರಣ' ಅರ್ಥಗರ್ಭಿತವಾಗಿ ಮೂಡಿ ಬಂದಿದೆ. ರೆಡ್ಡಿಯವರು ಬಿಡುಗಡೆ ಮಾಡಿದ ಸೀಡಿಗಳು ಸ್ಪಷ್ಟವಾಗಿಲ್ಲ ಎಂಬ ಮಾತ್ರಕ್ಕೆ ಭ್ರಷ್ಟಾಚಾರ ನಡೆದಿಲ್ಲ, ಲಂಚ ಕೊಡುವುದು, ಸ್ವೀಕರಿಸುವುದು ಆಗಿಲ್ಲ ಎಂದು ನಮ್ಮ ಮತದಾರರು ತಿಳಿದುಕೊಳ್ಳದೆ ಮುಂದಿನ ಚುನಾವಣೆಯಲ್ಲಿ ಈ ಕೋಮುವಾದಿ ಬಿಜೆಪಿ ಮತ್ತು ಈ ಜೆಡಿಎಸ್ ಕುಟುಂಬದ ರಾಜಕೀಯಕ್ಕೆ ಸೋಲನ್ನು ಉಣಿಸಬೇಕಾಗಿದೆ.

-ಡಿ.ಎಲ್. ನಾಗರಾಜ್, ಹರಪನಹಳ್ಳಿ



ದೇವೇಗೌಡರ ಕುಟುಂಬದ ಆಡಂಬರದ ಬಗ್ಗೆ ಪ್ರತಿವಾರ ಓದಿ ಓದಿ ಬೇಸರವಾಗಿದೆ. ಅವರ ಶೋಕಿ ದರ್ಬಾರ್ ಹೇಗಾದರೂ ಇರಲಿ ನೀವು ಎಷ್ಟೇ ಬರೆದರೂ, ಉಗಿದರೂ 'ಕೋಣನ ಮುಂದೆ ಕಿನ್ನರಿ ಬಾರಿಸಿದ ಹಾಗೆ'. 55 ಸಾವಿರ ರೂ.ಗಳ ಸೀರೆಗಳನ್ನು ಕೊಳ್ಳುವ ಆ ಶ್ರೀಮತಿಯರಿಗೆ ಒಂದೇ ಸೀರೆಯ ಬೆಲೆಯಲ್ಲಿ ಎಷ್ಟು ಬಡವರ ಮದುವೆಗಳನ್ನು ಮಾಡಬಹುದು, ಎಷ್ಟು ನಿರ್ಗತಿಕರಿಗೆ ಸಹಾಯ ಆಗಬಹುದು ಎನ್ನುವ ವಿಚಾರವಾದರೂ (ಬಂದಿದ್ದರೆ) ಬಂದರೆ ಬಹಳ ಚೆನ್ನಾಗಿತ್ತು.

-ಬಿ.ಎಸ್. ಇಮ್ಮಾನುವೇಲ್, ಮಸರಕಲ

ಗೌಡರ ಗೋಲ್‌ಮಾಲ್ ವರದಿಗಳನ್ನು ಇಲ್ಲಿವರೆಗೂ ಯಾವ ಪತ್ರಿಕೆಗಳೂ ವಿವರವಾಗಿ ವರದಿ ಮಾಡಿಲ್ಲ, ಇದು ನಿಮ್ಮಿಂದ ಮಾತ್ರ ಸಾಧ್ಯವಾಗಿದೆ.

'ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು' ಇದು ಕಮ್ಯುನಿಸ್ಟ್ ಪಕ್ಷದ ಸಿದ್ಧಾಂತ. ಮಣ್ಣಿನ ಮಗನಾದ ಗೌಡರು ಮಣ್ಣನ್ನು ಮಾರಿ (ಗಣಿಗಾರಿಕೆ) ಮಣ್ಣಿನಿಂದ ಬಂದ ದುಡ್ಡನ್ನು ಸೊಸೆಯಂದಿರು, ಮಗಳು, ಮಗನಿಗೆ ಎಲ್ಲರಿಗೂ ಸಮಪಾಲು ಹಂಚಿದ್ದಾರೆ. ಇದೇ ಗೌಡರ ಸಿದ್ಧಾಂತ, ಮತ್ತು ಸಾಮಾಜಿಕ ನ್ಯಾಯ.

ಗೌಡರು ನೂರು ಕಾಲ ಬಾಳಲಿ!

ಪತ್ರಿಕಾ ವರದಿಗಾರರು ಸಿಬಿಐಗಿಂತಲೂ ಹೆಚ್ಚಿನ ತನಿಖೆ ನಡೆಸಿದ್ದಾರೆ.

-ಎಂ. ಸದಾಶಿವ, ತುಮಕೂರು


ಕಳೆದ ವಾರದ ಸಂಪಾದಕೀಯದಲ್ಲಿ 'ಬಿಸಿ... ನೀರಿನೊಳಗಿನ ಕಪ್ಪೆ' ಓದಿದಾಗ ಭೂಮಿಯ ಮೇಲೆ... ಆಗುತ್ತಿರುವ ಪ್ರಕೃತಿ ವಿಕೋಪಗಳು, ತಾಪಮಾನದಲ್ಲಾಗು... ತ್ತಿರುವ ಏರು-ಪೇರುಗಳನ್ನು ನೋಡಿದಾಗ ಅಲ್ ಗೋರ್‌ರವರ ಚಿಂತನೆಗೆ ಅರ್ಥವಿದೆ ಅನ್ನಿಸುತದೆ.

ಜಿ. ಪುಟ್ಟಸ್ವಾಮಿಗೌಡರ... ನಿಧನದ ಸುದ್ದಿ ನೋಡಿ ನಮ್ಮ... ಬಿ. ಚಂದ್ರೇಗೌಡರು 'ಕಟ್ಟೆಪುರಾಣ'... ದಲ್ಲಿ ಪ್ರಸ್ತಾಪಿಸಬಹುದು ಅಂದು... ಕೊಂಡಿದ್ದೆ. ಅದೇ ರೀತಿ ಈ ವಾರದ... 'ಬಯಲು ಸೀಮೆಯ ಕಟ್ಟೆಪುರಾಣ'... ದಲ್ಲಿ ಪ್ರಸ್ತಾಪಿಸಿದ್ದಾರೆ. ಪುಟ್ಟಸ್ವಾಮಿಗೌಡರ ರಾಜಕೀಯ... ವಿರೋಧಿ ದೇವೇಗೌಡರಿಗೆ ಹೋಲಿಸಿದರೆ ಯಾವುದೇ... ಭ್ರಷ್ಟಾಚಾರ-ಹಗರಣಗಳಿಂದ ಮುಕ್ತವಾಗಿ ದ್ದರು. ಅವರ... ನಿರ್ಗಮನದಿಂದ ಹಾಸನ ಕಾಂಗ್ರೆಸ್ ಅನಾಥವಾಗಿರು... ವುದು ಸತ್ಯ.

ನಮ್ಮ 'ಲಂಕೇಶ್' ವಾರದಿಂದ ವಾರಕ್ಕೆ... ಪರಿಪಕ್ವವಾಗುತ್ತಿದೆ. ದೇವೇಗೌಡರ ಕುಟುಂಬದ ಅಪಾರ... ಅಕ್ರಮ ಹಣ-ಆಸ್ತಿ ಗಳಿಕೆಯ ಬಗ್ಗೆ ಕಳೆದ ನಾಲ್ಕು... ವಾರದಿಂದ ನಾಡಿನ ಜನತೆ ಎದುರು ತೆರದಿಟ್ಟಿರುವುದೇ... ಇದಕ್ಕೆ ಸಾಕ್ಷಿ. ಇಂದು ರೆಡ್ಡಿ ಹೇಳಿರುವ... ಗೌಡರ ಕುಟುಂಬ ಸದಸ್ಯರ ಮೇಲಿನ ಆರೋಪಗಳು... ಬಹುತೇಕ ನಮ್ಮ 'ಲಂಕೇಶ್'ನಲ್ಲಿ ವರದಿಯಾಗಿರುವಂತ... ವುಗಳು.

-ಡಿ.ಎಲ್. ಮಂಜು, ಬೆಂಗಳೂರು

ಭಾವಪೂರ್ಣ ಲಯಬದ್ಧ ಭಾಷೆಯಲ್ಲಿ ಮಾನವಚಿತ್ತದ ಮೂರ್ತವೂ ಕಲಾತ್ಮಕವೂ ಆದ ಅಭಿವ್ಯಕ್ತಿ ಕಾವ್ಯ. -ವಾಟ್ಸ್ ಡಂಟನ್



ಬೀಚಿನಲ್ಲಿ ಕುದುರೆ ಸವಾರಿ

ಕುದುರೆ ಸವಾರಿ ಎಂಬುದು ಬೇಗ ಕಲಿಯುವಂತಹ ವಿದ್ಯೆ ಅಲ್ಲ. ಆದರೂ ಕೇವಲ ಹತ್ತು ದಿನಗಳಲ್ಲಿ ಸಲೀಸಾಗಿ ಕುದುರೆ ಸವಾರಿ ಮಾಡುವುದನ್ನು ಕಲಿತೆ. ಕುದುರೆ ಸವಾರಿ ಮಾಡುವುದು ಅತ್ಯಂತ ಸುಂದರ ಅನುಭವ. ಇನ್ನೊಂದು ವಿಚಿತ್ರ ಏನು ಗೊತ್ತ? ಕುದುರೆ ಸವಾರಿಯನ್ನು ನಮ್ಮದೇ ಶೈಲಿಯಲ್ಲಿ ಮಾಡಿದರೆ ಅದಕ್ಕೊಂದು ಚೆಂದ ಇರುತ್ತದೆ.

'ಯಾರಿವನು?' ಚಿತ್ರೀಕರಣ ಸಂದರ್ಭದಲ್ಲಿ ನಡೆದ ದುರ್ಘಟನೆ ಅನಗತ್ಯವಾಗಿ ಕನ್ನಡಿಗರು ಮತ್ತು ತಮಿಳರ ನಡುವೆ ದುಸ್ವಪ್ನ ಸೃಷ್ಟಿಸಿತಲ್ಲದೆ ನಮ್ಮ ಬದುಕಿನಲ್ಲೂ ಹಲವಾರು ಬದಲಾವಣೆಗಳಿಗೆ ಕಾರಣವಾಯಿತು. ಕಳೆದ ವಾರ ಹೇಳಿದಂತೆ, ಅಲ್ಲಿನ ಹಲವಾರು ತಮಿಳರು ನಾವು ಬೆಂಗಳೂರಿಗೆ ವಾಸ್ತವ್ಯವನ್ನು ಬದಲಾಯಿಸದಂತೆ ಮನವಿ ಮಾಡಿಕೊಂಡರೂ ನಾವು ಬೆಂಗಳೂರಿಗೆ ಬಂದು ನೆಲೆಸಬೇಕಾಯಿತು. ಏಕೆಂದರೆ ಆ ಪ್ರಕರಣದ ಹಿಂದೆ ಹಲವು ಸ್ವಾರ್ಥಿಗಳ ಕೈವಾಡವಿದ್ದು, ಅದರಿಂದಾಗಿ ಜನಸಾಮಾನ್ಯರಿಗೆ ತೊಂದರೆ ಆಗಬಾರದೆಂಬುದೇ ಅಪ್ಪಾಜಿಯವರ ಕಾಳಜಿಯಾಗಿತ್ತು.

ಆ ಪ್ರಕರಣ ನನ್ನ ಮೇಲೂ ದೊಡ್ಡ ರೀತಿಯ ಪ್ರಭಾವ ಬೀರಿತು. ಕೆಲವು ಜನ ತಮ್ಮ ಸ್ವಾರ್ಥಕ್ಕಾಗಿ ಹೇಗೆ ಇಡೀ ಸಮಾಜದ ಆರೋಗ್ಯವನ್ನು ಕೆಡಿಸುತ್ತಾರೆ ಎಂದು ನನಗೆ ಅರಿವಾಗಿದ್ದೇ ಆಗ. ಅಲ್ಲಿಯವರೆಗೆ ಗೆಳೆಯರೊಂದಿಗೆ ಮಜಾ ಮಾಡಿದ್ದ ನನಗೆ ಈ ಭಾಷೆ, ರಾಜ್ಯ, ಧರ್ಮದ ಹೆಸರಿನಲ್ಲಿ ಏನೇನಾಗುತ್ತದೆ ಎಂಬುದರ ಬಗ್ಗೆ ನನ್ನಲ್ಲಿ ಜಾಗೃತಿ ಮೂಡಿದ್ದೇ ಆ ಪ್ರಕರಣದ ದೆಸೆಯಿಂದ.

ಎನಿವೆ, ಆ ಪ್ರಕರಣದಿಂದಾಗಿ ನಾವು ಆರು ತಿಂಗಳ ಕಾಲ ಕಾಲೇಜಿಗೆ ಹೋಗದೆ ಇರುವಂತಾಯಿತು. ಆ ಕಲುಷಿತ ವಾತಾವರಣದಲ್ಲಿ ನಾವು ಕಾಲೇಜಿಗೆ ಹೋಗುವುದು ಸೂಕ್ತವಲ್ಲ ಎಂದು ಅಪ್ಪಾಜಿ ನಿರ್ಧರಿಸಿದ್ದರಿಂದ ಪರೀಕ್ಷೆಗಳು ಹತ್ತಿರ ಬಂದರೂ ಸುಮ್ಮನಿರಬೇಕಾಗಿತ್ತು.

ಕೊನೆಗೊಂದು ದಿನ ಕಾಲೇಜಿಗೆ ಹಾಜರಾದಾಗ ನನಗೆ ರಕ್ಷಣೆ ನೀಡಲು ಪೊಲೀಸರೂ ಕಾಲೇಜಿಗೆ ಬರಲಾರಂಭಿಸಿದರು. ಇದು ನನಗೆ ಮುಜುಗರ ನೀಡುತ್ತಿತ್ತು. ಏಕೆಂದರೆ, ನನ್ನ ಗೆಳೆಯರನ್ನು ಮಾತನಾಡಿಸಲೂ ಪೊಲೀಸರು ಬಿಡುತ್ತಿರಲಿಲ್ಲ. ಯಾವಾಗಲೂ ಗೆಳೆಯ-ಗೆಳತಿಯರೊಂದಿಗೆ ಕಾಲೇಜು ಕ್ಯಾಂಪಸ್‌ನಲ್ಲಿ ಸುತ್ತಾಡುತ್ತಿದ್ದ ನಾನು ಪೊಲೀಸರ ಕಾವಲಿನಲ್ಲಿ ಕ್ಲಾಸಿಗೆ ಬರಬೇಕಾಗಿದ್ದು ದೊಡ್ಡ ಅಪಪರ್ಯಾಸದಂತಿತ್ತು. ಆದ್ದರಿಂದ ನನಗೆ ಪೊಲೀಸ್ ಪ್ರೊಟೆಕ್ಷನ್ ಬೇಡವೇ ಬೇಡ ಎಂದು ಹಠ ಹಿಡಿದರೂ ಅವರು ಕೇಳುತ್ತಿರಲಿಲ್ಲ, ಇದಕ್ಕೆ ಕಾರಣ: ಯಾವುದೇ ಕಾರಣಕ್ಕೂ ಅಪ್ಪಾಜಿ ಕುಟುಂಬದ ಯಾವುದೇ ಸದಸ್ಯರನ್ನು ಯಾರೂ ಮುಟ್ಟದಂತೆ ಎಚ್ಚರಿಕೆ ವಹಿಸಬೇಕೆಂದು ಅಂದಿನ ಮುಖ್ಯಮಂತ್ರಿ ಎಂ.ಜಿ.ಆರ್ ಅವರು ನೀಡಿದ್ದ ಕಟ್ಟಪ್ಪಣೆ.

ಕೊನೆಗೆ ಕಾಲೇಜಿನ ವಿದ್ಯಾರ್ಥಿಗಳು ಮತ್ತು ಆಡಳಿತ ಮಂಡಳಿಯವರು ನನಗೆ ಏನೂ ಆಗದಂತೆ ನೋಡಿಕೊಳ್ಳುತ್ತೇವೆ ಎಂದು ಭರವಸೆ ನೀಡಿದ್ದರಿಂದ ಪೊಲೀಸರು ನನ್ನೊಂದಿಗೆ ಕಾಲೇಜಿಗೆ ಬರುವುದನ್ನು ನಿಲ್ಲಿಸಿದರು. ಅಷ್ಟೇ ಅಲ್ಲ, ನನ್ನ ಆರು ತಿಂಗಳು ಕ್ಲಾಸ್ ತಪ್ಪಿಹೋಗಿದ್ದರೂ ಆಡಳಿತ ಮಂಡಳಿಯವರು ನನಗೆ ಹಾಜರಾತಿಯನ್ನು ನೀಡಿದರು, ಸ್ಪೆಷಲ್ ಕ್ಲಾಸುಗಳನ್ನು ತೆಗೆದುಕೊಂಡು ಎಕ್ಸ್‌ಟ್ರಾ ಟ್ಯೂಷನ್ ನೀಡಿದರು. ನಾನು ಆರು ತಿಂಗಳಲ್ಲಿ ಏನೇನು ಪಾಠ ಮಿಸ್ ಮಾಡಿಕೊಂಡಿದ್ದೆನೊ ಅದೆಲ್ಲವನ್ನು ಭರಿಸಲು ಪ್ರಯತ್ನ ಪಟ್ಟರು. ಈಗ ಅವರೆಲ್ಲರ ಪ್ರಯತ್ನಗಳನ್ನು ನೆನೆಸಿಕೊಂಡಾಗ ನನ್ನ ಹೃದಯ ಬೆಚ್ಚಗಾಗುತ್ತದೆ. ನನಗೆ ಆ ಸಂದರ್ಭದಲ್ಲಿ ಸಹಕರಿಸಿದ ಎಲ್ಲ ಗೆಳೆಯರಿಗೂ, ಅಧ್ಯಾಪಕರಿಗೂ ಮತ್ತೊಮ್ಮೆ ಈ ಪುಟ್ಟಸ್ವಾಮಿಯ ಪ್ರೀತಿಯ ನೆನೆಕೆಗಳು.

ಆದರೆ ಆರು ತಿಂಗಳ ಕಾಲ ಕಾಲೇಜು ಮಿಸ್ ಮಾಡಿಕೊಂಡಿದ್ದ ನಾನು ಆ ಸಮಯದಲ್ಲಿ ಏನು ಮಾಡಿದೆ ಗೊತ್ತಾ? ಕುದುರೆ ಸವಾರಿ ಮತ್ತು ಸ್ಟಂಟ್ಸ್ ಕಲಿಯಲು ಶುರು ಮಾಡಿದೆ. ಬೆಳಗಿನ ಹೊತ್ತು ಮದರಾಸಿನ ಮರಿನಾ ಬೀಚ್‌ನಲ್ಲಿ ಕುದುರೆ ಸವಾರಿ ಕಲಿಯಲು ಹೋಗುತ್ತಿದ್ದೆ. ಕುದುರೆ ಸವಾರಿ ಎಂಬುದು ಬೇಗ ಕಲಿಯುವಂತಹ ವಿದ್ಯೆ ಅಲ್ಲ. ಆದರೂ ಕೇವಲ ಹತ್ತು ದಿನಗಳಲ್ಲಿ ಸಲೀಸಾಗಿ ಕುದುರೆ ಸವಾರಿ ಮಾಡುವುದನ್ನು ಕಲಿತೆ. ಕುದುರೆ ಸವಾರಿ ಮಾಡುವುದು ಅತ್ಯಂತ ಸುಂದರ ಅನುಭವ. ಇನ್ನೊಂದು ವಿಚಿತ್ರ ಏನು ಗೊತ್ತ? ಕುದುರೆ ಸವಾರಿಯನ್ನು ನಮ್ಮದೇ ಶೈಲಿಯಲ್ಲಿ ಮಾಡಿದರೆ ಅದಕ್ಕೊಂದು ಚೆಂದ ಇರುತ್ತದೆ. ಹೀಗಾಗಿ ನಾನು ಕುದುರೆ ಸವಾರಿ ಕಲಿತರೂ ನನ್ನದೇ ಶೈಲಿಯನ್ನು ರೂಪಿಸಿಕೊಳ್ಳಲು ಸ್ವಲ್ಪ ಸಮಯ ತೆಗೆದುಕೊಂಡೆ.

ಬೆಳಗ್ಗಿನ ಜಾವ ಆರು ಗಂಟೆಗೆ ಮರಿನಾ ಬೀಚ್‌ನಲ್ಲಿ ಮರಳು ತಣ್ಣಗೆ ಹಾಸಿದಂತಿರುತ್ತಿತ್ತು. ಬೀಚನ್ನೇ ಯಾಕೆ ಕುದುರೆ ಸವಾರಿಗೆ ಬಳಸಿಕೊಂಡೆ ಎಂಬುದು ಇಲ್ಲಿ ಮುಖ್ಯ. ಮರಳಿನಲ್ಲಿ ಕುದುರೆ ಸವಾರಿ ಮಾಡಿದರೆ ಎಲ್ಲಿ ಬೇಕಾದರೂ ಮಾಡಬಹುದು ಎನ್ನುತ್ತಾರೆ. ಹೀಗಾಗಿ ಬೀಚ್‌ನಲ್ಲಿ ಕಲಿತ ನಂತರ ಕಚ್ಚಾ ರಸ್ತೆಯಲ್ಲಿ, ಟಾರ್ ರೋಡಿನಲ್ಲಿ, ಮಣ್ಣಿನ ರಸ್ತೆಯಲ್ಲಿ .... ಎಲ್ಲ ಕಡೆ ಕುದುರೆ ಸವಾರಿ ಪ್ರಾಕ್ಟಿಸ್ ಮಾಡುತ್ತಿದ್ದೆ.

ಪ್ರತಿದಿನ ಕುದುರೆ ಸವಾರಿ ಮುಗಿಸಿ ಮನೆಗೆ ಹೋಗುವ ಮುನ್ನ ಮುಖ್ಯರಸ್ತೆಯಲ್ಲಿದ್ದ ವುಡ್‌ಲ್ಯಾಂಡ್ಸ್ ಹೋಟೆಲ್ಲಿನಲ್ಲಿ ಕಾಫಿ ಕುಡಿಯಲು ಹೋಗುತ್ತಿದ್ದೆ. ಅಷ್ಟೊತ್ತಿಗೆಲ್ಲ ನನ್ನ ಗೆಳೆಯರು ಅಲ್ಲಿ ಸೇರಿರುತ್ತಿದ್ದರು. ಗೆಳೆಯರೊಂದಿಗೆ ಸ್ವಲ್ಪ ಹೊತ್ತು ಹರಟೆ ಹೊಡೆದು, ಕಾಫಿ ಕುಡಿದು ಮನೆಗೆ ಓಡುತ್ತಿದ್ದೆ. ಏಕೆಂದರೆ ಕುದುರೆ ಸವಾರಿ ಮುಗಿಸಿದ ನಂತರ ಮನೆಯಲ್ಲಿ ಸ್ಟಂಟ್‌ಗಳನ್ನು ಅಭ್ಯಾಸ ಮಾಡುತ್ತಿದ್ದೆ.

ಸ್ವಾಮಿ ಮಾಸ್ಟರ್ ನಮ್ಮ ಮನೆಗೆ ಬಂದು ನನಗೆ ಸ್ಟಂಟ್ಸ್ ಕಲಿಸಿಕೊಡುತ್ತಿದ್ದರು. ಮದ್ರಾಸಿನಲ್ಲಿ ಅವರಿಗೆ ಬಹಳ ದೊಡ್ಡ ಹೆಸರಿದೆ. ಬಹುತೇಕ ಎಲ್ಲಾ ಸಿನಿಮಾ ತಾರೆಯರಿಗೆ ಸ್ಟಂಟ್ಸ್ ಕಲಿಸಿದ್ದೇ ಅವರು. ಅವರ ಮಾರ್ಗದರ್ಶನದಲ್ಲಿ ವ್ಯಾಯಾಮ ಮಾಡುವುದು, ದೇಹದಾರ್ಢ್ಯವನ್ನು ಕಾಪಾಡುವುದು, ಕತ್ತಿವರಸೆ, ಬಾಕ್ಸಿಂಗ್.... ಇವೆಲ್ಲವನ್ನೂ ಕಲಿತುಕೊಂಡೆ.

ಆದರೆ ಈ ಸ್ಟಂಟ್‌ಗಳ ಬಗ್ಗೆ ಅಥವಾ ಕುದುರೆ ಸವಾರಿ ಬಗ್ಗೆ ನಾನು ಯಾವತ್ತೂ ಅಪ್ಪಾಜಿ ಜೊತೆ ಡಿಸ್ಕಸ್ ಮಾಡಲೇ ಇಲ್ಲ, ಇದಕ್ಕೆ ಕಾರಣ ಅಪ್ಪಾಜಿ ಅವಾಗ ಅಷ್ಟೊಂದು ಬಿಜಿಯಾಗಿದ್ದರು. ಯಾವತ್ತಾದರೂ ನಾವು ಒಟ್ಟು ಸೇರಿದಾಗ ಜನರಲ್‌ಆಗಿ ಈ ವಿಷಯ ಮಾತನಾಡುತ್ತಿದ್ದನೇ ಹೊರತು ಇದರ ಬಗ್ಗೆ ಅವರು ಹೆಚ್ಚು ತಲೆಕೆಡಿಸಿಕೊಂಡಿರಲಿಲ್ಲ.

ಆರು ತಿಂಗಳ ಕಾಲ ಸುಮ್ಮನೆ ಮನೆಯಲ್ಲಿ ಕುಳಿತುಕೊಳ್ಳುವ ಬದಲು ವ್ಯಾಯಾಮ ಆಗಲಿ ಎಂಬ ಉದ್ದೇಶದಿಂದ ನನ್ನನ್ನು ಕುದುರೆ ಸವಾರಿ ಮತ್ತು ಸ್ಟಂಟ್ಸ್ ಕಲಿಯಲು ಸೇರಿಸಿದ್ದರು. ನಾನು ನಿಧಾನವಾಗಿ ಇವುಗಳ ಬಗ್ಗೆ ಉತ್ಸಾಹ ಮತ್ತು ಆಸಕ್ತಿಯನ್ನು ಬೆಳೆಸಿಕೊಳ್ಳುತ್ತಾ ಹೋದೆ. ಅದು ನನ್ನ ಜಾಯಮಾನ ಕೂಡ ಹೌದು. ಹೊಸದನ್ನು ಕಲಿಯುವುದೆಂದರೆ ನನಗೆ ಒಂಥರಾ ಖುಷಿ.


ಹೀಗೆ ಕುದುರೆ ಸವಾರಿ ಮತ್ತು ಸ್ಟಂಟ್ಸ್ ಕಲಿತ ನಾನು ಮತ್ತೆ ಕಾಲೇಜಿಗೆ ಹಿಂದಿರುಗಿ, ಪರೀಕ್ಷೆಗಳನ್ನು ಎದುರಿಸಬೇಕಾಯಿತು. ಅರ್ಧ ವರ್ಷ ಕಾಲೇಜಿಗೆ ಹೋಗಲಿಕ್ಕಾಗದಿದ್ದ ನಾನು ಒಂದು ಸಬ್ಜೆಕ್ಟ್ ಹೊರತುಪಡಿಸಿ ಉಳಿದೆಲ್ಲಾ ವಿಷಯಗಳಲ್ಲಿ ಪಾಸಾದೆ....

ಈಗ ಅಂದಿನ ದಿನಗಳನ್ನು ಫ್ಲಾಶ್‌ಬ್ಯಾಕ್‌ನಲ್ಲಿ ನೋಡಿದರೆ .....ಆರು ತಿಂಗಳ ಕಾಲ ಕಾಲೇಜಿಗೆ ಗೈರುಹಾಜರಾದದ್ದು, ತಮಿಳು-ಕನ್ನಡಿಗರ ನಡುವಿನ ವಿವಾದ, ಮನೆಯಲ್ಲಿನ ಟೆನ್ಷನ್...... ಇವೆಲ್ಲವೂ ನನ್ನ ವಿದ್ಯಾಭ್ಯಾಸದ ಮೇಲೆ ಸ್ವಲ್ಪ ದುಷ್ಪರಿಣಾಮ ಬೀರಿದ್ದವು ಅನ್ನಿಸುತ್ತೆ. ಇರಲಿ.... ನನ್ನ ಪರೀಕ್ಷೆಯ ಫಲಿತಾಂಶ ಹೊರಬಿದ್ದ ಸಂದರ್ಭದಲ್ಲೆ ನನ್ನನ್ನು ಫಿಲ್ಮ್ ಇನ್ಸ್‌ಸ್ಟಿಟ್ಯೂಟಿಗೆ ಸೇರಿಸಲು ಮನೆಯವರು ನಿರ್ಧರಿಸಿದರು.....

(ಮುಂದುವರೆಯುವುದು)

ನಿರೂಪಣೆ: ಸದಾಶಿವ ಶೆಣೈ

18



ಹ್ಯಾಟ್ರಿಕ್ ಹೀರೋನ ಹಾರ್ಟ್ ಬೀಟ್!

ಶಾರ್ಟ್ ಕಟ್



ಯುವಿ ಕಾಟ್ ಬೈ ಕಿಮ್

ಅಯ್ಯಯ್ಯಯ್ಯ.... ಎಷ್ಟು ಖುಷಿ ಆಗ್ತಿದೆ ನೋಡಿ ಈ ಪೋರಿ. ಒಮ್ಮೆ ಅಲ್ಲ, ಮತ್ತೊಮ್ಮೆ ನೋಡಿ... ಎಷ್ಟು ಹೊಮ್ಮುತಿದೆ ಚೇತನದ ಬುಗ್ಗೆ...

ಶಮಿತಾ ಶೆಟ್ಟಿಯ ವಿರುದ್ಧ ಹೋರಾಡಿ, ಯುವರಾಜ್ ಸಿಂಗ್‌ನನ್ನು ಕ್ಯಾಚ್ ಮಾಡಿಯೇ ಬಿಟ್ಟಿದೆ ಈ ಬಾಲಿವುಡ್ ಬಾಲೆ ಕಿಮ್ ಶರ್ಮಾ... ಕಿಮ್, ಯುವಿ ಎಂಗೇಜ್‌ಮೆಂಟ್ ಮಾಡಿಕೊಂಡ ಸುದ್ದಿ ಬಂದಿದೆ. ಯುವಿ ತಾಯಿಗೆ ಇದು ಇಷ್ಟವಿರಲಿಲ್ಲವಂತೆ. ಸದ್ಯಕ್ಕೆ ಕಿಮ್ ಬೇಬಿ ತನ್ನ ಕೆರಿಯರ್(?) ಬಗ್ಗೆ ಹೆಚ್ಚು ಗಮನ ನೀಡಿ, ಆಮೇಲೆ ಮದುವೆ ಆಗುತ್ತಾಳಂತೆ!

ಅದೆಲ್ಲ ಬಿಡಿ, ಮತ್ತೊಮ್ಮೆ ಅವಳ ಮುಖ ನೋಡಿ! ಎಷ್ಟು ಉತ್ಸಾಹ. ಅದೆಷ್ಟು ಆನಂದ!

'ಸೈನಿಕ'ನಿಗೆ ಗಾಯ......


ಮಹೇಶ್ ಸುಖಧರೆ ಅಪಘಾತದ ನೋವಿನಿಂದ ಚೇತರಿಸಿಕೊಳ್ಳುತ್ತಿದ್ದಾರೆ. ಕಳೆದ ತಿಂಗಳು ತಮ್ಮ ಕುಟುಂಬದವರೊಂದಿಗೆ ಕಾರಿನಲ್ಲಿ ಪ್ರಯಾಣಿಸುತ್ತಿದ್ದಾಗ ನೆಲಮಂಗಲ ಬಳಿ ಅಪಘಾತವಾಗಿ ಸುಖಧರೆ ಗಾಯಗೊಂಡಿದ್ದರು.



'ಸಂಭ್ರಮ', 'ಸೈನಿಕ'ಗಳಂತಹ ಹಿಟ್ ಚಿತ್ರ ನೀಡಿದ ಸುಖಧರೆ, 'ಸಾರ್ವಭೌಮ'ನ ಸೋಲಿನ ನಂತರ 'ಜಿದ್ದು' ಸೋಲಿನಿಂದ ಸ್ವಲ್ಪ ನಿರಾಶರಾಗಿದ್ದರು.

ಸುಖಧರೆ ಬೇಗ ಗುಣಮುಖರಾಗಿ, ಮೊದಲಿನ ಸಂಭ್ರಮದಲ್ಲಿ ಸೈನಿಕನಂತೆ ಓಡಾಡುತ್ತಿರಲಿ.

ಶಾರ್ಟ್‌ಕಟ್‌ನಲ್ಲಿ ಶಾರುಖ್!



ಹೌದು 'ಶಾರ್ಟ್‌ಕಟ್' ಈಗ ಶಾರುಖ್‌ಖಾನ್‌ಗೆ ಇಷ್ಟವಂತೆ.

ವಿಷಯ ಇಷ್ಟೇ. ಶಿಮಿಲ್ ಅಮೀನ್ ನಿರ್ದೇಶನದ 'ಚಕ್ ದೇ' ಚಿತ್ರದಲ್ಲಿ ಶಾರುಖ್ ಖಾನ್ ಶಾರ್ಟ್ ಹೇರ್‌ನಲ್ಲಿ ಕಾಣಿಸಿಕೊಳ್ಳುತ್ತಿದ್ದಾನೆ.

ಸಕ್ಸಸ್‌ಗಾಗಿ ಶಾರ್ಟ್‌ರೂಟ್?

ಸಿರಿವಂತ, ಏಕದಂತ: ಮೊದ್ಲು ಯಾವುದಂತ?



ವಿಷ್ಣುವರ್ಧನ್ ಮೊದಲು 'ಸಿರಿವಂತ'ರಾಗುತ್ತಾರೋ? ಇಲ್ಲಾ ರವಿಚಂದ್ರನ್ 'ಏಕದಂತ'ರಾಗುತ್ತಾರೋ?

ರಾಕ್‌ಲೈನ್ ನಿರ್ಮಾಣದ 'ಸಿರಿವಂತ'ದ ಶೂಟಿಂಗ್ ಬಿರುಸಿನಿಂದ ಬಲಿಷ್ಠವಾಗಿದೆ ಎಂಬ ಸುದ್ದಿ ಬಂದಿದೆ.

ಗಣ್ಣು ಗೋಪಿ, ಗೀತು ಎಂಬುವವರು ನಿರ್ಮಿಸುತ್ತಿರುವ 'ಏಕದಂತ' ಎಲ್ಲಿ ಬಂತಂತ ಅವರಿಗೇ ಗೊತ್ತಿಲ್ಲವಂತೆ...

ಒಟ್ನಲ್ಲಿ ದಂತಭಗ್ನವಾಗದಿರಲಿ ಅಷ್ಟೇ.

ಕಾವ್ಯ ನಮ್ಮ ಬದುಕಿನಲ್ಲಿ ಏನನ್ನೇ ಸ್ಪರ್ಶಿಸಲಿ, ನಮ್ಮ ರಾಗಭಾವಗಳೊಡನೆ ಸಂಬಂಧ ಕಲ್ಪಿಸುವಂಥದ್ದು. -ವಿಲಿಯಂ ಹೆನ್ರಿ ಹಡ್ಸನ್

'ನಾಯಿ ನೆರಳು'ಗೆ 'ತಾಯಿ' ಕೊಕ್?



ಈ ಬಾರಿಯ ಅತ್ಯುತ್ತಮ ಕನ್ನಡ ಸಿನಿಮಾ ಪ್ರಶಸ್ತಿ ಯಾರಿಗೆ ಬರಬಹುದು? ಎಂಬ ಪ್ರಶ್ನೆಗೆ ತುಂಬಾ ಜನ ಗಿರೀಶ್ ಕಾಸರವಳ್ಳಿಯವರ, ಎಸ್.ಎಲ್.ಭೈರಪ್ಪ ಕಾದಂಬರಿ ಆಧಾರಿತ 'ನಾಯಿ ನೆರಳು' ಎಂದು ತಕ್ಷಣವೇ ಹೇಳಿಬಿಡಬಹುದು.

ಆದರೆ, ದೆಹಲಿಯಿಂದ ಬಂದಿರುವ ಮಾಹಿತಿಯ ಪ್ರಕಾರ, ಕಾಸರವಳ್ಳಿಯವರಿಗೆ ಈ ಬಾರಿಯ ಸ್ವರ್ಣ ಕಮಲವಿರಲಿ, ಅತ್ಯುತ್ತಮ ಕನ್ನಡ ಚಿತ್ರ ಪ್ರಶಸ್ತಿಯೂ ಬಂದಿಲ್ಲವಂತೆ. ಅದಕ್ಕಿಂತಲೂ ಅಚ್ಚರಿಯ ವಿಷಯ ಯಾವುದೆಂದರೆ, ಈ ವರ್ಷದ ಅತ್ಯುತ್ತಮ ಕನ್ನಡ ಚಿತ್ರ ಎಂಬ ಪ್ರೈಜ್ ಸಿಕ್ಕಿರುವುದು ಬರಗೂರು ರಾಮಚಂದ್ರಪ್ಪ ನಿರ್ದೇಶಿಸಿರುವ, ಪ್ರಮಿಳಾ ಜೋಷಾಯಿ ನಟಿಸಿ-ನಿರ್ಮಿಸಿರುವ 'ತಾಯಿ' ಚಿತ್ರಕ್ಕೆ!

ಅದಷ್ಟೇ ಅಲ್ಲ, ಬರಗೂರರಿಗೆ ಅತ್ಯುತ್ತಮ ಗೀತೆ ರಚನಾಕರ ಎಂಬ ಪ್ರಶಸ್ತಿಯೂ ಬಂದಿದೆಯಂತೆ. ಈ ಸುದ್ದಿ ಅಧಿಕೃತವಾಗಿ ಪ್ರಕಟಗೊಂಡ ನಂತರ ಬರಗೂರರು 'ತಾಯಿ'ಯೊಂದಿಗೆ ರಾಜ್ಯವನ್ನು ಸುತ್ತಾಡಲು ಶುರುಮಾಡಿದರೆ ಯಾರೂ ಅಚ್ಚರಿ ಪಡಬೇಕಿಲ್ಲ!

ರೇಖಾಳ ಚೈತ್ರಯಾತ್ರಾ!



ಕಣ್ಣಲ್ಲೇ ಕೊಲ್ಲೊ ಕಲಿಗಾರ್ತಿ ಮತ್ತೆ ನಿಮ್ಮೆದುರು ಬರುತ್ತಿದ್ದಾಳೆ. ಈಕೆ ನಿತ್ಯ ಕಾಡುವ ರೇಖಾ ಎಂಬ ಚಾಂದನಿ! ಹೌದು, ಗೌತಮ್ ಘೋಷ್‌ರವರ 'ಯಾತ್ರಾ' ರೆಡಿಯಾಗಿದೆ.

ನಾನಾ ಪಾಟೇಕರ್, ರೇಖಾ, ದೀಪ್ತಿ ನವಲ್ ನಟಿಸಿದ 'ಯಾತ್ರಾ' ಈಗಾಗಲೇ ಸಾಕಷ್ಟು ಕುತೂಹಲ ಹುಟ್ಟಿಸಿದೆ.

ಗೌತಮ್ ಘೋಷ್ ಹೇಳುವ ಪ್ರಕಾರ ರೇಖಾ, ನಾನಾ ಪಾಟೇಕರ್ ಮಧ್ಯದ ಕೆಮಿಸ್ಟ್ರಿ ಪರ್‌ಫೆಕ್ಟ್ ಆಗಿದೆಯಂತೆ. ಯಾವಾಗ ರೇಖಾ ಈ ಹೊಸ ಚೈತ್ರ'ಯಾತ್ರಾ' ಶುರು ಮಾಡ್ತಾಳೆ ಅಂತಾ ಕಾಯೋ ಹಂಗಾಗಿದೆ.

ಗೌತಮ್ ಘೋಷ್‌ನ 'ಪಾರ್' ಚಿತ್ರ ನೆನಪುಂಟಲ್ಲ... ಬಸುರಿ ಶಬಾನಾ ಅಜ್ಮಿ ಮತ್ತು ನಸೀರುದ್ದೀನ್ ಷಾ ಪ್ರವಾಹಭರಿತ ನದಿಯನ್ನು ದಾಟುವ ದೃಶ್ಯ ಅದೆಷ್ಟು ನ್ಯಾಚುರಲ್ ಆಗಿತ್ತಲ್ವಾ? ಅಲ್ಲಿ ಎಲ್ಲವೂ ನ್ಯಾಚುರಲ್-ಶಬಾನಾ ನಿಜವಾಗಿ ಬಸುರಿ ಆಗಿರಲಿಲ್ಲ ಎಂಬುದನ್ನು ಬಿಟ್ಟು.

ಈಗ ಘೋಷ್ ನಿಮ್ಮ ಮುಂದೆ ರೇಖಾಳನ್ನು ತರುತ್ತಿದ್ದಾರೆ. ಕಣ್ಣಲ್ಲಿ ಕೊಲ್ಲೊ ಚೆಲುವಿಯ ನೋಡಲು ರೆಡಿಯಾಗಿ!

'ಲಂಕೇಶ್' ಪ್ರಶಸ್ತಿ ವಿಜೇತ ಸಿನಿಮಾಗೆ ರಾಷ್ಟ್ರ ಪ್ರಶಸ್ತಿ!



2006ನೇ ಸಾಲಿನ 'ಲಂಕೇಶ್ ಚಿತ್ರ ಪ್ರಶಸ್ತಿ' ಪಡೆದ 'ಹರ್ಬರ್ಟ್' ಸಿನಿಮಾಗೆ ಅತ್ಯುತ್ತಮ ಬೆಂಗಾಲಿ ಚಿತ್ರ ಎಂಬ ರಾಷ್ಟ್ರ ಪ್ರಶಸ್ತಿ ಲಭಿಸಿದೆ. ನಿಮಗೆಲ್ಲ ಗೊತ್ತಿರುವಂತೆ, ಕಳೆದ ಮಾರ್ಚ್ 8 ರಂದು (ಲಂಕೇಶರ 71ನೇ ಹುಟ್ಟುಹಬ್ಬ) ಅದರ ನಿರ್ದೇಶಕ ಸುಮನ್ ಮುಖೋಪಾಧ್ಯಾಯರವರಿಗೆ ನಾವು ಲಂಕೇಶರ ಹೆಸರಿನಲ್ಲಿ ಸ್ಥಾಪಿಸಿರುವ ಚೊಚ್ಚಲ ನಿರ್ದೇಶಕ ಪ್ರಶಸ್ತಿ ನೀಡಿ ಗೌರವಿಸಿದ್ದೆವು.

ಈಗ, ಆ ಸಿನಿಮಾಗೆ ರಾಷ್ಟ್ರ ಪ್ರಶಸ್ತಿ ಲಭಿಸಿರುವುದು ನಮಗೆ ತುಂಬಾ ಸಂತೋಷ ತಂದಿದೆ.

ಅಂದಹಾಗೆ ಇದಕ್ಕೆ ಅತ್ಯುತ್ತಮ ಬೆಂಗಾಲಿ ಸಿನಿಮಾ ಪ್ರಶಸ್ತಿ ಮಾತ್ರವಲ್ಲ, ಈ ಸಾಲಿನ ಅತ್ಯುತ್ತಮ ಚೊಚ್ಚಲ ನಿರ್ದೇಶಕ ಪ್ರಶಸ್ತಿಯನ್ನೂ ನೀಡಬೇಕೆಂದು ರಾಷ್ಟ್ರ ಪ್ರಶಸ್ತಿ ಆಯ್ಕೆ ಸಮಿತಿಯ ಸದಸ್ಯೆ ಶ್ಯಾಮಿಲಿ ಬ್ಯಾನರ್ಜಿ ಎಂಬುವವರು ತಕರಾರು ಎತ್ತಿದ್ದಾರೆ. ಏಕೆಂದರೆ ಅವರ ಪ್ರಕಾರ 'ಹರ್ಬರ್ಟ್' ಚಿತ್ರಕ್ಕೆ ನೀಡಬೇಕಿದ್ದ ಪ್ರಶಸ್ತಿಯನ್ನು ಯಾವುದೋ ಒತ್ತಡಕ್ಕೆ ಮಣಿದು 'ಪರಿಣಿತ' ಎಂಬ ಸಿನಿಮಾಗೆ ನೀಡಿಲಾಗಿದೆ.

ಅವರು ಹೇಳುತ್ತಿರುವುದು ನಿಜ. ಏಕೆಂದರೆ ನಾವು 'ಲಂಕೇಶ್ ಪ್ರಶಸ್ತಿ' ನೀಡಲು ಆಹ್ವಾನಿಸಿದ್ದ ಚೊಚ್ಚಲ ನಿರ್ದೇಶಕರ ಸಿನಿಮಾಗಳಲ್ಲಿ 'ಪರಿಣಿತ'ವೂ ಒಂದಾಗಿತ್ತು. ಆದರೆ ನಮ್ಮ ಆಯ್ಕೆ ಸಮಿತಿಯ ಸದಸ್ಯರು 'ಪರಿಣಿತ' ಗಿಂತ 'ಹರ್ಬರ್ಟ್' ಹತ್ತು ಪಟ್ಟು ಉತ್ತಮ ಎಂದು ನಿರ್ಧರಿಸಿ ಸುಮನ್ ಮುಖೋಪಾಧ್ಯಾಯರವರಿಗೇ ಪ್ರಶಸ್ತಿ ಕೊಡಬೇಕೆಂದು ನಿರ್ಧರಿಸಿದ್ದರು.

ಒಂದು ಸ್ವತಂತ್ರ ಸಮಿತಿಗೂ, ಸರಕಾರ ನೇಮಿಸುವ ಸಮಿತಿಗೂ ಎಷ್ಟು ವ್ಯತ್ಯಾಸ ಇರುತ್ತದೆಂಬುದಕ್ಕೆ ಇಷ್ಟು ಸಾಕ್ಷಿ ಸಾಕಲ್ಲವೇ?

ರಾಷ್ಟ್ರ ಪ್ರಶಸ್ತಿಗಳ ಸುತ್ತ.....



ಕಳೆದ ಒಂದೆರಡು ವರ್ಷಗಳಿಂದ ರಾಷ್ಟ್ರ ಪ್ರಶಸ್ತಿಗಳು ಅಪ್ಪಟ ಕಮರ್ಷಿಯಲ್ ಸಿನಿಮಾಗಳಿಗೆ ಲಭಿಸುತ್ತಿರುವುದರಿಂದ ಈ ಬಾರಿಯ ಆಯ್ಕೆ ಮಂಡಳಿ ಎತ್ತ ವಾಲುತ್ತದೊ ಎಂಬ ಕಾತರ ಹಲವರಿಗಿತ್ತು. ಏಕೆಂದರೆ ಈ ವರ್ಷ ಪೈಪೋಟಿಗೆ ಇದ್ದದ್ದು ಬುದ್ಧದೇಬ್ ದಾಸ್‌ಗುಪ್ತ ನಿರ್ದೇಶನದ 'ಕಾಲ್ ಪುರುಷ್' ಎಂಬ ಕಲಾತ್ಮಕ ಸಿನಿಮಾ ಮತ್ತು 'ರಂಗ್ ದೆ ಬಸಂತಿ' ಎಂಬ ಬಾಕ್ಸ್ ಆಫೀಸ್ ಹಿಟ್.

ಆದರೆ ಈಗ ಅನಧಿಕೃತವಾಗಿ ಹೊರ ಬಿದ್ದಿರುವ ಪಟ್ಟಿಯ ಪ್ರಕಾರ, 'ಕಾಲ್ ಪುರುಷ್'ಗೆ ಸ್ವರ್ಣ ಕಮಲ ದಕ್ಕಿದ್ದು 'ರಂಗ್...' ನಿರ್ದೇಶಕ ಅತ್ಯುತ್ತಮ ಜನಪ್ರಿಯ ಸಿನಿಮಾ ಪ್ರಶಸ್ತಿಯಲ್ಲೇ ತೃಪ್ತಿ ಕಾಣಬೇಕಿದೆ.

ಅಂದಹಾಗೆ ಈ ಬಾರಿಯ ಅತ್ಯುತ್ತಮ ನಟ ಪ್ರಶಸ್ತಿ 'ಬ್ಲಾಕ್' ಸಿನಿಮಾಕ್ಕಾಗಿ ಅಮಿತಾಬ್ ಬಚ್ಚನ್‌ರವರಿಗೆ ಸಿಕ್ಕಿದೆಯಂತೆ. ಇದು ಅವರ ಎರಡನೇ ರಾಷ್ಟ್ರ ಪ್ರಶಸ್ತಿ.



ಹಾಗೆಯೇ 'ಪರ್ಝಾನಿಯಾ' ಚಿತ್ರದ ಅಭಿನಯಕ್ಕಾಗಿ ಅತ್ಯುತ್ತಮ ನಟಿ ಪ್ರಶಸ್ತಿಯು ಸಾರಿಕಾಳ ಪಾಲಾಗಿದೆ. ಬಾಲ ನಟಿಯಾಗಿ ಸಿನಿಮಾರಂಗ ಪ್ರವೇಶಿಸಿದ ಸಾರಿಕಾ ಹೀರೋಯಿನ್ ಆಗಿಯೂ ಮಿಂಚಿದ್ದಳು. ಆನಂತರ ಸಿನಿಮಾರಂಗಕ್ಕೆ ಟಾಟಾ ಹೇಳಿ ಕಮಲ್ ಹಾಸನ್‌ರವರನ್ನು ಮದುವೆಯಾಗಿ ಇಬ್ಬರು ಮಕ್ಕಳನ್ನೂ ಪಡೆದಿದ್ದಳು. ಇತ್ತೀಚೆಗೆ ಆಕೆಯ ವೈವಾಹಿಕ ಜೀವನ ಮುರಿದು ಬಿದ್ದು ಆಕೆ ಮತ್ತೆ ಸಿನಿಮಾರಂಗವನ್ನು ಪ್ರವೇಶಿಸಿದ್ದಳು. ಈ ವಯಸ್ಸಿನಲ್ಲಿ ಆಕೆ ಎಂತಹ ಚಿತ್ರಗಳಲ್ಲಿ ನಟಿಸಬಹುದು? ಆಕೆಗೆ ಯಾರು ಪಾತ್ರಗಳನ್ನು ನೀಡಬಹುದು ಎಂದು ಕೆಲವರು ಅಚ್ಚರಿ ಪಟ್ಟಿದ್ದರು.

ಆದರೆ ಸಾರಿಕಾ ಎಲ್ಲರ ಬಾಯಿ ಮುಚ್ಚಿಸುವಂತೆ ತಮ್ಮ ಎರಡನೆ ಇನ್ನಿಂಗ್ಸ್‌ನಲ್ಲಿ ರಾಷ್ಟ್ರ ಪ್ರಶಸ್ತಿಯನ್ನೇ ಗೆದ್ದಿದ್ದಾರೆ. ಕಂಗ್ರಾಟ್ಸ್ ಸಾರಿಕಾ!

'ತುತ್ತೂರಿ'ಗೆ ಪರಿಸರ ಪ್ರಶಸ್ತಿ



ಶಬರಿಮಲೈ ವಿಗ್ರಹ ಸ್ಪರ್ಶ ವಿವಾದದಲ್ಲಿ ರಾಷ್ಟ್ರೀಯ ಸುದ್ದಿ ಮಾಡಿ ಬಸವಳಿದಿದ್ದ ನಟಿ-ನಿರ್ಮಾಪಕಿ ಜಯಮಾಲಾರವರಿಗೆ ಒಂದಿಷ್ಟು ಸಿಹಿ ಸುದ್ದಿ. ಅದೇನೆಂದರೆ, ಅವರು ನಿರ್ಮಿಸಿದ ಮಕ್ಕಳ ಚಿತ್ರ 'ತುತ್ತೂರಿ' ಗೆ ಅತ್ಯುತ್ತಮ ಪರಿಸರ ಸಿನಿಮಾ ಪ್ರಶಸ್ತಿ ಬಂದಿದೆಯಂತೆ. ಸದ್ಯ ಇದೂ ಕೂಡ ಆ ಶಬರಿಮಲೈ ಅಯ್ಯಪ್ಪ ಸ್ವಾಮಿಯ ಸ್ಪರ್ಶದ ಫಲ ಎಂದು ಜಯಮಾಲಾರವರು ಉದ್ಗಾರವೆತ್ತದಿದ್ದರೆ ನಮ್ಮ ಪುಣ್ಯ!

PRINTER, PUBLISHER, PROPRIETOR AND EDITOR : GAURI LANKESH, No. 9, 1st Floor, E.A.T.Street, Basavanagudi, Bangalore -4, Phone : 26676
Fax : 26620026, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-